ಮಾರ್ಚ್ 15, 2026
41ನೇ ವರ್ಷದಲ್ಲಿ
http//policenews.news Police News
police_news
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2028
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-

## ಕೆಪಿಸಿಸಿ ಅಧ್ಯಕ್ಷ ಪದವಿ ತ್ಯಜಿಸೋ ಮುನ್ಸೂಚನೆ!

# ಸ್ಟ್ರೀಟ್ ಫೈಟರ್ ಡಿಕೆ ತಿರುಗಿ ಬಿದ್ರೆ ಜೋಕೆ!!






## ಟೆಲಿಫೋನ್ ಟ್ಯಾಪಿಂಗ್ ಈಗಲೂ ನಡೆಯುತ್ತಿದೆಯೇ?!

## ತಾಯಿಯ ಕಣ್ಣೆದುರೇ ರೌಡಿ ಪವನ್ ಕಗ್ಗೊಲೆ!





## ಶಿವನಹಳ್ಳಿ ದೋಸೆ ಕಾರ್ನರ್‌ನಲ್ಲಿ ಮರ್ಡರ್!

## ಲೋಕಾಯುಕ್ತ ಬಲೆಗೆ ಬಿದ್ದ ಭ್ರಷ್ಟ ಖಾಕಿ!





## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)
**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)
**1985ರಲ್ಲಿ 'ಪೋಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)
**1987ರಲ್ಲಿ 'ಪೋಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)
**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)
**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)
**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)
**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)
**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)
**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)
**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)
**'ಪೋಲೀಸ್ ನ್ಯೂಸ್'**
(ಸಪ್ಲಿಮೆಂಟರಿ)
**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

### ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94
**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)
**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)
**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)
**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)
**'ಕನ್ನಡ ರತ್ನ'-2004**
(ಪೋಲೀಸ್ ಅಸೋಸಿಯೇಷನ್ ಕರ್ನಾಟಕ)
**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)
**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)
**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)
**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# 'ನೇತ್ರಜ್ಯೋತಿ ಐ ಕ್ಯಾಂಪ್' ಹೆಸರಿನಲ್ಲಿ ಗ್ರಾಮೀಣ ಭಾಗದಲ್ಲಿ ಕಣ್ಣಿನ ಆರೋಗ್ಯ ಶಿಬಿರ ಆಯೋಜಿಸಿದ್ದ ಸಂಪಾದಕರು....

'ಪೋಲೀಸ್ ನ್ಯೂಸ್' ವಾರಪತ್ರಿಕೆ ಹಾಗೂ 'ಆದರ್ಶ ಗಂಡ ಹೆಂಡತಿ' ಮಾಸಿಕದ ಸ್ಥಾಪಕ ಸಂಪಾದಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಮಾಧ್ಯಮ ಕ್ಷೇತ್ರದಲ್ಲಿ ಕೇವಲ ಸುದ್ದಿಗಳನ್ನು ಪ್ರಕಟಿಸುವ ವ್ಯಕ್ತಿಯಾಗಿ ಮಾತ್ರವಲ್ಲ, ಸಮಾಜಮುಖಿ ಚಿಂತನೆ ಹೊಂದಿದ ಸಮಾಜ ಸೇವಕರಾಗಿ ಗುರುತಿಸಿಕೊಂಡಿದ್ದರು. ಸಾರ್ವಜನಿಕರಿಗೆ ಕಾನೂನು ತಿಳಿವಳಿಕೆ ನೀಡುವುದು, ಆರೋಗ್ಯ ಜಾಗೃತಿ ಮೂಡಿಸುವುದು ಹಾಗೂ ಗ್ರಾಮೀಣ ಭಾಗದ ಜನರಿಗೆ ಸಹಾಯವಾಗುವಂತಹ ವಿವಿಧ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುವುದು ಅವರ ಪತ್ರಿಕೋದ್ಯಮದ ಪ್ರಮುಖ ಧ್ಯೇಯವಾಗಿತ್ತು. ಅವರು ಶಿವೈಕ್ಯರಾದದ್ದು ಇಪ್ಪತ್ತು ವರ್ಷಗಳಾಗಿದ್ದರೂ, ಅವರ ಆದರ್ಶಗಳು ಹಾಗೂ ಸಮಾಜಸೇವೆಯ ನೆನಪುಗಳು ಇಂದಿಗೂ 'ಪೋಲೀಸ್ ನ್ಯೂಸ್' ಕುಟುಂಬದ ಮನಸ್ಸಿನಲ್ಲಿ ಜೀವಂತವಾಗಿವೆ.




ಪ್ರಸ್ತುತ 'ಪೋಲೀಸ್ ನ್ಯೂಸ್' ಪತ್ರಿಕೆಯ ಜವಾಬ್ದಾರಿಯನ್ನು ಅವರ ಸುಪುತ್ರರಾದ ಶ್ರೀ ಎಂ. ರಾಹುಲ್ ಮಲ್ಲಿಕಾರ್ಜುನಯ್ಯ ಹೊತ್ತುಕೊಂಡು, ತಮ್ಮ ತಂದೆಯವರ ಆದರ್ಶಗಳನ್ನು ಮುಂದುವರೆಸುವ ದಿಸೆಯಲ್ಲಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಪತ್ರಿಕೆಯ ಕಚೇರಿಯಲ್ಲಿ ಹಳೆಯ ದಾಖಲೆಗಳು ಮತ್ತು ಫೈಲ್‌ಗಳನ್ನು ಪರಿಶೀಲಿಸುವಾಗ, ಶ್ರೀ ಮಲ್ಲಿಕಾರ್ಜುನಯ್ಯನವರು ಸಮಾಜದ ಒಳಿತಿಗಾಗಿ ನಡೆಸಿದ ಅನೇಕ ಕಾರ್ಯಕ್ರಮಗಳು ನೆನಪಾಗಿ, ಸಹೋದ್ಯೋಗಿಗಳ ಮನಸ್ಸುಗಳಲ್ಲಿ ಗೌರವ ಮತ್ತು ಭಾವನಾತ್ಮಕ ಕ್ಷಣಗಳನ್ನು ಮೂಡಿಸುತ್ತವೆ.

☞ 3



# ಡ್ರಗ್ಸ್ ಮುಕ್ತ ಕರ್ನಾಟಕಕ್ಕಾಗಿ ಶ್ರಮಿಸುತ್ತಿರುವ ಬೆಂಗಳೂರು ಸಿಸಿಬಿ ಕಾಪ್ಸ್!



ಸಂಪಾದಕ
**ಎಂ. ರಾಹುಲ್**

ಕರ್ನಾಟಕ ರಾಜ್ಯದಲ್ಲಿ ಮಾದಕ ವಸ್ತುಗಳ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಈ ಅಪಾಯಕರ ಸಾಮಾಜಿಕ ದುಷ್ಪ್ರಭಾವವನ್ನು ತಡೆಯಲು ಸರ್ಕಾರ ಮತ್ತು ಸಮಾಜ ಒಟ್ಟಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಹೆಚ್ಚಾಗಿದೆ. ಯುವಜನಾಂಗದ ಭವಿಷ್ಯವನ್ನು ಹಾಳುಮಾಡುವ ಡ್ರಗ್ಸ್ ಸಂಸ್ಕೃತಿಗೆ ಕಡಿವಾಣ ಹಾಕುವ ಉದ್ದೇಶದಿಂದ ರಾಜ್ಯ ಸರ್ಕಾರ 'ಡ್ರಗ್ಸ್‌ಗೆ ಶೂನ್ಯ ಸಹಿಷ್ಣುತೆ' ಎಂಬ ತನ್ನ ದೃಢ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಇದರ ಭಾಗವಾಗಿ ಮಾದಕವಸ್ತುಗಳ ಉತ್ಪಾದನೆ, ಸಾಗಣೆ, ಮಾರಾಟ ಮತ್ತು ಬಳಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ವಿಶೇಷ ಆಂಟಿ ನಾರ್ಕೋಟಿಕ್ಸ್ ಟಾಸ್ಕ್ ಫೋರ್ಸ್ (ANTF) ರಚಿಸಲು ಸರ್ಕಾರ ಮುಂದಾಗಿದೆ. ರಾಜ್ಯದೊಳಗೆ ಮಾತ್ರವಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಕಾರ್ಯನಿರ್ವಹಿಸುತ್ತಿರುವ ಮಾದಕವಸ್ತು ಕಳ್ಳಸಾಗಣೆ ಜಾಲಗಳನ್ನು ಪತ್ತೆಹಚ್ಚಿ ಅವುಗಳನ್ನು ಸಂಪೂರ್ಣವಾಗಿ ನಾಶಪಡಿಸುವ ಉದ್ದೇಶದಿಂದ ಈ ಕಾರ್ಯಪಡೆಗೆ ವಿಶೇಷ ಅಧಿಕಾರಗಳು ಹಾಗೂ ಅಗತ್ಯ ಸಂಪನ್ಮೂಲಗಳನ್ನು ಒದಗಿಸಲಾಗುತ್ತಿದೆ. ಸರ್ಕಾರದ ಈ ಕ್ರಮವು ರಾಜ್ಯದಲ್ಲಿ ಹೆಚ್ಚುತ್ತಿರುವ ಡ್ರಗ್ಸ್ ಸಮಸ್ಯೆಗೆ ಗಂಭೀರವಾಗಿ ಪ್ರತಿಕ್ರಿಯಿಸುವ ಪ್ರಮುಖ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

ಮಾದಕವಸ್ತುಗಳ ವಿರುದ್ಧದ ಹೋರಾಟವನ್ನು ಪರಿಣಾಮಕಾರಿಯಾಗಿ ಮುಂದುವರಿಸಲು ಸರ್ಕಾರ ಸುಮಾರು 10 ಕೋಟಿ ರೂಪಾಯಿಗಳನ್ನು ಕಾರ್ಯಪಡೆಯ ಬಲವರ್ಧನೆಗೆ ಮೀಸಲಿಟ್ಟಿದೆ. ಈ ನಿಧಿಯನ್ನು ಆಧುನಿಕ ತನಿಖಾ ಸಾಧನಗಳ ಖರೀದಿ, ಗುಪ್ತಚರ ವ್ಯವಸ್ಥೆಗಳ ಬಲಪಡಿಕೆ, ತರಬೇತಿ ಪಡೆದ ಸಿಬ್ಬಂದಿ ನೇಮಕಾತಿ ಹಾಗೂ ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಗಳ ಅಭಿವೃದ್ಧಿಗೆ ಬಳಸಲಾಗುತ್ತದೆ. ವಿಶೇಷವಾಗಿ ಬೆಂಗಳೂರಿನಂತಹ ಮಹಾನಗರಗಳಲ್ಲಿ ಡ್ರಗ್ಸ್ ಬಳಕೆ ಮತ್ತು ಪೆಡ್ಲಿಂಗ್ ಹೆಚ್ಚುತ್ತಿರುವ ಹಿನ್ನೆಲೆ, ANTF ತಂಡವು ನಗರ ಪ್ರದೇಶಗಳಲ್ಲಿ ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಸಿದ್ಧವಾಗಿದೆ. ಈ ಘಟಕವು ಮಾದಕವಸ್ತು ಕಾರ್ಟೆಲ್ಗಳನ್ನು ಗುರುತಿಸಿ ಅವುಗಳ ಹಣಕಾಸು ಮೂಲಗಳನ್ನು ಪತ್ತೆಹಚ್ಚಿ, ಅಕ್ರಮ ವ್ಯವಹಾರಗಳಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುವ ನಿರೀಕ್ಷೆಯಿದೆ.

ರಾಜ್ಯ ಪೊಲೀಸ್ ಇಲಾಖೆಯ ಅಂಕಿಅಂಶಗಳು ಸಮಸ್ಯೆಯ ಗಂಭೀರತೆಯನ್ನು ಸ್ಪಷ್ಟಪಡಿಸುತ್ತವೆ. 1985ರ ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟಾನ್ಸ್ (NDPS) ಕಾಯ್ದೆ ಅಡಿಯಲ್ಲಿ ಪ್ರತಿ ವರ್ಷ ಸರಾಸರಿ 6,000ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಕಳೆದ ಕೆಲವು ವರ್ಷಗಳಲ್ಲಿ ಪೊಲೀಸರು ಹಾಗೂ ವಿವಿಧ ತನಿಖಾ ಸಂಸ್ಥೆಗಳು ನಡೆಸಿದ ದಾಳಿಗಳ ಮೂಲಕ ಕೋಟಿ ಕೋಟಿ ರೂಪಾಯಿ ಮೌಲ್ಯದ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. 2025ರಲ್ಲಿ ಮಾತ್ರ ಸುಮಾರು 104 ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್ ರಾಜ್ಯದ ವಿವಿಧ ಭಾಗಗಳಲ್ಲಿ ಪತ್ತೆಯಾಗಿದೆ. ಆದರೆ ಪತ್ತೆಯಾದ ಪ್ರಕರಣಗಳು ಮಾತ್ರವೇ ಇವುಗಳಾಗಿದ್ದು, ಇನ್ನೂ ಅನೇಕ ಅಕ್ರಮ ಚಟುವಟಿಕೆಗಳು ಗಮನಕ್ಕೆ ಬಾರದಿರುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸುತ್ತಿದ್ದಾರೆ.

ಡ್ರಗ್ಸ್ ಸಮಸ್ಯೆ ಸಮಾಜದ ಹೊರಗಡೆ ಮಾತ್ರವಲ್ಲದೆ ಜೈಲುಗಳೊಳಗೂ ಪ್ರವೇಶಿಸಿರುವುದು ಮತ್ತೊಂದು ಸವಾಲಾಗಿದೆ. ಕೆಲವು ಪ್ರಕರಣಗಳಲ್ಲಿ ಬಂಧಿತರು ಜೈಲುಗಳೊಳಗಿಂದಲೇ ಮೊಬೈಲ್ ಫೋನ್‌ಗಳ ಮೂಲಕ ಹೊರಗಿನ ಕಳ್ಳಸಾಗಣೆ ಜಾಲಗಳೊಂದಿಗೆ ಸಂಪರ್ಕ ಸಾಧಿಸುತ್ತಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ 'ಆಪರೇಷನ್ ಪರಿಶುದ್ಧೀಕರಣ' ಎಂಬ ವಿಶೇಷ ಕಾರ್ಯಾಚರಣೆಯನ್ನು ಜಾರಿಗೆ ತರಲು ನಿರ್ಧರಿಸಿದೆ. ಈ ಯೋಜನೆಯಡಿ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಭದ್ರತೆಯನ್ನು ಬಲಪಡಿಸಲು ಅತ್ಯಾಧುನಿಕ ಸ್ಕ್ಯಾನಿಂಗ್ ವ್ಯವಸ್ಥೆಗಳು, ಸಿಸಿಟಿವಿ ಕ್ಯಾಮೆರಾಗಳು ಮತ್ತು ಬಾಡಿವೋರ್ನ್ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ. ಸುಮಾರು 20 ಕೋಟಿ ರೂಪಾಯಿ ವೆಚ್ಚದಲ್ಲಿ ಜೈಲುಗಳೊಳಗಿನ ಚಟುವಟಿಕೆಗಳ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲು ಈ ವ್ಯವಸ್ಥೆಗಳನ್ನು ಸ್ಥಾಪಿಸಲಾಗುತ್ತದೆ.

ಇದರ ಜೊತೆಗೆ ಮಾದಕವಸ್ತು ವ್ಯಸನಕ್ಕೆ ಒಳಗಾದ ಯುವಜನರನ್ನು ಸಮಾಜದ ಮುಖ್ಯ ಪ್ರವಾಹಕ್ಕೆ ಮರಳಿ ತರಲು ಪುನರ್ವಸತಿ ಕ್ರಮಗಳಿಗೂ ಸರ್ಕಾರ ಹೆಚ್ಚಿನ ಮಹತ್ವ ನೀಡುತ್ತಿದೆ. ಬೆಂಗಳೂರು ಮತ್ತು ಧಾರವಾಡದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಸನಿಗಳಿಗೆ ವಿಶೇಷ ಡಿಅಡಿಕ್ಷನ್ ಮತ್ತು ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಈ ಕೇಂದ್ರಗಳಲ್ಲಿ ವೈದ್ಯಕೀಯ ಚಿಕಿತ್ಸೆ, ಮಾನಸಿಕ ಸಲಹೆ, ಪುನರ್ವಸತಿ ಕಾರ್ಯಕ್ರಮಗಳು ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಲಾಗುತ್ತದೆ. ಇದರ ಮೂಲಕ ವ್ಯಸನದಿಂದ ಬಳಲುತ್ತಿರುವ ಯುವಕರನ್ನು ಆರೋಗ್ಯಕರ ಜೀವನದತ್ತ ಮರಳಿ ತರಲು ಸಾಧ್ಯವಾಗುತ್ತದೆ.

ಪೊಲೀಸ್ ಅಧಿಕಾರಿಗಳ ಪ್ರಕಾರ ಸಾರ್ವಜನಿಕರೊಂದಿಗೆ ನಡೆಯುವ ಸಂವಾದ ಕಾರ್ಯಕ್ರಮಗಳಲ್ಲಿ ಡ್ರಗ್ಸ್ ಪೆಡ್ಲರ್ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆ ಹೆಚ್ಚಾಗಿ ಕೇಳಿಬರುತ್ತಿದೆ. ವಿಶೇಷವಾಗಿ ಪೋಷಕರು ತಮ್ಮ ಮಕ್ಕಳನ್ನು ಡ್ರಗ್ಸ್ ಸಂಸ್ಕೃತಿಯಿಂದ ರಕ್ಷಿಸಲು ಸರ್ಕಾರ ಮತ್ತು ಪೊಲೀಸರಿಂದ ಹೆಚ್ಚಿನ ಕ್ರಮಗಳನ್ನು ನಿರೀಕ್ಷಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಉದ್ಯೋಗಿಗಳಲ್ಲಿ ಡ್ರಗ್ಸ್ ಬಳಕೆ ಹೆಚ್ಚುತ್ತಿರುವುದು ಸಮಾಜದಲ್ಲಿ ಆತಂಕವನ್ನು ಉಂಟುಮಾಡಿದೆ.



ಬೆಂಗಳೂರು ನಗರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೈಡ್ರೋಪೋನಿಕ್ ಗಾಂಜಾ (ಹೈಡ್ರೊ ಗಾಂಜಾ) ಬಳಕೆ ಹೆಚ್ಚುತ್ತಿರುವುದು ಪೊಲೀಸರ ಗಮನ ಸೆಳೆದಿದೆ. ಹೈಡ್ರೋಪೋನಿಕ್ ವಿಧಾನದಲ್ಲಿ ಬೆಳೆಯುವ ಈ ಗಾಂಜಾ ಸಾಮಾನ್ಯ ಗಾಂಜಾದಿಗಿಂತ ಹೆಚ್ಚು ಶಕ್ತಿಯುತವಾಗಿದ್ದು ಯುವಕರಲ್ಲಿ ಅದರ ಬೇಡಿಕೆ ಹೆಚ್ಚುತ್ತಿದೆ. ಕಳೆದ 23 ತಿಂಗಳುಗಳಲ್ಲಿ ಸುಮಾರು 220 ಕಿಲೋಗ್ರಾಂ ಹೈಡ್ರೊ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ 100ಕ್ಕೂ ಹೆಚ್ಚು ಡ್ರಗ್ಸ್ ಪೆಡ್ಲರ್ಗಳನ್ನು ಬಂಧಿಸಲಾಗಿದೆ. ತನಿಖೆಯಲ್ಲಿ ಈ ಕಳ್ಳಸಾಗಣೆ ಜಾಲವು ದೇಶೀಯ ಮಟ್ಟದಲ್ಲಷ್ಟೇ ಅಲ್ಲದೆ ಅಂತರರಾಷ್ಟ್ರೀಯ ಸಂಪರ್ಕಗಳನ್ನು ಹೊಂದಿರುವುದೂ ಬಹಿರಂಗವಾಗಿದೆ.

ಬೆಂಗಳೂರು ಮಹಾನಗರಕ್ಕೆ ಶ್ರೀ ಸೀಮಂತ್ ಕುಮಾರ್ ಸಿಂಗ್ ಐಪಿಎಸ್ ಪೊಲೀಸ್ ಕಮೀಷನರ್ ಆಗಿ ಆಗಮಿಸಿದ ಬಳಿಕ ಸಿಸಿಬಿ ಪೊಲೀಸ್ ಅದೆಷ್ಟು ಹೈ ಅಲರ್ಟ್ ಆಗಿದೆ ಎಂದರೆ, ಬೆಂಗಳೂರು ಸಿಟಿಯೊಳಗೆ ಹಾಗೂ ಹೊರವಲಯದಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ಕಡೆ ವಿವಿಧ ನಮೂನೆಯ ಡ್ರಗ್ಸ್ ಸೀಜ್ ಆಗುತ್ತಲೇ ಇದೆ. ಈಗಿನ ಡ್ರಗ್ ಪೆಡ್ಲರ್ಸ್ ಅದೆಷ್ಟೇ ಕಿಲಾಡಿತನ ಬಳಸಿ, ಬೇರೆ ಬೇರೆ ರೂಪದಲ್ಲಿ ಡ್ರಗ್ಸ್ ತಂದರೂ ಅದನ್ನು ತಮ್ಮ ಚಾಣಾಕ್ಷತನದಿಂದ ಪತ್ತೆಹಚ್ಚಿ ಜಪ್ತಿ ಮಾಡಲಾಗುತ್ತಿದೆ. ತೈಲ ರೂಪದಲ್ಲಿ, ಮಾತ್ರೆ ರೂಪದಲ್ಲಿ ಹೈಡ್ರೋ ಗಾಂಜಾ ತಂದರೂ ಸಿಸಿಬಿ ಕಾಪ್ಸ್ ಬಿಡದೇ ಪತ್ತೆಹಚ್ಚುತ್ತಿದೆ. ಅಷ್ಟರಮಟ್ಟಿಗೆ ಹೈ ಅಲರ್ಟ್ ಆಗಿ ಡ್ರಗ್ ಮುಕ್ತ ಕರ್ನಾಟಕದ ಕನಸನ್ನು ನನಸು ಮಾಡಲು ಶ್ರಮಿಸುತ್ತಿದೆ ಸಿಸಿಬಿ ಇಲಾಖೆ. ಈ ಹಿನ್ನೆಲೆಯಲ್ಲಿ ಸಿಸಿಬಿ ಜಾಯಿಂಟ್ ಕಮೀಷನರ್ ಶ್ರೀ ಅಜಯ್ ಹಿಲೋರಿ, ಡಿಸಿಪಿಗಳಾದ ಶ್ರೀಹರಿಬಾಬು, ರಾಜಾ ಇಮಾಮ್ ಖಾಸೀಂ ಹಾಗೂ ನಾರ್ಕೋಟಿಕ್ ಎಸಿಪಿ ಶ್ರೀ ಹೆಚ್.ಕೆ. ಮಹಾನಂದರವರ ಟೀಮ್ ಅನ್ನು ಅಭಿನಂದಿಸಲೇಬೇಕು. ದೇವರ ಪಟದಲ್ಲಿ ಬಣ್ಣ ಬಣ್ಣದಲ್ಲಿ ಬೆಂಗಳೂರು ಸಿಟಿಯೊಳಗೆ ಡ್ರಗ್ಸ್ ತಂದ ಕಿಲಾಡಿಗಳನ್ನು ಬಿಡದೇ ಪತ್ತೆಹಚ್ಚಿ ಬಂಧಿಸಿದ್ದಾರೆ. ಈ ಬೇಟೆ ಇದೇ ರೀತಿ ಮುಂದುವರೆದರೆ ಮುಂದೊಂದು ದಿನ ಬೆಂಗಳೂರು/ಕರ್ನಾಟಕ ಡ್ರಗ್ ಮುಕ್ತ ರಾಜ್ಯವಾಗುವುದರಲ್ಲಿ ಸಂಶಯವೇ ಇಲ್ಲ.

ಡ್ರಗ್ಸ್ ಸಮಸ್ಯೆ ಕೇವಲ ಕಾನೂನು ಸುವ್ಯವಸ್ಥೆಯ ಸಮಸ್ಯೆಯಷ್ಟೇ ಅಲ್ಲದೆ ಸಾಮಾಜಿಕ, ಆರೋಗ್ಯ ಮತ್ತು ಆರ್ಥಿಕ ಸಮಸ್ಯೆಯೂ ಆಗಿದೆ. ಯುವಜನಾಂಗದ ಆರೋಗ್ಯ, ಕುಟುಂಬಗಳ ಭವಿಷ್ಯ ಹಾಗೂ ಸಮಾಜದ ಸ್ಥಿರತೆಗೆ ಇದು ದೊಡ್ಡ ಅಪಾಯವಾಗಿದೆ. ಆದ್ದರಿಂದ ಸರ್ಕಾರ, ಪೊಲೀಸ್ ಇಲಾಖೆ, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು ಒಟ್ಟಾಗಿ ಕಾರ್ಯನಿರ್ವಹಿಸುವುದು ಅತ್ಯಗತ್ಯವಾಗಿದೆ. ಕಟ್ಟುನಿಟ್ಟಿನ ಕಾನೂನು ಕ್ರಮಗಳ ಜೊತೆಗೆ ಜಾಗೃತಿ ಕಾರ್ಯಕ್ರಮಗಳು, ಪುನರ್ವಸತಿ ಯೋಜನೆಗಳು ಹಾಗೂ ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಗಳ ಮೂಲಕ ಮಾದಕವಸ್ತುಗಳ ವಿರುದ್ಧ ಸಮಗ್ರ ಹೋರಾಟ ಮುಂದುವರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಡ್ರಗ್ಸ್ ಮುಕ್ತ ಸಮಾಜಕ್ಕಾಗಿ ಶ್ರಮಿಸುತ್ತಿರುವ ಪೊಲೀಸರಿಗೆ ನಾವು ಸಾರ್ವಜನಿಕರೂ ಕೂಡ ಸಾಥ್ ನೀಡಬೇಕಿರುವುದು ಇಂದಿನ ಅಗತ್ಯವಾಗಿದೆ.

-ಸಂ.

2 ☞

ಅಂತಹ ಸೇವಾ ಕಾರ್ಯಗಳಲ್ಲಿ 1998ರಲ್ಲಿ ನಡೆದ 'ನೇತ್ರ ಜ್ಯೋತಿ' ಎಂಬ ಕಣ್ಣಿನ ಆರೋಗ್ಯ ಶಿಬಿರ ವಿಶೇಷವಾಗಿ ಸ್ಮರಣೀಯವಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಕಣ್ಣಿನ ಚಿಕಿತ್ಸಾ ಸೌಲಭ್ಯ ಒದಗಿಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿತ್ತು. ಬೆಂಗಳೂರು ವೆಸ್ಟ್ ಲಯನ್ಸ್ ಕಣ್ಣಿನ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಬಿ.ಎಲ್.ಎಸ್. ಮೂರ್ತಿ ಅವರ ಸಹಕಾರದೊಂದಿಗೆ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಅಭಿಮಾನಿ ಪ್ರಕಾಶನದ ಶ್ರೀ ಟಿ. ವೆಂಕಟೇಶ್ (ಈ ಸಂಜೆ) ಅವರು ಕೂಡ ಉಪಸ್ಥಿತರಿದ್ದರು.

ಆ ಶಿಬಿರದಲ್ಲಿ ಸುಮಾರು 50 ಮಂದಿ ದೃಷ್ಟಿಹೀನರು ಮತ್ತು ಕಣ್ಣಿನ ತೊಂದರೆಗಳಿಂದ ಬಳಲುತ್ತಿದ್ದ ಜನರಿಗೆ ವಿವಿಧ ರೀತಿಯ ಕಣ್ಣಿನ ಪರೀಕ್ಷೆಗಳನ್ನು ನಡೆಸಿ, ಅಗತ್ಯ ಚಿಕಿತ್ಸೆಗೆ ಮಾರ್ಗದರ್ಶನ ನೀಡಲಾಯಿತು. ಗ್ರಾಮೀಣ ಪ್ರದೇಶದ ಅನೇಕ ಜನರಿಗೆ ಈ ಶಿಬಿರದಿಂದ ಪ್ರಯೋಜನವಾಗಿದ್ದು, ಅವರಿಗೆ ಹೊಸ ಆಶೆಯ ಕಿರಣ ಮೂಡಿಸಿತು.

ಇಂದಿನ ಕಾಲದಲ್ಲಿ ಕೆಲವರು ಪತ್ರಿಕೋದ್ಯಮವನ್ನು ಕೇವಲ ಆರ್ಥಿಕ ಲಾಭದ ದೃಷ್ಟಿಯಿಂದ ನೋಡುವ ಪ್ರವೃತ್ತಿ ಹೆಚ್ಚುತ್ತಿರುವಾಗ, ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಪತ್ರಿಕೋದ್ಯಮವನ್ನು ಒಂದು ಸಾಮಾಜಿಕ ಜವಾಬ್ದಾರಿಯಾಗಿ ಕಂಡು ಸಮಾಜ ಸೇವೆಗೆ ಮೊದಲ ಆದ್ಯತೆ ನೀಡಿದ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಅದೇ ಆದರ್ಶದ ಹಾದಿಯಲ್ಲಿ 'ಪೊಲೀಸ್ ನ್ಯೂಸ್' ತಂಡ ಇಂದು ಕೂಡ ಸಮಾಜಮುಖಿ ಕಾರ್ಯಗಳನ್ನು ಮುಂದುವರೆಸುತ್ತಿದ್ದು, ಅವರ ನೆನಪಿಗೆ ಇದು ನಿಜವಾದ ಗೌರವವಾಗಿದೆ.

ಇಂತಹ ಮಹನೀಯರ ಸ್ಮರಣೆ ಕೇವಲ ಭೂತಕಾಲದ ನೆನಪುಗಳಾಗಿ ಉಳಿಯಬಾರದು ಎಂಬುದು 'ಪೊಲೀಸ್ ನ್ಯೂಸ್' ಕುಟುಂಬದ ಆಶಯವಾಗಿದೆ. ಸಮಾಜದ ಒಳಿತಿಗಾಗಿ ಮಾಧ್ಯಮವು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದಕ್ಕೆ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರ ಬದುಕೇ ಒಂದು ಮಾದರಿಯಾಗಿದೆ. ಅವರ ಆದರ್ಶಗಳು ಮುಂದಿನ ಪೀಳಿಗೆಯ ಪತ್ರಕರ್ತರಿಗೆ ಪ್ರೇರಣೆಯಾಗಲಿ ಎಂಬ ಸಂಕಲ್ಪದೊಂದಿಗೆ, ಸಮಾಜಮುಖಿ ಕಾರ್ಯಕ್ರಮಗಳನ್ನು ಮುಂದುವರೆಸುವ ದಿಶೆಯಲ್ಲಿ 'ಪೊಲೀಸ್ ನ್ಯೂಸ್' ಬಳಗ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.

# ತಾಯಿಯ ಕಣ್ಣೆದುರೇ ರೌಡಿಶೀಟರ್ ಪವನ್ ಮರ್ಡರ್!


ರೌಡಿಸಂ ಬಿಟ್ಟು ಬೇಕರಿ ಇಟ್ಟುಕೊಂಡಿದ್ದ

ಬೆಂಗಳೂರು

✍ ಹೆಚ್.ಕೆ. ಮಹದೇವ್

ಫೆಬ್ರವರಿ 27, 2026. ಸಮಯ ರಾತ್ರಿ 9:50. ಸಿಲಿಕಾನ್ ಸಿಟಿಯ ಸಂಪಿಗೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಂದು ಆವರಿಸಿದ್ದು ಮಾಮೂಲಿ ನೀರವತೆಯಲ್ಲ, ಬದಲಾಗಿ ಒಂದು ಭೀಕರ ರಕ್ತಪಾತಕ್ಕೆ ಸಿದ್ಧವಾಗಿದ್ದ ಮೌನ. 23 ವರ್ಷದ ಯುವಕ ಪವನ್ ಕುಮಾರ್ ತನ್ನ ಸ್ನೇಹಿತನೊಂದಿಗೆ ಡಿಯೋ ಬೈಕ್‌ನಲ್ಲಿ ಬಂದು ಮನೆಯ ಗೇಟ್ ಹತ್ತಿರ ನಿಂತಾಗ, ಸಾವು ಹೆಲ್ಮೆಟ್ ಧರಿಸಿ ಬೈಕ್‌ನಲ್ಲಿ ಹೊಂಚು ಹಾಕುತ್ತಿರುತ್ತದೆ ಎಂದು ಆತ ಕನಸಿನಲ್ಲೂ ಊಹಿಸಿರಲಿಲ್ಲ. ಕ್ಷಣಾರ್ಧದಲ್ಲಿ ಮಚ್ಚುಗಳು ಮಿನುಗಿದವು, ತಾಯಿಯ ಆಕ್ರಂದನದ ನಡುವೆಯೇ ರೌಡಿಶೀಟರ್ ಪವನ್ ಹೆಣವಾದ. ಒಬ್ಬ ತನಿಖಾ ಪತ್ರಕರ್ತನಾಗಿ ನಾನು ಕಂಡಂತೆ, ಈ ಘಟನೆಯು ಕೇವಲ ಒಂದು ಕೊಲೆಯಲ್ಲ; ಇದು ಬೆಂಗಳೂರಿನ ಭೂಗತ ಲೋಕದ ಕ್ರೂರತೆ ಮತ್ತು ಅಲ್ಲಿನ ಅಲಿಖಿತ ನಿಯಮಗಳನ್ನು ಸಾರುವ ಒಂದು ಎಚ್ಚರಿಕೆಯ ಗಂಟೆ.



ಡಿಸಿಪಿ ಮಿಥುನ್‌ಕುಮಾರ್

**ರೌಡಿ ಲೋಕದ ಅಲಿಖಿತ ನಿಯಮ ರಕ್ತಕ್ಕೆ ರಕ್ತ...**

ಅಪರಾಧ ಲೋಕದಲ್ಲಿ ಕ್ಷಮೆ ಎಂಬ ಪದಕ್ಕೆ ಜಾಗವಿಲ್ಲ. 2023ರಲ್ಲಿ ನಡೆದ ರೌಡಿಶೀಟರ್ ಕಪಿಲ್ ಹತ್ಯೆ ಪ್ರಕರಣದಲ್ಲಿ ಈಗ ಕೊಲೆಯಾಗಿರೋ ಪವನ್ ಕುಮಾರ್ ಐದನೇ ಆರೋಪಿಯಾಗಿದ್ದ. ಆ ಕೊಲೆ ನಡೆದ ಮೂರು ವರ್ಷಗಳ ನಂತರವೂ ಸೇಡಿನ ಕಿಚ್ಚು ಆರಿರಲಿಲ್ಲ ಎಂಬುದಕ್ಕೆ ಈ ಸೇಡಿನ ಹತ್ಯೆಯೇ ಸಾಕ್ಷಿ. ಕಪಿಲ್‌ನ ತಮ್ಮ ಪ್ರೇಮ್ ಮತ್ತು ತಂಡವು ಸರಿಯಾದ ಸಮಯಕ್ಕಾಗಿ ಕಾದು ಈ ಸ್ಕೆಚ್ ಹಾಕಿದೆ. ಇಲ್ಲಿ ಕಾನೂನಿಗಿಂತಲೂ 'ಸೇಡು' ಎಂಬ ಅಲಿಖಿತ ನಿಯಮವೇ ಬಲವಾಗಿರುತ್ತದೆ. 'ರಕ್ತ ಕೈಗಂಟಿಸ್ಕೊಂಡು ಮಚ್ಚು ಹಿಡಿದವರೆಲ್ಲಾ ಅದೇ ಮಚ್ಚಿನಿಂದ್ಲೇ ಮಣ್ಣಾಗ್ತಾರೆ' ಅನ್ನೋ ಮಾತು ಸತ್ಯವಾಗಿದೆ. ಭೂಗತ ಲೋಕವನ್ನೇ ನಡುಗಿಸ್ತೀನಿ ಅಂತ ಬಂದವರೆಲ್ಲಾ ಕೊನೆಗೆ ಮಣ್ಣಲ್ಲಿ ಮುಚ್ಚಿಹೋಗಿದ್ದಾರೆ.



ಆರೋಪಿ ರಂಜಿತ್ ಕಾಲಿಗೆ ಫೈರಿಂಗ್!


ಹೆತ್ತತಾಯಿ ಕಣ್ಣೆದುರೇ ಕೊಲೆಯಾದ ರೌಡಿ ಪವನ್

**ಒಬ್ಬ ರೌಡಿಶೀಟರ್ ಸಮಾಜದ ಕಣ್ಣಿಗೆ ಅಪರಾಧಿಯಾಗಿರಬಹುದು, ಆದರೆ ಹೆತ್ತವರಿಗೆ ಆತ ಹೇಗಿದ್ದರೂ ಮಗನೇ. ಹಂತಕರು ಪವನ್‌ನನ್ನು ಅಟ್ಟಾಡಿಸಿ ಕೊಚ್ಚುವಾಗ ಆತನ ತಾಯಿ ಅಡ್ಡಬಂದರೂ ಬಿಡಲಿಲ್ಲ.ಸಾಯಿಸಬೇಡಿ ಕನ್ರಪ್ಪ.. ನಿಮ್ ಕಾಲಿಗೆ ಬೀಳ್ತೀನಿ ಬುಟ್ ಬಡ್ರಪ್ಪೋ... ಅಂತ ಆ ತಾಯಿ ಕೈ ಮುಗಿದು ಬೇಡಿಕೊಂಡರು ಬಿಡದೆ ಅವರ ಮೇಲೂ ಹಲ್ಲೆ ನಡೆಸಲಾಗಿದೆ. 'ನನ್ನ ಕಣ್ಣ ಎದುರೇ ಮಗನನ್ನು ಕೊಲೆ ಮಾಡಿಬಿಟ್ಟರು ಸ್ವಾಮಿ' ಎಂದು ಆ ತಾಯಿ ಗೋಳಾಡುತ್ತಿರುವುದು ಇಡೀ ವ್ಯವಸ್ಥೆಗೆ ಬಡಿದ ಆಘಾತವಲ್ಲದೆ ಮತ್ತೇನು.**


ಸಿಸಿ ಕ್ಯಾಮರಾದಲ್ಲಿ ಸೆರೆ ಆಗಿರೋ ಕೊಲೆ ದೃಶ್ಯ

**ಭೌಗೋಳಿಕ ಅಂತರವು ಸೇಡಿನ ಹಸಿವನ್ನು ಅಳಿಸಲಾರದು...**

ಪವನ್ ಕುಮಾರ್ ಜೈಲಿನಿಂದ ಜಾಮೀನು ಪಡೆದು ಬಂದಾಗ, ಆತನ ತಾಯಿ ಮಗನಿಗೆ ಬುದ್ದಿ ಹೇಳಿ ಅವನನ್ನು ಸತ್ಪ್ರಜೆಯನ್ನಾಗಿಸಿ ಉಳಿಸಿಕೊಳ್ಳಲು ಹೆಣಗಾಡಿದ್ದರು. ಬೆಂಗಳೂರಿನಲ್ಲಿಯೇ ಇದ್ದರೆ ಅಪಾಯವೆಂದು ಆತನನ್ನು ತನ್ನ ಸ್ವಂತ ಊರಿಗೆ ಕಳುಹಿಸಿದ್ದರು. ಆದರೆ, ಎಷ್ಟು ದಿನ ಅಂತ ಅಲ್ಲಿ ಇರೋದು? ಎಂಬ ಪ್ರಶ್ನೆ ಆತನನ್ನು ಮತ್ತೆ ಬೆಂಗಳೂರಿಗೆ ವಾಪಸ್ ಎಳೆತಂದಿತ್ತು. ನಗರದ ಗಡಿಯಿಂದ ದೂರ ಹೋದರೂ, ಹಳೆಯ ಶತ್ರುಗಳ ಕಣ್ಣುಗಳು ನಿಮ್ಮನ್ನು ಹಿಂಬಾಲಿಸುತ್ತಲೇ ಇರುತ್ತವೆಎಂಬುದು ಸುಳ್ಳಲ್ಲ. ಬೆಂಗಳೂರು ಬಿಡಿಸಿ ದೂರದ ಊರಿಗೆ ಕಳುಹಿಸಿ ಸುರಕ್ಷಿತವಾಗಿಡಬಹುದು ಎಂಬ ಪೋಷಕರ ಭರವಸೆ ಇಲ್ಲಿ ಸುಳ್ಳಾಗಿದೆ. ಮಸಣದ ಹಾದಿ ಹಿಡಿದ ಮೇಲೆ ಅಲ್ಲಿಂದ ಮರಳುವುದು ಅಷ್ಟು ಸುಲಭವಲ್ಲ.

**ಬದಲಾಗುವ ಪ್ರಯತ್ನ ಮತ್ತು ಬೆನ್ನಟ್ಟುವ ಹಳೆಯ ಪಾಪಗಳು**

ರೌಡಿ ಶೀಟರ್ ಪವನ್ ಕುಮಾರ್ ಅಪರಾಧ ಲೋಕದಿಂದ ಹೊರಬಂದು ಯಲಹಂಕದ ರಾಜಾನುಕುಂಟೆ ಯಲ್ಲಿ ಬೇಕರಿ ಇಟ್ಟುಕೊಂಡು ಹೊಸ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಿದ್ದ. ಅಷ್ಟೇ ಅಲ್ಲ, ತನ್ನ ಮೇಲೆ ಹಳೆಯ ನೆರಳು ಬೀಳಬಾರದೆಂದು ಮನೆ ಖಾಲಿ ಮಾಡಲು ನಿರ್ಧರಿಸಿದ್ದ. ಇದು ಅಪರಾಧ ಲೋಕದ ಅತ್ಯಂತ ಕ್ರೂರ ವಾಸ್ತವ.

'ನೀವು ಬದಲಾಗಲು ಬಯಸಿದರೂ, ನಿಮ್ಮ ಹಳೆಯ ಪಾಪಗಳು ನಿಮ್ಮನ್ನು ಬಿಡುವುದಿಲ್ಲ' ಹಾಗೇ ಬೇಕರಿ ನಡೆಸುತ್ತಾ ಸಾಮಾನ್ಯ ಜೀವನ ನಡೆಸಲು ಮುಂದಾಗಿದ್ದ ಪವನ್‌ನನ್ನು ಅವನ ಭೂತಕಾಲವು ಮೃತ್ಯುವಿನ ರೂಪದಲ್ಲಿ ಬಂದು ಮುಗಿಸಿತು. ಭೂಗತ ಲೋಕದ ಒಳಕ್ಕೆ ಹೋಗುವ ದಾರಿ ಹೂವಿನ ಹಾಸಿಗೆಯಂತೆ ಕಂಡರೂ, ಹೊರಬರುವ ದಾರಿ ಮಾತ್ರ ಮುಳ್ಳಿನಿಂದ ಕೂಡಿರುತ್ತದೆ.

**ಕುಟುಂಬದ ಮೇಲೆ ಬೀರುವ ಭೀಕರ ಮಾನಸಿಕ ಪೆಟ್ಟು...**


ತಾಯಿಯ ರೋಧನ

ಒಬ್ಬ ರೌಡಿಶೀಟರ್ ಸಮಾಜದ ಕಣ್ಣಿಗೆ ಅಪರಾಧಿಯಾಗಿರಬಹುದು, ಆದರೆ ಹೆತ್ತವರಿಗೆ ಆತ ಹೇಗಿದ್ದರೂ ಮಗನೇ. ಹಂತಕರು ಪವನ್‌ನನ್ನು ಅಟ್ಟಾಡಿಸಿ ಕೊಚ್ಚುವಾಗ ಆತನ ತಾಯಿ ಅಡ್ಡಬಂದರೂ ಬಿಡಲಿಲ್ಲ.ಸಾಯಿಸಬೇಡಿ ಕನ್ರಪ್ಪ.. ನಿಮ್ ಕಾಲಿಗೆ ಬೀಳ್ತೀನಿ ಬುಟ್ ಬಡ್ರಪ್ಪೋ... ಅಂತ ಆ ತಾಯಿ ಕೈ ಮುಗಿದು ಬೇಡಿಕೊಂಡರು ಬಿಡದೆ ಅವರ ಮೇಲೂ ಹಲ್ಲೆ ನಡೆಸಲಾಗಿದೆ. 'ನನ್ನ ಕಣ್ಣ ಎದುರೇ ಮಗನನ್ನು ಕೊಲೆ ಮಾಡಿಬಿಟ್ಟರು ಸ್ವಾಮಿ' ಎಂದು ಆ ತಾಯಿ ಗೋಳಾಡುತ್ತಿರುವುದು ಇಡೀ ವ್ಯವಸ್ಥೆಗೆ ಬಡಿದ ಆಘಾತವಲ್ಲದೆ ಮತ್ತೇನು. ಹಂತಕರು ಹೆಲ್ಮೆಟ್ ಧರಿಸಿ, ವ್ಯವಸ್ಥಿತವಾಗಿ ಪ್ಲಾನ್ ಮಾಡಿ ಬಂದು, ತಂದೆತಾಯಿಯ ಕಣ್ಣೆದುರೇ ಮಗನನ್ನು ರಕ್ತದ ಮಡುವಿನಲ್ಲಿ ತಳ್ಳಿದ್ದು ಅವರ ಕ್ರೂರ ಮನಸ್ಥಿತಿಯನ್ನು ತೋರಿಸುತ್ತದೆ. ಅಪರಾಧದ ಹಾದಿ ಹಿಡಿದವನು ತನ್ನನ್ನು ಮಾತ್ರವಲ್ಲ, ತನ್ನ ಇಡೀ ಕುಟುಂಬವನ್ನೂ ಜೀವಂತ ಶವವನ್ನಾಗಿ ಮಾಡುತ್ತಾನೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಿಲ್ಲ. ಈ ಬರ್ಬರ ಹತ್ಯೆಯ ಬೆನ್ನಲ್ಲೇ ಈಶಾನ್ಯ ವಿಭಾಗದ ಡಿಸಿಪಿ ಮಿಥುನ್‌ಕುಮಾರ್ ಅವರ ನೇತೃತ್ವದಲ್ಲಿ ಪೊಲೀಸರು ಚುರುಕಿನ ಕಾರ್ಯಾಚರಣೆ ನಡೆಸಿ ಆರೋಪಿಗಳ ಪತ್ತೆಗೆ ನಾಲ್ಕು ಪ್ರತ್ಯೇಕ ತಂಡಗಳನ್ನು ರಚಿಸಿದ್ದರು.


ಘಟನೆ ವಿವರಿಸುತ್ತಿರೋ ಗೆಳೆಯ

ಕಪಿಲ್‌ನ ತಮ್ಮ ಪ್ರೇಮ್, ಹೊರಮಾವು ರಂಜಿತ್, ಕುಳ್ಳ ರಂಜಿತ್ ಮತ್ತು ಲೋಹಿತ್ ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಸಂಪಿಗೇಹಳ್ಳಿ ಪೊಲೀಸರು ಹಂತಕರಿಗಾಗಿ ಬೇಟೆ ಆಡುತ್ತಿದ್ದರು. ಗುರುತು ಸಿಗದಂತೆ ಹೆಲ್ಮೆಟ್ ಧರಿಸಿ ಬಂದಿದ್ದರೂ, ತನಿಖಾ ತಂಡಗಳಿಗೆ ಮಹತ್ವದ ಸುಳಿವು ಲಭ್ಯವಾಗಿದ್ದು ಕಡೆಗೂ ಆರೋಪಿಗಳ ಅಡಗು ತಾಣವನ್ನು ಪತ್ತೆ ಹಚ್ಚಿ ಮೇನ್ ಲೀಡರ್ ರೌಡಿ ರಂಜಿತ್ ತೊಡೆಗೆ ಗುಂಡು ಹೊಡೆದು ಬಂಧಿಸಲಾಗಿದೆ.


ಇದೇ ಜಾಗದಲ್ಲಿ ಮರ್ಡರ್ ಆಗಿದ್ದು

**ಅಂತಿಮವಾಗಿ....**

ಪವನ್ ಕುಮಾರ್‌ನ ಈ ರಕ್ತಸಿಕ್ತ ಅಂತ್ಯವು ಇಂದಿನ ಯುವ ಪೀಳಿಗೆಗೆ ಒಂದು ಕಟು ಎಚ್ಚರಿಕೆ. ಕ್ಷಣಿಕ ಆವೇಶ, ಹಣ ಅಥವಾ ಡಾನ್ ಆಗಬೇಕೆಂಬ ಹುಚ್ಚು ಹಂಬಲ ಕೊನೆಗೆ ತಲುಪುವುದು ಸ್ಮಶಾನಕ್ಕೆ ಮಾತ್ರ. ಬೆಂಗಳೂರಿನ ಹೊರವಲಯದ ರಸ್ತೆಗಳಲ್ಲಿ ಕಾನೂನಿಗಿಂತ ಮಚ್ಚಿನ ಸದ್ದೇ ಹೆಚ್ಚಾದಾಗ ಇಂತಹ ದುರಂತಗಳು ಸಂಭವಿಸುತ್ತಲೇ ಇರುತ್ತವೆ.

ಇಲ್ಲಿರುವ ಪ್ರಶ್ನೆ ಸರಳವಾಗಿದೆ: ಒಮ್ಮೆ ರಕ್ತದ ಕಲೆ ಅಂಟಿಸಿಕೊಂಡ ಮೇಲೆ, ಅದರಿಂದ ಸಂಪೂರ್ಣವಾಗಿ ಮುಕ್ತಿ ಪಡೆಯಲು ಸಾಧ್ಯವೇ? ಅಥವಾ ಭೂಗತ ಲೋಕದ ಹಾದಿ ಕೇವಲ ಮಸಣಕ್ಕೆ ಮಾತ್ರ ಅಂತ್ಯವಾಗುತ್ತದೆಯೇ? ಈ ಪ್ರಶ್ನೆಗೆ ಪವನ್ ಕುಮಾರ್‌ನ ದುರ್ಮರಣವೇ ಉತ್ತರ ನೀಡುತ್ತಿದೆ...

# ಫಲಿಸುತ್ತಾ ಕೈಕಮಾಂಡ್‌ನ ಕಾದು ನೋಡುವ ತಂತ್ರ?

ಕಾಂಗ್ರೆಸ್ ಹೈಕಮಾಂಡ್‌ನ ಕಾದು ನೋಡುವ ತಂತ್ರ ಮುಂದುವರೆದಿದೆ. ಹೀಗಾಗಿಯೇ ಸಿಎಂ ಅಧಿಕಾರ ಹಸ್ತಾಂತರದ ವಿಚಾರದಲ್ಲಿನ ಗೊಂದಲವೂ ಮುಂದುವರೆದಿದೆ ಹೈಕಮಾಂಡ್ ರಾಜಕೀಯವಾಗಿ ರಾಜ್ಯವನ್ನು ಆವರಿಸಿರುವ ಅಧಿಕಾರ ಹಸ್ತಾಂತರದ ವಿಚಾರಕ್ಕೆ ತಾರ್ಕಿಕ ಅಂತ್ಯ ಕಾಣಿಸುತ್ತಾ ಅಥವಾ ಕಾದು ನೋಡುವ ತಂತ್ರಕ್ಕೆ ಜೋತು ಬೀಳುತ್ತಾ? ಎಂಬ ಪ್ರಶ್ನೆಗಳು ರಾಜಕೀಯ ಪಡಸಾಲೆಯಲ್ಲಿ ಚರ್ಚೆಯಾಗುತ್ತಿವೆ ಸದ್ಯ ರಾಜ್ಯ ಕಾಂಗ್ರೆಸ್ ಪಕ್ಷದಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿದರೆ ಹೈಕಮಾಂಡ್ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದರ ಪರಿಣಾಮಗಳು ಮಾತ್ರ ಗಂಭೀರವಾಗಿರುತ್ತವೆ ಎನ್ನುವುದಂತು ಸತ್ಯ



ಈಗಾಗಲೇ ಕಾಂಗ್ರೆಸ್‌ನಲ್ಲಿ ಅಧಿಕಾರದ ಅರ್ಥಾತ್ ಸಚಿವ ಸ್ಥಾನದ ಹಪಾಹಪಿಯಲ್ಲಿರುವ ಶಾಸಕರ ದೊಡ್ಡ ಪಟ್ಟಿಯಿದೆ ಅದರಲ್ಲೂ ಮೊದಲ ಬಾರಿಗೆ ಶಾಸಕರಾಗಿರುವವರೇ ನಮಗೆ ಸಚಿವ ಸ್ಥಾನ ಕೊಡಿ ಎಂದು ಒತ್ತಡ ಹೇರುತ್ತಿದ್ದಾರೆ. ಒಂದು ವೇಳೆ ಅಧಿಕಾರ ಹಸ್ತಾಂತರವಾದರೆ ಮುಂದೆ ಬರಲಿರುವ ಸಿಎಂ ಸಚಿವ ಸಂಪುಟವನ್ನು ಪುನರಚನೆ ಮಾಡಬೇಕಾಗುತ್ತದೆ ಈ ವೇಳೆ ತಮ್ಮ ಬೆಂಬಲಿಗರಿಗೆ ಸಚಿವ ಸ್ಥಾನವನ್ನು ನೀಡಬೇಕಾಗುತ್ತದೆ. ನೀಡದೆ ಹೋದರೆ ಅಸಮಾಧಾನದ ಹೊಗೆ ಏಳಲಿದೆ.. ಜತೆಗೆ ಈಗಾಗಲೇ ಅಧಿಕಾರದಲ್ಲಿರುವ ಹಿರಿಯ ನಾಯಕರನ್ನು ಕೈಬಿಡುವಂತೆಯೂ ಇಲ್ಲ. ಬಿಟ್ಟರೆ ಮತ್ತೊಂದು ರೀತಿಯ ಗೊಂದಲಗಳು ಶುರುವಾಗಲಿದೆ.



ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಏನೇ ತೀರ್ಮಾನ ಕೈಗೊಂಡರೂ ಅದರಿಂದ ವ್ಯತಿರಿಕ್ತ ಪರಿಣಾಮಗಳೇ ಜಾಸ್ತಿ ಎನ್ನುವುದು ಹೈಕಮಾಂಡ್‌ಗೆ ಗೊತ್ತಿಲ್ಲದ ವಿಚಾರವೇನಲ್ಲ. ಹೀಗಾಗಿಯೇ ಅವರು ಕಾದು ನೋಡುವ ತಂತ್ರ ಅನುಸರಿಸುತ್ತಿದ್ದಾರೆ. ಆದರೆ ಅದು ರಾಜ್ಯದ ಮಟ್ಟಿಗೆ ಬೇರೆಯದ್ದೇ ಆದ ಚರ್ಚೆಗಳಿಗೆ ಕಾರಣವಾಗುತ್ತಿದೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ.



ಹಾಗೆನೋಡಿದರೆ, ಸಿಎಂ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ರಾಜ್ಯ ರಾಜಕೀಯದಲ್ಲಿ ಮಹತ್ತರದ ಬದಲಾವಣೆಯಾಗುತ್ತವೆ ಎಂಬ ಮಾತುಗಳು ಕಾಂಗ್ರೆಸ್ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದಲ್ಲಿಂದ ಇಲ್ಲಿವರೆಗೆ ಕೇಳಿ ಬರುತ್ತಲೇ ಇದೆ. ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡಲ್ಲಿಂದ ಸಿದ್ದರಾಮಯ್ಯರಿಗೆ ಈ ವಿಚಾರಕ್ಕೆ ಪ್ರತಿಕ್ರಿಯೆ ನೀಡುವುದೇ ತಲೆನೋವಾಗಿ ಪರಿಣಮಿಸಿದೆ. ಆದರೆ ಸಿಎಂ ಸ್ಥಾನ ಬಿಟ್ಟುಕೊಡಬೇಕು ಎಂದು ಕೇಳುತ್ತಿರುವವರು ಎಲ್ಲಿಯೂ ಅಧಿಕಾರ ಹಸ್ತಾಂತರದ ಒಪ್ಪಂದವಾಗಿದೆ ಎನ್ನುವುದನ್ನು ಬಹಿರಂಗವಾಗಿ ಹೇಳುತ್ತಿಲ್ಲ..

ಇಂತಹ ವಿಚಾರ ಬಂದಾಗಲೆಲ್ಲ ಸಹನೆ ಕಳೆದುಕೊಳ್ಳದೆ ಹೈಕಮಾಂಡ್ ಮೇಲೆ ಭಾರಹಾಕಿ ಮುನ್ನಡೆಯುವುದನ್ನು ಸಿದ್ದರಾಮಯ್ಯ ಅವರು ಕರಗತ ಮಾಡಿಕೊಂಡಿದ್ದಾರೆ. ಹೀಗಾಗಿಯೇ ಎಲ್ಲರನ್ನೂ ಕಾಡುತ್ತಿರುವ ಒಂದೇ ಒಂದು ಪ್ರಶ್ನೆ ನಿಜವಾಗಿಯೂ ಅಧಿಕಾರ ಹಸ್ತಾಂತರದ ಒಪ್ಪಂದ ಆಗಿದೆಯಾ?

ಸಿಎಂ ಆಗಿರುವ ಸಿದ್ದರಾಮಯ್ಯ

**✍ಬಿ.ಎಂ. ಲವಕುಮಾರ್**

ಆಗಲೀ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಬಯಸುವ ಬೆಂಬಲಿಗರಾಗಲೀ, ಹೈಕಮಾಂಡ್ ಆಗಲೀ ಈ ವಿಚಾರವನ್ನು ಎಲ್ಲಿಯೂ ಬಹಿರಂಗಪಡಿಸದೆ ಅವರ ಪಾಡಿಗೆ ಅವರು ಓಡಾಡಿಕೊಂಡಿದ್ದಾರೆ. ಇದರಿಂದ ಈ ವಿಚಾರಕ್ಕೆ ತಾರ್ಕಿಕ ಅಂತ್ಯ ಸಿಗದೆ ರಾಜ್ಯದಲ್ಲಿ ಅಧಿಕಾರ ಹಸ್ತಾಂತರದ ವಿಚಾರ ಜೀವಂತವಾಗಿದೆ. ಆಗಾಗ್ಗೆ ಅದಕ್ಕೆ ರೆಕ್ಕೆಪುಕ್ಕ ಹುಟ್ಟಿಕೊಳ್ಳುತ್ತದೆ. ಮತ್ತೆ ಸದ್ದಿಲ್ಲದೆ ತೆರೆಮರೆಗೆ ಸರಿದು ಹೋಗುತ್ತದೆ. ಆದರೆ ಈ ಬಾರಿ ಹಾಗೆ ಆಗಲ್ಲ ಮಹತ್ತರ ಬದಲಾವಣೆ ಆಗುತ್ತದೆ ಎಂಬ ಮಾತುಗಳು ಕೇಳಿ ಬರುತ್ತಿವೆ..

ಇಷ್ಟೆಲ್ಲ ಗೋಜಲುಗಳಾಗುತ್ತಿದ್ದರೂ ಯಾವುದೇ ಒಪ್ಪಂದ ಆಗಿಲ್ಲ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆ. ಮುಂದೆಯೂ ಅವರೇ ಮುಂದುವರೆಯುತ್ತಾರೆ ಎಂಬ ಖಡಕ್ ಸಂದೇಶವನ್ನು ಹೈಕಮಾಂಡ್ ಇಲ್ಲಿತನಕ ನೀಡಿಲ್ಲ, ಹಾಗೆಯೇ ಒಪ್ಪಂದ ಆಗಿದೆ. ಆಗಿಲ್ಲ ಎಂಬ ಉತ್ತರ ನೀಡಬೇಕಾದ ಸಿದ್ದರಾಮಯ್ಯರವರಾಗಲೀ, ಡಿ.ಕೆ.ಶಿವಕುಮಾರ್ ಆಗಲೀ ಏನನ್ನೂ ಮಾತಾಡುತ್ತಿಲ್ಲ. ಆದರೆ ಇಂತಹದೊಂದು ಒಪ್ಪಂದ ಆಗಿರಬಹುದು ಎಂಬುದಕ್ಕೆ ಅವರ ನಡೆ-ನುಡಿಗಳು ಮತ್ತು ಅವರ ಬೆಂಬಲಿಗರು ನೀಡುತ್ತಿರುವ ಹೇಳಿಕೆಗಳೇ ಸಾಕ್ಷಿಗಳಾಗುತ್ತಿವೆ.

ಇನ್ನು ಹೈಕಮಾಂಡ್ ಈ ವಿಚಾರದಲ್ಲಿ ಯಾವುದೇ ಖಡಕ್ ನಿರ್ಧಾರ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಇದೊಂದು ರೀತಿಯಲ್ಲಿ ಜೇನುಗೂಡಿಗೆ ಕಲ್ಲುಹೊಡೆದಂತಹ ಪರಿಸ್ಥಿತಿ ಈಗಾಗಲೇ ಈ ಹಿಂದೆ ಬಿಜೆಪಿ ಹೈಕಮಾಂಡ್ ಮಾಡಿದ ತಪ್ಪು ಏನೆಲ್ಲ ಪರಿಣಾಮ ಬೀರಿತು ಎಂಬುದನ್ನು ಎಲ್ಲರೂ ನೋಡಿದ್ದಾರೆ. ಇವತ್ತು ಬಿಜೆಪಿ ಅಧಿಕಾರ ಕಳೆದುಕೊಳ್ಳಲು ಮತ್ತು ವೀರಶೈವ ಲಿಂಗಾಯಿತ ಸಮಾಜ ಬಿಜೆಪಿ ವಿರುದ್ಧ ತಿರುಗಿ ಬಿದ್ದು ಕಾಂಗ್ರೆಸ್ ಬೆಂಬಲಿಸಲು ಬಿಜೆಪಿ ಹೈಕಮಾಂಡ್ ಅಧಿಕಾರದಲ್ಲಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೈಬಿಟ್ಟದ್ದು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಅವತ್ತು ಹೈಕಮಾಂಡ್ ಎಚ್ಚರಿಕೆ ವಹಿಸಿದ್ದರೆ ಬಹುಶಃ ಬಿಜೆಪಿ ಹೀನಾಯವಾಗಿ ಸೋಲು ಕಾಣುತ್ತಿರಲಿಲ್ಲವೇನೋ? ರಾಜಕೀಯವಾಗಿ ನೋಡಿದ್ದೇ ಆದರೆ ಅವತ್ತಿನ ಆ ಬೆಳವಣಿಗೆ ನಂತರ ಏನೇನು ಆಯಿತು ಎಂಬುದು ನಮ್ಮ ಕಣ್ಣ ಮುಂದೆಯೇ ಇದೆ.



ಇವತ್ತು ಬಿಜೆಪಿ ಬಣಗಳಾಗಿ ಒಡೆದು ಹೋಗಿದೆ. ಅದನ್ನು ಸರಿಪಡಿಸಿ ಪಕ್ಷದಿಂದ ದೂರವಿರುವ ಅತೃಪ್ತ ನಾಯಕರನ್ನು ಒಂದೇ ವೇದಿಕೆಗೆ ತರುವ ಕೆಲಸ ಮಾಡಲು ಸಾಧ್ಯವೇ ಆಗಿಲ್ಲ. ಅದು ಮುಂದಿನ ಚುನಾವಣೆ ಹೊತ್ತಿಗೆ ಸರಿ ಹೋಗುತ್ತೋ? ಬಂಡಾಯ ಎದ್ದಿರುವ ನಾಯಕರು ಮುಂದೇನು ಮಾಡುತ್ತಾರೋ ಗೊತ್ತಿಲ್ಲ. ಆದರೆ ಈ ಬಂಡಾಯ ಬಿಜೆಪಿ ಪಕ್ಷಕ್ಕೆ ಹಾನಿ ತಂದಿದೆ. ರಾಜ್ಯ ಬಿಜೆಪಿಯಲ್ಲಿ ಆಗಿರುವ ಗೊಂದಲಗಳು ನಾಳೆ ಅಧಿಕಾರ ಹಸ್ತಾಂತರ ವಿಚಾರಕ್ಕೆ ಬಂದರೆ ಕಾಂಗ್ರೆಸ್ ಗೂ ಇಂತಹದ್ದೇ ಪರಿಸ್ಥಿತಿ ಬಂದರೂ ಅಚ್ಚರಿ ಪಡಬೇಕಾಗಿಲ್ಲ.



ಸದ್ಯ ಇದೆಲ್ಲವನ್ನು ಅರಿತಿರುವ ಹೈಕಮಾಂಡ್ ಕಾದು ನೋಡುವ ತಂತ್ರ ಅನುಸರಿಸುತ್ತಿದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಇವತ್ತು ಕಾಂಗ್ರೆಸ್ ಬಹುಮತ ಪಡೆದು ಅಧಿಕಾರದಲ್ಲಿದೆ ಎನ್ನುವುದಾದರೆ ಅದಕ್ಕೆ ಕಾರಣಗಳು ಅನೇಕ ಇವೆ. ಇಲ್ಲಿ ನಾಯಕರ ಶ್ರಮ, ಬಿಜೆಪಿ ವಿರುದ್ಧದ ಅಸಮಾಧಾನ, ಗ್ಯಾರಂಟಿಯ ಆಮಿಷ. ಹೀಗೆ ಹಲವು ವಿಚಾರಗಳು ಕಾಂಗ್ರೆಸ್‌ನ್ನು ಗೆಲ್ಲುವಂತೆ ಮಾಡಿವೆ. ಹೀಗಾಗಿ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಒಬ್ಬರೇ ಪಕ್ಷವನ್ನು ಅಧಿಕಾರಕ್ಕೆ ತಂದಿಲ್ಲ ಸಾಮೂಹಿಕ ನಾಯಕತ್ವದಡಿ ಗೆಲುವು ಬಂದಿದೆ ಎನ್ನುವುದು ಕೆಲವು ಕಾಂಗ್ರೆಸ್ ನಾಯಕರ ವಾದವಾಗಿದೆ.

ಕಾಂಗ್ರೆಸ್‌ನಲ್ಲಿ ಡಿ.ಕೆ.ಶಿವಕುಮಾರ್ ಸಿಎಂ ಆಗಲೇ ಬಾರದು ಎಂದು ಬಯಸುವವರು ಇಲ್ಲದಿಲ್ಲ. ಅವರು ಅದನ್ನು ಪರೋಕ್ಷವಾಗಿ ತಮ್ಮ ಹೇಳಿಕೆ ಮೂಲಕವೇ ವ್ಯಕ್ತಪಡಿಸುತ್ತಿದ್ದಾರೆ. ಒಂದು ವೇಳೆ ಸಿಎಂ ಬದಲಾವಣೆ ಮಾಡುವುದಾದರೆ ದಲಿತ ನಾಯಕರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ ಎಂಬ ಕೂಗೆಬ್ಬಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಈ ಹಿಂದೆಯೇ ದಲಿತರನ್ನು ಮುಖ್ಯಮಂತ್ರಿ ಮಾಡಲು ಅವಕಾಶವಿತ್ತು. ಅವತ್ತು ಮೌನವಾಗಿದ್ದವರೆಲ್ಲರೂ ಈಗ ದಲಿತಾಸ್ತ್ರ ಪ್ರಯೋಗಿಸುತ್ತಿದ್ದಾರೆ ಎಂದರೆ ಅದು ಡಿ.ಕೆ.ಶಿವಕುಮಾರ್ ಸಿಎಂ ಆಗಬಾರದು ಎಂಬುದಾಗಿದೆ.

ಕಳೆದ ಕೆಲವು ಸಮಯದಿಂದ ಡಿ.ಕೆ. ಶಿವಕುಮಾರ್ ಅಧಿಕಾರ ಹಸ್ತಾಂತರ ವಿಚಾರಕ್ಕೆ ಸಂಬಂಧಿಸಿದಂತೆ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಆಗಾಗ್ಗೆ ಹೈಕಮಾಂಡ್‌ಗೆ ಎಡತಾಕುತ್ತಿದ್ದಾರೆ. ದೆಹಲಿ ದಂಡಯಾತ್ರೆ ಮುಂದುವರೆಯುತ್ತಲೇ ಇದೆ. ಇದೆಲ್ಲದರ ನಡುವೆ ಸಿದ್ದರಾಮಯ್ಯರವರು ಸಿಎಂ ಆಗಿ ಏನೇನು ದಾಖಲೆಗಳನ್ನು ಮಾಡಬೇಕಾಗಿತ್ತೋ ಅದೆಲ್ಲವನ್ನು ಮಾಡಿದ್ದಾರೆ ಇನ್ನು ಅಧಿಕಾರ ವಧಿ ಇರುವುದು ಎರಡೇ ವರ್ಷ. ಅದರಲ್ಲೂ ಕೊನೆಯ ವರ್ಷದಲ್ಲಿ ಚುನಾವಣೆ ಬರಲಿರುವುದರಿಂದ ಅದೊಂದು ರೀತಿಯ ಅಗ್ನಿಪರೀಕ್ಷೆಯೇ. ಆದ್ದರಿಂದ ಆದಷ್ಟು ಬೇಗ ಸಿಎಂ ಆಗಿ ಬಿಡಬೇಕು ಎನ್ನುವುದು ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಸುವವರ ವಾದವಾಗಿದೆ.

ಅತ್ತ ಡಿ.ಕೆ. ಶಿವಕುಮಾರ್ ಅವರು ಸಿಎಂ ಸ್ಥಾನದತ್ತ ದೃಷ್ಟಿ ನೆಟ್ಟಿದ್ದರೆ ಇತ್ತ ಅವರ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಸತೀಶ್ ಜಾರಕಿಹೊಳಿ ಅವರು ಕಣ್ಣಿಟ್ಟಿದ್ದಾರೆ.. ಈಗಾಗಲೇ ಆ ಬಗ್ಗೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಬಂದಿದ್ದಾರೆ. ಈ ಮಧ್ಯೆ 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ ಅವತ್ತು ನಾನು

☞15



# ಇರಾನ್ v/s ಇಸ್ರೇಲ್ ಯುದ್ಧ ನಿಲ್ಲುವುದೆಂತೋ?! ಅಣು ಬಾಂಬ್ ಭೀತಿಯಲ್ಲಿ ನಡುಗುತ್ತಿದೆ ಜಗತ್ತು!!



**ಬುರ್ಖಾ ಧರಿಸದೆ ಓಡಾಡುತ್ತಿದ್ದ ಹೆಂಗಳೆಯರ ಮುಖ ಮೂತಿ ಕುಯ್ದು, ಕಣ್ಣು ಕಿತ್ತೆಸೆದು ಕ್ರೌರ್ಯ ಮೆರೆಯುತ್ತಿದ್ದ, ಇಸ್ರೇಲ್‌ನ ಯಹೂದಿಗಳನ್ನು ಮನುಷ್ಯರೇ ಅಲ್ಲ ಎಂಬಂತೆ ಕೊಲ್ಲಲು ಹವಣಿಸುತ್ತಿದ್ದ ಇರಾನಿನ ಸರ್ವಾಧಿಕಾರಿ ಆಯಿತೋಲ್ಲ ಖಮೇನಿಯನ್ನು ಇಸ್ರೇಲ್ ಅಧ್ಯಕ್ಷ ನೇತನ್ಯಾಹು, ಅಮೇರಿಕ ಅಧ್ಯಕ್ಷ ಟ್ರಂಪ್ ಕೃಪೆಯಿಂದ ಕೊಂದು ಹಾಕಿದೆ! ಈಗ ಸೇಡು ತೀರಿಸಿಕೊಳ್ಳಲು ಖಮೇನಿ ಸೇನಾ ಪಡೆಯು ಅಣು ಬಾಂಬ್ ಅಸ್ತ್ರ ಪ್ರಾಯೋಗಿಸಲು ಹವಣಿಸುತ್ತಿದೆ!! ಒಂದು ವೇಳೆ ಇರಾನ್ ಅಣ್ವಸ್ತ್ರ ಪ್ರಾಯೋಗಿಸಿದರೆ ಮಧ್ಯ ಪ್ರಾಚ್ಯ ರಾಷ್ಟ್ರಗಳ ಗತಿ ಏನು? ಈಗಾಗಲೇ ಇರಾನಿನ ತೈಲ ಬಾವಿಗಳಿಗೆ ಬೆಂಕಿ ಹಚ್ಚಿರುವ ಅಮೇರಿಕ ಸುಮ್ಮನಿರುತ್ತದೆಯೇ? ಇಡೀ ಜಗತ್ತೇ ತಲ್ಲಣಿಸುತ್ತಿದೆ...!!**

ಅಮೆರಿಕ-ಇಸ್ರೇಲ್ ಕೋಪ ಇರಾನ್ ಮೇಲೆ ಸಂಘರ್ಷವಾಗಿ ಬದಲಾಗಿ ಎಂಟು ದಿನ ಕಳೆದಿದೆ. ಇದರ ಎಫೆಕ್ಟ್ ಭಾರತದ ವ್ಯಾಪಾರ ವಹಿವಾಟಿನ ಮೇಲೂ ಗೋಚರಿಸುತ್ತಿದೆ. ಅದರಲ್ಲೂ ರಾಜ್ಯದ ಕರಾವಳಿಯ ಉದ್ಯಮಗಳ ಮೇಲೆ ಯುದ್ಧದ ದುಷ್ಪರಿಣಾಮ ಬೆಳಕಿಗೆ ಬರುತ್ತಿದೆ. ಕರಾವಳಿಯ ಉದ್ಯಮಿಗಳು ಸಂಕಷ್ಟಕ್ಕೆ ಸಿಲುಕಿದ್ದು ರಫ್ತು ವಹಿವಾಟು ಬಂದ್ ಆಗಿದ್ದು, ಭಾರಿ ನಷ್ಟ ಅನುಭವಿಸುತ್ತಿದ್ದಾರೆ.



**ಇರಾನ್ ಇಸ್ರೇಲ್ ಮಧ್ಯೆ ವಾರ್... ಭಾರತದ ಮೇಲೆ ಎಫೆಕ್ಟ್!**

ಮಧ್ಯಪ್ರಾಚ್ಯದಲ್ಲಿ ಭೌಗೋಳಿಕ ರಾಜಕೀಯ ಉದ್ವಿಗ್ನತೆ ಉಂಟಾಗಿದೆ. ಇದು ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟಿನ ಮೇಲೆ ಭಾರಿ ಪರಿಣಾಮ ಬೀರಿದೆ. ಈ ಯುದ್ಧದ ದುಷ್ಪರಿಣಾಮ ರಾಜ್ಯದ ಕರಾವಳಿಯ ರಫ್ತು ವಹಿವಾಟಿನ ಮೇಲೆ ಭಾರಿ ಪರಿಣಾಮ ಬೀರಿದೆ. ಮಧ್ಯ ಪ್ರಾಚ್ಯ ದೇಶಗಳಿಗೆ ನವ ಮಂಗಳೂರು ಬಂದರಿನಿಂದ ಕಾಫಿ, ಮೀನು ಉತ್ಪನ್ನ, ಗೋಡಂಬಿ ಸೇರಿದಂತೆ ಇನ್ನಿತರ ವಸ್ತುಗಳು ಕಂಟೈನರ್‌ಗಳ ಮೂಲಕ ಸಮುದ್ರ ಮಾರ್ಗವಾಗಿ ರಫ್ತಾಗುತ್ತವೆ. ಕೊಲ್ಲಿ ರಾಷ್ಟ್ರಗಳ ಮೇಲೆ ಬಾಂಬ್ ದಾಳಿ ನಡೆಯುತ್ತಿರೋ ಹಿನ್ನೆಲೆಯಲ್ಲಿ ಎಲ್ಲಾ ವ್ಯಾಪಾರ ವಹಿವಾಟು ರಫ್ತು ಚಟುವಟಿಕೆಗಳು ಬಂದ್ ಆಗಿದೆ. ಇದರಿಂದಾಗಿ ಮಂಗಳೂರಿನ ರಫ್ತುದಾರಿಗೆ ಕಾರ್ಯಾಚರಣೆ ಮತ್ತು ಲಾಜಿಸ್ಟಿಕ್ಸ್ ವೆಚ್ಚ ಹೆಚ್ಚಾಗುವ ಭೀತಿ ಎದುರಿಸುತಿದ್ದಾರೆ.

ಪ್ರಸ್ತುತ ಮಂಗಳೂರು ಬಂದರಿನಲ್ಲಿ ಮಧ್ಯ ಪ್ರಾಚ್ಯಕ್ಕೆ ರವಾನೆಯಾಗಬೇಕಿದ್ದ ಒಟ್ಟು 54 ಕಂಟೈನರ್‌ಗಳು ಬಾಕಿ ಉಳಿದಿವೆ. ಇದರಲ್ಲಿ 21 ಕಾಫಿ ಕಂಟೈನರ್‌ಗಳು ಮತ್ತು 5 ಮೀನಿನ ಉತ್ಪನ್ನಗಳು, ಫ್ಯಾಬ್ರಿಕೇಷನ್ ಮೆಟೀರಿಯಲ್ಸ್, ಯಂತ್ರೋಪಕರಣಗಳ ಕಂಟೈನರ್‌ಗಳು ಸೇರಿವೆ. ಹೊರ್ಮುಜ್ ಜಲಸಂಧಿಯ ಮೂಲಕ ಸಂಚರಿಸಬೇಕಾದ ಈ ಹಡಗುಗಳು ಸಂಘರ್ಷದ ಕಾರಣದಿಂದ ಸ್ಥಗಿತಗೊಂಡಿವೆ. ಇದು ರಫ್ತುದಾರರಿಗೆ ಭಾರಿ ನಷ್ಟ ಅನುಭವಿಸುವಂತೆ ಮಾಡಿದೆ.



ಮಧ್ಯ ಪ್ರಾಚ್ಯದಲ್ಲಿ ಭುಗಿಲೆದ್ದಿರುವ ಯುದ್ಧ ಮುಂದುವರೆದರೆ ವೆಚ್ಚ ಹೆಚ್ಚಾಗುವ ಭೀತಿಯನ್ನ ಕರಾವಳಿ ಉದ್ಯಮಿಗಳು ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರೋ ಕರಾವಳಿಯ ರಫ್ತುದಾರರ ನೆರವಿಗೆ ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳು ಬರುವಂತೆ ಉದ್ಯಮಿಗಳು ಒತ್ತಾಯಿಸಿದ್ದಾರೆ. ಇಷ್ಟಕ್ಕೂ ಇರಾನ್‌ಇಸ್ರೇಲ್ ಯುದ್ಧ ಯಾವಾಗ ಕೊನೆಗೊಳ್ಳಬಹುದು?

ಇರಾನ್ ವಿರುದ್ಧ ಇಸ್ರೇಲ್ ಅಮೇರಿಕಾ ಯುದ್ಧ 9ನೇ ದಿನಕ್ಕೆ ಕಾಲಿಟ್ಟರೋ ಸಂದರ್ಭದಲ್ಲಿಯೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಇಸ್ರೇಲ್ ಯುದ್ಧದ ಅಂತ್ಯದ ಬಗ್ಗೆ ಮಾತನಾಡಿದ್ದಾರೆ. ಇಸ್ರೇಲ್

☞ 7

## ಸರ್ವಾಧಿಕಾರಿ ಖಮೇನಿ ಹತ್ಯೆಗೆ ಸಿಐಎ ನೆರವು?!


ಅಮೇರಿಕಾದ ಕೇಂದ್ರ, ಗುಪ್ತಚರ ಸಂಸ್ಥೆ (CIA) ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದೇ ವಿಶ್ವದ ಮಾಧ್ಯಮಗಳು ವರದಿ ಮಾಡಿವೆ! ಇರಾನ್‌ನ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷ ಖಮೇನಿ ಪಾಲ್ಗೊಳ್ಳುವ ಬಗ್ಗೆ ಸುಳಿವು ನೀಡಿದ್ದರಿಂದ ಅಮೆರಿಕ ಇಸ್ರೇಲ್ ಜಂಟಿಯಾಗಿ ದಾಳಿ ನಡೆಸಲು ನೆರವಾಯಿತು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಅಮೇರಿಕಾ CIA ತಿಂಗಳುಗಳಿಂದ ಖಮೇನಿ ಮೇಲೆ ಕಣ್ಣಿಟ್ಟಿತ್ತು. ಅವರ ಚಲನವಲನಗಳು ಮತ್ತು ಅಡಗಿದ್ದ ಕಟ್ಟಡಗಳ ಬಗ್ಗೆ ಮಾಹಿತಿ ಪಡೆದಿತ್ತು.

ಶನಿವಾರ ಬೆಳಿಗ್ಗೆ ದಾಳಿಗೂ ಸ್ವಲ್ಪ ಸಮಯಕ್ಕೂ ಮುನ್ನಾ ಕೇಂದ್ರ ಟೆಹರಾನ್ ನಲ್ಲಿರುವ ಖಮೇನಿ ತಂಗಿದ್ದ ಕಟ್ಟಡದಲ್ಲಿ ಇರಾನ್‌ನ ಉನ್ನತ ರಾಜಕೀಯ ಮತ್ತು ಭದ್ರತಾ ಅಧಿಕಾರಿಗಳ ಸಭೆ ನಡೆಯಲಿದ್ದು, ಅದರಲ್ಲಿ ಖಮೇನಿ ಪಾಲ್ಗೊಳ್ಳಲಿದ್ದಾರೆ ಎಂಬ ಮಾಹಿತಿ ಗುಪ್ತಚರ ಸಂಸ್ಥೆಗೆ ಸಿಕ್ಕಿತ್ತು.

ಆರಂಭದಲ್ಲಿ ರಾತ್ರಿ ಹೊತ್ತು ಕಾರ್ಯಾಚರಣೆಯನ್ನು ಪ್ರಾರಂಭಿಸಲು ಯೋಜಿಸಿದ್ದ ಖಖ ಮತ್ತು ಇಸ್ರೇಲಿ ಅಧಿಕಾರಿಗಳು, ಖಮೇನಿ ಸ್ಥಳದ ಕುರಿತು ಗುಪ್ತಚರ ಸಂಸ್ಥೆ ನೀಡಿದ ಮಾಹಿತಿಗೆ ತಕ್ಕಂತೆ ದಾಳಿಗೆ ಸಮಯನ್ನು ಮರು ಹೊಂದಿಸಿತು. ಖಮೇನಿಯನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಲು ತಿಂಗಳುಗಟ್ಟಲೆ ತಯಾರಿ ನಡೆಸಿದ್ದ ಇಸ್ರೇಲ್‌ಗೆ ಗುಪ್ತಚರ ಸಂಸ್ಥೆ ಮಾಹಿತಿ ರವಾನಿಸಿತ್ತು. ಇರಾನ್‌ನ ಸರ್ವೋಚ್ಚ ನಾಯಕನ ಹತ್ಯೆಗೆ ತ್ವರಿತಗತಿಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಇಸ್ರೇಲ್‌ನಲ್ಲಿ ಯುದ್ಧವಿಮಾನಗಳು ತಮ್ಮ ನೆಲೆಗಳಿಂದ ಹೊರಟಾಗ ಫೆಬ್ರವರಿ 2,2026 ರ ಬೆಳಿಗ್ಗೆ 6:00 ಗಂಟೆ ಆಗಿತ್ತು. ಕಾರ್ಯಾಚರಣೆ ಆರಂಭಿಸಿದ ಸರಿಸುಮಾರು ಎರಡು ಗಂಟೆ, ಐದು ನಿಮಿಷಗಳ ನಂತರ, ಬೆಳಿಗ್ಗೆ 9:40ರ ಸುಮಾರಿಗೆ ಟೆಹ್ರಾನ್‌ನಲ್ಲಿ ಖಮೇನಿ ತಂಗಿದ್ದ ಕಟ್ಟಡಕ್ಕೆ ದೂರಗಾಮಿ ಕ್ಷಿಪಣಿ ದಾಳಿ ನಡೆಸಿದವು. ದಾಳಿ ವೇಳೆ ಹಿರಿಯ ರಾಷ್ಟ್ರೀಯ ಭದ್ರತಾ ಅಧಿಕಾರಿಗಳು ಒಂದು ಕಟ್ಟಡದಲ್ಲಿದ್ದರೆ, ಸಮೀಪದ ಮತ್ತೊಂದು ಕಟ್ಟಡದಲ್ಲಿ ಖಮೇನಿ ತಂಗಿದ್ದರು ಎಂದು ವರದಿ ತಿಳಿಸಿದೆ.

ಟೆಹರಾನ್‌ನ ಹಲವು ಕಡೆಗಳಲ್ಲಿ ಏಕಕಾಲದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಇರಾನ್‌ನ ರಾಜಕೀಯ ಭದ್ರತಾ ವಿಭಾಗದ ಹಿರಿಯ ವ್ಯಕ್ತಿಗಳು ತಂಗಿದ್ದ ಕಟ್ಟಡಗಳ ಮೇಲೆ ದಾಳಿ ನಡೆಸಲಾಯಿತು. ಯುದ್ಧಕ್ಕೆ ಇರಾನ್ ಸಕಲ ಸಿದ್ಧತೆ ಮಾಡಿಕೊಂಡಿತ್ತು. ಅದರ ಹೊರತಾಗಿಯೂ ಇಸ್ರೇಲ್ ಅಮೇರಿಕ ಸಹಾಯ ಪಡೆದುಕೊಂಡು ಆಚ್ಚರಿಯ ರೀತಿಯಲ್ಲಿ ಯುದ್ಧತಂತ್ರ ಬಳಸಿ, ಖಮೇನಿಯನ್ನು ಹತ್ಯೆ ಮಾಡುವಲ್ಲಿ ಯಶಸ್ವಿಯಾಗಿದೆ. ಖಮೇನಿ ಜೊತೆಗೆ ಇಬ್ಬರು ಹಿರಿಯ ಮಿಲಿಟರಿ ವ್ಯಕ್ತಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಇರಾನ್‌ನ ನ್ಯಾಯಾಂಗ ದೃಢಪಡಿಸಿತ್ತು! ☯





6 ☞

ಪ್ರಧಾನಿ ನೆತನ್ಯಾಹು ಅವರೊಂದಿಗೆ ಸೇರಿ ತೀರ್ಮಾನ ಕೈಗೊಳ್ಳುವುದಾಗಿ ಟ್ರಂಪ್ ಹೇಳಿದ್ದಾರೆ. ನೇತನ್ಯಾಹು ಏನೇ ಹೇಳಿದರೂ ಟ್ರಂಪ್ ತೀರ್ಮಾನವೇ ಅಂತಿಮ ಎಂಬುದು ಬಹಿರಂಗ ಸತ್ಯ! ಯುದ್ಧದಲ್ಲಿ ಉಭಯ ದೇಶಗಳಲ್ಲಿ ಹೆಚ್ಚಿನ ಸಾವುನೋವು ಸಂಭವಿಸಿವೆ., ಇರಾನ್ ಜತೆಗಿನ ಯುದ್ಧವನ್ನು ಯಾವಾಗ ಕೊನೆಗೊಳಿಸಬೇಕೆಂಬ ನಿರ್ಧಾರವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆ ಸೇರಿ ತೆಗೆದುಕೊಳ್ಳುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ದಿ ಟೈಮ್ಸ್ ಆಫ್ ಇಸ್ರೇಲ್ ಗೆ ನೀಡಿದ್ದ ಸಂದರ್ಶನದಲ್ಲಿ ಟ್ರಂಪ್ ಮಾತನಾಡಿ, ತಾನು ಮತ್ತು ನೆತನ್ಯಾಹು ಇಲ್ಲದೇ ಇದ್ದಿದ್ದರೆ ಇಸ್ಲಾಮಿಕ್ ಗಣರಾಜ್ಯ ಇಸ್ರೇಲ್ ಅನ್ನು ನಾಶ ಮಾಡುತ್ತಿತ್ತು ಎಂದು ಹೇಳಿದ್ದಾರೆ.

ಇರಾನ್, ಇಸ್ರೇಲ್ ಮತ್ತು ಅದರ ಸುತ್ತಲಿನ ಎಲ್ಲವನ್ನೂ ನಾಶಮಾಡಲು ಹೊರಟಿತ್ತು. ನಾವು ಒಟ್ಟಾಗಿ ಕೆಲಸ ಮಾಡಿದ್ದೇವೆ, ಇಸ್ರೇಲ್ ಅನ್ನು ನಾಶ ಮಾಡಲು ಬಯಸಿದ ದೇಶವನ್ನು ನಾವು ನಾಶಪಡಿಸಿದ್ದೇವೆ ಎಂದು ಟ್ರಂಪ್ ಹೇಳಿರುವುದಾಗಿ ವರದಿಯಾಗಿದೆ.

ನೆತನ್ಯಾಹು ಅವರ ಅಭಿಪ್ರಾಯವನ್ನು ಹೇಳಬಹುದಾದರೂ ಟ್ರಂಪ್ ಅವರ ನಿರ್ಧಾರವು ಅಂತಿಮವಾಗಿರುತ್ತದೆ . ಅಮೆರಿಕ ತನ್ನ ದಾಳಿಯನ್ನು ನಿಲ್ಲಿಸಲು ನಿರ್ಧರಿಸಿದ ನಂತರವೂ ಇಸ್ರೇಲ್ ಇರಾನ್ ವಿರುದ್ಧ ಯುದ್ಧವನ್ನು ಮುಂದುವರೆಸಬಹುದೇ ಎಂಬ ಪ್ರಶ್ನೆಗೆ ಟ್ರಂಪ್ ಪ್ರತಿಕ್ರಿಯಿಸಿ, ಅದು ಅಗತ್ಯ ಎಂದು ನನಗೆ ಅನಿಸುತ್ತಿಲ್ಲ ಎಂದಿದ್ದಾರೆ!

ಕಳೆದ ಫೆಬ್ರವರಿ 28 ಎಂದು ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿಯಲ್ಲಿ ಇರಾನ್ ಮೇಲೆ ದಾಳಿ ಮಾಡಿದ್ದವು, ಇದು ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲ ಅಲಿ ಖಮೇನಿಯ ಹತ್ಯೆಗೆ ಕಾರಣವಾಗಿತ್ತು.

## ಶಾಂತಿನಗರದ ಶಾಸಕ ಹ್ಯಾರಿಸ್ ವಿರುದ್ಧ ಕ್ರಮ?





ಇರಾನ್ ಸರ್ವಾಧಿಕಾರಿ ಖಮೇನಿ ಹತ್ಯೆಗೆ ಜಗತ್ತಿನ ಹಲವೆಡೆ ಆಕ್ರೋಶ ವ್ಯಕ್ತವಾಗ್ತಿದೆ. ನಮ್ಮ ಬೆಂಗಳೂರಿನಲ್ಲೂ ಖಮೇನಿ ಸಾವು ಖಂಡಿಸಿ ಮಾರ್ಚ್ 3ರಂದು ಪ್ರತಿಭಟನೆ ನಡೆಯಿತು. ಈ ವೇಳೆ ಹೋರಾಟಗಾರರು ರಸ್ತೆಗಿಳಿದು ಅಳುತ್ತಾ ಅಮೆರಿಕಾ ವಿರುದ್ಧ ಕೆಂಡ ಕಾರಿದರು. ನಂತರ ಏನಾಯ್ತು ಅಂದ್ರೆ, ಖಮೇನಿ ಹತ್ಯೆ ಖಂಡಿಸಿ ಬೀದಿಗಿಳಿದು ಪ್ರತಿಭಟನೆ ನಡೆಸಿದವರ ವಿರುದ್ಧ ಕ್ರಮದ ಬಗ್ಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಪ್ರತಿಕ್ರಿಯಿಸಿದ್ದು, ಪ್ರೊಟೆಸ್ಟ್ ಮಾಡಿದವರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ಪ್ರತಿಭಟನೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರದ ಬಗ್ಗೆ ಮಾತಾಡಿರೊ ಗೃಹ ಸಚಿವರು, ಈ ಪ್ರತಿಭಟನೆ ಮಾಡಿದ್ದು ನಿಯಮಬಾಹಿರ ಎಂದಿದ್ದಾರೆ!

ಈ ಬಗ್ಗೆ ಈಗಾಗಲೇ ಮಾನ್ಯ ನ್ಯಾಯಾಲಯ ವರದಿ ಕೇಳಿದೆ. ಪ್ರತಿಭಟನೆ ಮಾಡುವವರು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಿ ಅಂತಲೇ ಆದೇಶವಿದೆ.ಆದ್ರೆ ಮೊನ್ನೆ ಬೆಂಗಳೂರಿನ ರಸ್ತೆಗಳಲ್ಲೇ ಪ್ರತಿಭಟನೆ ನಡೆದಿದೆ ಎಂದು ಗೃಹ ಸಚಿವರು ಗರಂ ಆಗಿದ್ದಾರೆ! ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಶಾಂತಿ ನಗರದ ಶಾಸಕ ಹ್ಯಾರೀಸ್ ಬಗ್ಗೆ ತಿಳಿಸಿದ್ದಕ್ಕೆ, ಅವರು ಯಾರೇ ಇರಲಿ, ನಿಯಮಾನುಸಾರ ಪ್ರತಿಭಟನೆ ಮಾಡಬೇಕು. ತಪ್ಪಾಗಿದ್ರೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಪರಮೇಶ್ವರ್ ಹೇಳಿದ್ದಾರೆ!!



## ಜಗತ್ತಿಗೆ ಮಾರಕ ರೋಗ ರುಜಿನ ಭೀತಿ!

ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧ ತೈಲ ಕೇಂದ್ರಗಳ ಮೇಲೆ ದಾಳಿಗಳಿಗೆ ಕಾರಣವಾಗಿದ್ದು, ಇದು ಕೇವಲ ಆರ್ಥಿಕ ನಷ್ಟವಲ್ಲದೆ, ಭೀಕರ ಪರಿಸರ ದುರಂತಕ್ಕೆ ನಾಂದಿ ಹಾಡಿದೆ. ತೈಲ ಬಾವಿಗಳಿಗೆ ಬೆಂಕಿ ಬಿದ್ದಾಗ ಹೊರಹೊಮ್ಮುವ ದಟ್ಟ ಕಪ್ಪು ಹೊಗೆ ನೂರಾರು ಕಿಲೋಮೀಟರ್ ದೂರದವರೆಗೆ ಹರಡಿ ಜನರ ಆರೋಗ್ಯಕ್ಕೆ ಮಾರಕವಾಗಲಿದೆ. ಈ ಹೊಗೆಯಲ್ಲಿರುವ ಕಾರ್ಬನ್ ಮೊನಾಕ್ಸೈಡ್, ಸಲ್ಫರ್ ಡೈಯಾಕ್ಸೈಡ್ ಮತ್ತು ನೈಟ್ರೋಜನ್ ಆಕ್ಸೈಡ್‌ಗಳು ಶ್ವಾಸಕೋಶ ಮತ್ತು ರಕ್ತದ ಮೇಲೆ ನೇರ ಪರಿಣಾಮ ಬೀರುತ್ತವೆ. ಗಾಳಿಯಲ್ಲಿ ಸೇರಿದ ಈ ವಿಷಗಳು ಮಳೆ ನೀರಿನಲ್ಲಿ ಬೆರೆತು ಆಮ್ಲ ಮಳೆಯನ್ನು ಸೃಷ್ಟಿಸಿ ಶ್ವಾಸಕೋಶಗಳನ್ನು ಹಾನಿಗೊಳಿಸುತ್ತವೆ. ಚರ್ಮ ರೋಗಗಳು, ಕ್ಯಾನ್ಸರ್ ಮತ್ತು ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಬಹುದು. ತಕ್ಷಣವೇ ಸಾವು ಸಂಭವಿಸದಿದ್ದರೂ, ದೀರ್ಘಾವಧಿಯಲ್ಲಿ ದೇಹದ ಅಂಗಾಂಗಗಳನ್ನು ಹಾನಿಗೊಳಿಸುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

1991ರಲ್ಲಿ ಗಲ್ಫ್ ಯುದ್ಧದ ವೇಳೆ ಅಮೆರಿಕ ಇರಾಕ್ ತೈಲ ಬಾವಿಗಳಿಗೆ ಬೆಂಕಿ ಹಚ್ಚಿದ್ದ ನಂತರ ಗಲ್ಫ್ ವಾರ್ ಸಿಂಡ್ರೋಮ್ ಕಾಣಿಸಿಕೊಂಡಿತ್ತು. ಅಮೆರಿಕದ ಸಾವಿರಾರು ಸೈನಿಕರು 30 ವರ್ಷಗಳ ನಂತರವೂ ದೀರ್ಘಕಾಲದ ಆಯಾಸ, ನರಗಳ ಹಾನಿ, ಕ್ಯಾನ್ಸರ್‌ನಂತಹ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದೀಗ ಇರಾನ್‌ನ ಬೃಹತ್ ತೈಲ ಸಂಗ್ರಹಾಗಾರಗಳ ಮೇಲೆ ದಾಳಿಯಾದರೆ, ಈ ದುರಂತ 1991ರ ಗಲ್ಫ್ ಯುದ್ಧಕ್ಕಿಂತ ಹತ್ತು ಪಟ್ಟು ಹೆಚ್ಚು ಅಪಾಯಕಾರಿಯಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಈ ಹೊಗೆ ಪರ್ಷಿಯನ್ ಗಲ್ಫ್ ದಾಟಿ ನೆರೆ ರಾಷ್ಟ್ರಗಳಿಗೂ ಹರಡಿ ಜಾಗತಿಕ ಹವಾಮಾನ ವೈಪರಿತ್ಯಕ್ಕೆ ಕಾರಣವಾಗಬಹುದು. ಭಾರತದ ವರೆಗೂ ಪರಿಣಾಮ ತಟ್ಟುವ ಸಾಧ್ಯತೆ ಇದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ☯


ಇರಾನ್‌ನ ತಜ್ಞರ ಸಭೆಯು ಖಮೇನಿಯ ಮಗ ಮೊಜ್ತಬಾ ಅವರನ್ನು ದೇಶದ ಮುಂದಿನ ಸರ್ವೋಚ್ಚ ನಾಯಕನನ್ನಾಗಿ ನೇಮಿಸಿದೆ.

ಈ ಯುದ್ಧದಲ್ಲಿ ಇರಾನ್‌ನಲ್ಲಿ ಕನಿಷ್ಠ 1,230 ಜನರು, ಲೆಬನಾನ್‌ನಲ್ಲಿ ಕನಿಷ್ಠ 397 ಜನರು ಮತ್ತು ಇಸ್ರೇಲ್‌ನಲ್ಲಿ ಕನಿಷ್ಠ 11 ಜನರು ಸಾವನ್ನಪ್ಪಿದ್ದಾರೆ ಎಂದು ಅಧಿ ಕಾರಿಗಳು ತಿಳಿಸಿದ್ದಾರೆ. ಮಾರ್ಚ್ 1 ರಂದು ಸೌದಿ ಅರೇಬಿಯಾದಲ್ಲಿ ಸೈನಿಕರ ಮೇಲೆ ಇರಾನ್ ನಡೆಸಿದ ದಾಳಿಯಿಂದ ಗಾಯಗೊಂಡು ಸೇನಾ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಅಮೆರಿಕ ಸೇನೆ ತಿಳಿಸಿದೆ. ☯



## ಭಾರತೀಯರ ರಕ್ಷಣೆ ನಮ್ಮ ಹೊಣೆ.... ವಿದೇಶಾಂಗ ಸಚಿವ ಜೈ ಶಂಕರ್





ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಯುದ್ಧ ನಡೆಸುತ್ತಿರುವ ಈ ವೇಳೆಯಲ್ಲಿ, ಕೊಲ್ಲಿ ರಾಷ್ಟ್ರಗಳಲ್ಲಿ ನೆಲಸಿರುವ ಕೋಟಿ ಸಂಖ್ಯೆಯ ಭಾರತೀಯರ ಸುರಕ್ಷತೆಯದ್ದೆ ಈಗಿನ ದೊಡ್ಡ ಚಿಂತೆಯಾಗಿದೆ! ವಿದೇಶಾಂಗ ಸಚಿವ ಜೈ ಶಂಕರ್ ಅವರು ಅವರ ಕೊಲ್ಲಿ ರಾಷ್ಟ್ರಗಳಲ್ಲಿ ನೆಲೆಸಿರುವ ಭಾರತೀಯರ ರಕ್ಷಣೆಯೇ ನಮ್ಮ ಪರಮ ಆದ್ಯತೆಟಿ ಎಂದು ಈಗಾಗಲೇ ಘೋಷಿಸಿದ್ದಾರೆ.

ಇರಾನ್ ಇಸ್ರೇಲ್ ಸಂಘರ್ಷ ಆರಂಭಗೊಂಡ ನಂತರ ಎರಡನೇ ಹೇಳಿಕೆ ಬಿಡುಗಡೆ ಮಾಡಿರುವ ಭಾರತ, ‘ಪಶ್ಚಿಮ ಏಷ್ಯಾದಲ್ಲಿನ ಈ ಬೆಳವಣಿಗೆಗಳಿಂದ ಇಂಧನ ಪೂರೈಕೆಯಲ್ಲಿಯೂ ವ್ಯತ್ಯಯವಾಗುವ ಸಾಧ್ಯತೆ ಇದೆ,ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರಲಿದೆ’ ಎಂದು ಕಳವಳ ವ್ಯಕ್ತಪಡಿಸಿದೆ.

‘ಉದ್ದೇಶಗಳು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಸಂಘರ್ಷವನ್ನು ಶೀಘ್ರವೇ ಶಮನಗೊಳಿಸಲು ಮುಂದಾಗಬೇಕು’ ಎಂದೂ ಭಾರತ ಒತ್ತಾಯಿಸಿದೆ.

‘ಭಾರತವು ಪಶ್ಚಿಮ ಏಷ್ಯಾದ ನೆರೆ ರಾಷ್ಟ್ರ. ಈ ಪ್ರದೇಶದಲ್ಲಿನ ಸುರಕ್ಷತೆ ಹಾಗೂ ಸ್ಥಿರತೆಯು ಭಾರತದ ಪಾಲಿಗೆ ನಿರ್ಣಾಯಕವಾಗಿದೆ. ಆದರೆ, ಈಗಿನ ಬೆಳವಣಿಗೆಗಳು ಆತಂಕವನ್ನು ಹೆಚ್ಚಿಸಿವೆ’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

‘ವಿಶ್ವದ ಹಲವೆಡೆ ಭಾರತೀಯರು ಉದ್ಯೋಗದಲ್ಲಿದ್ದಾರೆ. ಸರಕು ಸಾಗಣೆ ನೌಕೆಗಳಲ್ಲಿಯೂ ಭಾರತೀಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂತಹ ನೌಕೆಗಳ ಮೇಲೆ ನಡೆದ ದಾಳಿಗಳಿಂದಾಗಿ ಕೆಲ ಭಾರತೀಯರು ಮೃತಪಟ್ಟಿದ್ದಾರೆ?ಇಲ್ಲವೇ ನಾಪತ್ತೆಯಾಗಿದ್ದಾರೆ! ಹೀಗಾಗಿ, ಸರಕು ಸಾಗಿಸುವ ಹಡಗುಗಳ ಮೇಲೆ ದಾಳಿ ನಡೆಸುವುದನ್ನು ಭಾರತ ವಿರೋಧಿಸುತ್ತದೆ’ ಎಂದು ಸಚಿವಾಲಯ ಹೇಳಿದೆ.

ಗಮನಿಯ ವಿಚಾರವೇನೆಂದರೆ, ಇಲ್ಲೆಲ್ಲೂ ಇರಾನ್ ಪರಮೋಚ್ಚ ನಾಯಕ ಖಮೇನಿ ಹತ್ಯೆ ಕುರಿತಾಗಲಿ, ಇಸ್ರೇಲ್ ದೊರೆ ನೇತನ್ಯಾಹು, ಅವರ ಬಾಸ್ ಟ್ರಂಪ್ ಕುರಿತಾಗಲಿ ಭಾರತ ತುಟಿ ಬಿಚ್ಚಿಲ್ಲ! ಪ್ರಧಾನಿ ಮೋದೀಜಿ ಅವರಂತೂ ಇನ್ನೂ ಒಂದು ಮಾತಾಡಿಲ್ಲ!! ☯




**ಕರ್ನಾಟಕದ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ದಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡಿರುವುದು. 2004ರಿಂದ 2013ವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು, 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ರಾಜ್ಯ ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ. 2018ರಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಆದಿಚುಂಚನಗಿರಿಯ ಪೂಜ್ಯ ನಿರ್ಮಲಾನಂದನಾಥ ಸ್ವಾಮಿಗಳ ಫೋನನ್ನೆ ಕದ್ದಾಲಿಸಿದ್ದಾರೆ ಎಂದು ಈಗಿನ ಅವರ ರಾಜಕೀಯ ಸಂಗಾತಿ ಬಿ.ವೈ. ವಿಜಯೇಂದ್ರ, ಅವರೇ ಆರೋಪ ಮಾಡಿದ್ದರು. ಇದರ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಒಬ್ಬ ಸ್ವಾಮೀಜಿಗಳದ್ದಷ್ಟೇ ಅಲ್ಲ, ಬದಲಿಗೆ ಏಳು ಸ್ವಾಮೀಜಿಗಳ ಫೋನ್‌ಗಳ ಕದ್ದಾಲಿಕೆ ಮಾಡಲಾಗಿದೆ ಎಂದು ತಿಳಿಸಿತ್ತು..!!**

# ಟೆಲಿಫೋನ್ ಟ್ಯಾಪಿಂಗ್ ಈಗಲೂ ನಡೆಯುತ್ತಿದೆಯೇ? ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ ಅಂತಾರೆ ಸಿದ್ದು!

ವಿರೋಧ ಪಕ್ಷದ ನಾಯಕರು ನಿರುದ್ಯೋಗಿ! ನನ್ನ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ. ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲುಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮೇಲೆ ಕಣ್ಣಿಡಲು ಫೋನ್ ಕದ್ದಾಲಿಕೆ ನಡೆಯುತ್ತಿದೆ ಎಂಬ ಆರ್. ಅಶೋಕ್ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪ ''ತಾ ಕಳ್ಳ ಇತರರ ನಂಬ'' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಿಡಿಕಾರಿದ್ದಾರೆ.



ಕುಮಾರಸ್ವಾಮಿ ಹಾಗೂ ಆರ್. ಅಶೋಕ್ ಅವರ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಅವರು, ಆರ್. ಅಶೋಕ್ ಮತ್ತು ಹೆಚ್.ಡಿ. ಕುಮಾರಸ್ವಾಮಿಯವರ ಆರೋಪ ''ತಾ ಕಳ್ಳ ಇತರರ ನಂಬ'' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆಯಾಗಿದೆ. ಈ ಬಾರಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಈ ನಿರುದ್ಯೋಗಿ ವಿರೋಧ ಪಕ್ಷದ ನಾಯಕರು ನನ್ನ ಮತ್ತು ಡಿಕೆ.ಶಿವಕುಮಾರ್ ಅವರ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ, ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎಂದು ಹೇಳಿದ್ದಾರೆ.

ಆರೋಪ ಮಾಡಿರುವ ಒಬ್ಬರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು, ಇನ್ನೊಬ್ಬರು ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಅವರ ಕಾಲದಲ್ಲಿ ಕೂಡಾ ಗುಪ್ತಚರ ವಿಭಾಗ ಮುಖ್ಯಮಂತ್ರಿಯವರ ಬಳಿಯೇ ಇತ್ತು. ಅವರ ಹೇಳಿಕೆಗಳನ್ನು ಗಮನಿಸಿದರೆ ಇವರಿಬ್ಬರೂ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿರುವಂತೆ ಕಾಣಿಸುತ್ತಿದೆ.

ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ಕಾಂಗ್ರೆಸ್ ಪಕ್ಷ ಎನ್ನುವುದು ಪ್ರಧಾನಿ ಎದುರು ಬಾಯಿ ಬಿಡಲಾಗದೆ ಕೈಕಾಲು ನಡುಗುವಂತಹ ಸ್ಥಿತಿ ಇರುವ ಬಿಜೆಪಿಯೂ ಅಲ್ಲ, ಏಕ ಕುಟುಂಬದ ಅಧಿಪತ್ಯ ಇರುವ ಜೆಡಿಎಸ್ ಕೂಡಾ ಅಲ್ಲ. ನಮ್ಮ ಶಾಸಕರಲ್ಲಿ ಯಾರೂ ಕೂಡಾ ನನ್ನ ಇಲ್ಲವೇ ಡಿ.ಕೆ. ಶಿವಕುಮಾರ್ ಬೆಂಬಲಿಗರಲ್ಲ, ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಜೊತೆಯಲ್ಲಿ ಊಟ ತಿಂಡಿ ಮಾಡುವ ಎಲ್ಲ ಸ್ವಾತಂತ್ರ್ಯಗಳು ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಅವರನ್ನೂ ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು. ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ ಎಂದು ತಿಳಿಸಿದ್ದಾರೆ.



ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಕೆಡಿಸಿ ಡಿ.ಕೆ. ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅವರ ಹಗಲು ಕನಸುಗಳಿಗೆ ಶುಭ ಹಾರೈಸುತ್ತೇನೆ. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ, ಸುಳ್ಳು ಕೇಸ್‌ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು ಎನ್ನುವುದು ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ.

ಕರ್ನಾಟಕದ ಇತ್ತೀಚಿನ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ದಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡಿರುವುದು. 2004ರಿಂದ 2013ವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು, 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ರಾಜ್ಯ ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ.

2018ರಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಆದಿಚುಂಚನಗಿರಿಯ ಪೂಜ್ಯ ನಿರ್ಮಲಾನಂದನಾಥ ಸ್ವಾಮಿಗಳ ಫೋನನ್ನೆ ಕದ್ದಾಲಿಸಿದ್ದಾರೆ ಎಂದು ಈಗಿನ ಅವರ ರಾಜಕೀಯ ಸಂಗಾತಿ ಬಿ.ವೈ.ವಿಜಯೇಂದ್ರ, ಅವರೇ ಆರೋಪ ಮಾಡಿದ್ದರು. ಇದರ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಒಬ್ಬ ಸ್ವಾಮೀಜಿಗಳದ್ದಷ್ಟೇ ಅಲ್ಲ, ಬದಲಿಗೆ ಏಳು ಸ್ವಾಮೀಜಿಗಳ ಫೋನ್‌ಗಳ ಕದ್ದಾಲಿಕೆ ಮಾಡಲಾಗಿದೆ ಎಂದು ತಿಳಿಸಿತ್ತು. ನಂಬಿಕೆಗೆ ತಾನು ಅರ್ಹ ಅಲ್ಲ ಎಂದು ಸಾಬೀತು ಮಾಡಿರುವ ಕುಮಾರಸ್ವಾಮಿವರನ್ನು ಬಿಜೆಪಿಯವರು ಸುಮ್ಮನೆ ಬಿಟ್ಟಾರೆಯೇ? ಅವರ ವಿರುದ್ಧವೂ ಗೂಢಚಾರರನ್ನು ಬಿಟ್ಟಿರಬಹುದು. ಇಂತಹ ದುರ್ಬುದ್ದಿಗಾಗಿಯೇ ರಾಜ್ಯದ ಜನತೆ ಈ ಎರಡೂ ಪಕ್ಷಗಳನ್ನು ತಿರಸ್ಕರಿಸಿರುವುದು ಎನ್ನುವುದು ನೆನಪಿರಲಿ.

ಅಧಿಕಾರವನ್ನು ದುರ್ಬಳಕೆ ಮಾಡಿ ಸರ್ಕಾರಿ ಯಂತ್ರಗಳ ಮೂಲಕವೇ ವಿರೋಧ ಪಕ್ಷದ ನಾಯಕರನ್ನು ಮಾತ್ರವಲ್ಲ, ಸ್ವಪಕ್ಷದಲ್ಲಿ ತಮ್ಮ ನಾಯಕತ್ವಕ್ಕೆ ಪೈಪೋಟಿ ನೀಡಬಲ್ಲ ನಾಯಕರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಪ್ರಯತ್ನವನ್ನು ಪ್ರಧಾನಿ ಮೋದಿ ಅವರು ತಾವು ಅಧಿಕಾರಕ್ಕೆ ಬಂದ ದಿನದಿಂದಲೇ ಮಾಡುತ್ತಿದ್ದಾರೆ ಎನ್ನುವುದು ಜಗಜ್ಜಾಹೀರಾಗಿರುವ ಸತ್ಯ. ಹಾಡಹಗಲೇ ಪೊಲೀಸ್, ಸಿಬಿಐ, ಇಡಿ, ಐಟಿ ಇಲಾಖೆಗಳ ದುರ್ಬಳಕೆಯಾಗುತ್ತಿರುವ ಬಗ್ಗೆ ಇಡೀ ದೇಶದ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇಂತಹವರು ತಮ್ಮ ರಾಜಕೀಯ ವಿರೋಧಿಗಳ ಫೋನ್‌ಗಳನ್ನು ಕದ್ದು ಆಲಿಸದೆ ಬಿಡುತ್ತಾರೆಯೇ? ಆದರೆ ಇಂತಹ ಬೆದರಿಕೆಗಳಿಗೆ ನಾನಾಗಲಿ, ನನ್ನ ಪಕ್ಷದ ಯಾವ ನಾಯಕರಾಗಲಿ ಜಗ್ಗುವವರಲ್ಲ, ಬಗ್ಗುವವರೂ ಅಲ್ಲ ಎಂದು ತಿರುಗೇಟು ನೀಡಿದ್ದಾರೆ.

ಕುಮಾರಸ್ವಾಮಿಯವರಿಗೆ ಈ ಗೂಢಚರ್ಯೆಯ ಪಾಠವನ್ನು ಅವರ ಪೂಜ್ಯ ತಂದೆಯವರೇ ಹೇಳಿಕೊಟ್ಟಿರಬಹುದು. ತನ್ನನ್ನು ಪ್ರಧಾನಿ ಮಾಡಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೀತಾರಾಂ ಕೇಸರಿಯವರ ವಿರುದ್ಧವೇ ಗೂಡಚರ್ಯೆ ಮಾಡಿದ್ದ ಕಾರಣಕ್ಕೆ ಕಾಂಗ್ರೆಸ್ ಪಕ್ಷ ತನ್ನ ಬೆಂಬಲವನ್ನು ಹಿಂದೆಗೆದುಕೊಂಡಿರುವುದು ಇತಿಹಾಸದ ಪುಟಗಳಲ್ಲಿದೆ. ಈ ಅಪನಂಬಿಕೆ ಮತ್ತು ಸಣ್ಣತನಗಳಿಂದಾಗಿ ಕನ್ನಡಿಗರೊಬ್ಬರು ಇನ್ನಷ್ಟು ಕಾಲ ಪ್ರಧಾನಿಯಾಗುವ ಅವಕಾಶ ತಪ್ಪಿಹೋಯಿತು ಎನ್ನುವುದು ವಿಷಾದನೀಯ ವಾಸ್ತವ.

ಹೆಚ್.ಡಿ. ಕುಮಾರಸ್ವಾಮಿ ಮತ್ತು ಆರ್.ಅಶೋಕ್ ಅವರು ತಮ್ಮ ಅಮೂಲ್ಯ ಕ್ಷಣಗಳನ್ನು ಈ ರೀತಿ ಕುಟಿಲ ರಾಜಕೀಯದಲ್ಲಿ ವ್ಯರ್ಥಮಾಡುವ ಬದಲಿಗೆ ರಚನಾತ್ಮಕ ವಿರೋಧ ಪಕ್ಷದ ರೀತಿಯಲ್ಲಿ ಕೆಲಸ ಮಾಡಿ ರಾಜ್ಯಕ್ಕೆ ಒಳ್ಳೆಯದನ್ನು ಮಾಡಲಿ ಎಂದು ಹಾರೈಸುತ್ತೇನೆ.

ರಾಜ್ಯದ ಪ್ರಜ್ಞಾವಂತ ಮತದಾರರು ಐದು ವರ್ಷಗಳ ಕಾಲ ಸರ್ಕಾರ ನಡೆಸಲು ನಮಗೆ ಜನಾದೇಶ ನೀಡಿದ್ದಾರೆ. ವಿರೋಧ ಪಕ್ಷಗಳ ಎಲ್ಲ ಕುತಂತ್ರಕುಚೇಷ್ಟೆಗಳ ನಡುವೆಯೂ ಈ ಅವಧಿಯನ್ನು ಕಾಂಗ್ರೆಸ್ ಪಕ್ಷ ಪೂರ್ಣಗೊಳಿಸಲಿದೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯೇ ಇರುತ್ತಾರೆಂದು ಹೇಳಿದ್ದಾರೆ. ☯

ಈ ನಡುವೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಮ್ಮ ಹಾಗೂ ಸಿಎಂ ಸಿದ್ದರಾಮಯ್ಯ ಸ್ನೇಹದ ಕುರಿತು ಮಾಧ್ಯಮ ಘೋಷ್ಠಿಯೊಂದರಲ್ಲಿ ಬಹಳ ಚನ್ನಾಗಿ ಮಾತನಾಡಿದ್ದಾರೆ. 'ಸಿಎಂ ಸಿದ್ದರಾಮಯ್ಯ ನಿಮಗೆ ಕುರ್ಚಿ ಬಿಟ್ಟು ಕೊಡ್ತಾ ಇಲ್ಲ! ಹೀಗಾಗಿ,ನಿಮ್ಮನ್ನು ರಾಜಕೀಯವಾಗಿ ಒಲಿಸಿಕೊಳ್ಳಲು ಬಿಜೆಪಿಜೆಡಿಎಸ್ ಪ್ರಯತ್ನ ನಡೆಸುತ್ತಿದೆಯೇ?! ಎಂದು ಯಾರೋ ಮಾರ್ಮಿಕವಾಗಿ ಕೇಳಿದಾಗ ಶಿವಕುಮಾರ್ ಅವರು 'ಮುಂದೊಂದು ದಿನ ಸಮಯ ಸಿಕ್ಕಾಗ ಪುಸ್ತಕ ಬರೆದು ಅದರಲ್ಲಿ ಎಲ್ಲವನ್ನೂ


## ನಮ್ಮಿಬ್ಬರದ್ದು ಹಾಲುಜೇನಿನ ಸಂಬಂಧ..!!

ವಿವರಿಸುತ್ತೇನೆ' ಎನ್ನಬೇಕೆ!! ಮುಂದುವರೆದು, 'ನನ್ನ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಬಂಧ ಹಾಲು ಜೇನಿನ ಸಂಬಂಧ. 2023ರ ಚುನಾವಣೆ ಮಾತ್ರವಲ್ಲ, 2028ರ ಚುನಾವಣೆಯಲ್ಲೂ ಅದು ಮುಂದುವರಿಯಲಿದೆ ಎಂದು ಡಿಸಿಎಂ ಡಿ.ಕೆ. ಶಿ ಹೇಳಿದ್ದಾರೆ.

'ನಮ್ಮಿಬ್ಬರ ಮಧ್ಯೆ ಹುಳಿ ಹಿಂಡಿ ಶಿವಕುಮಾರ್ ನನ್ನು ತಮ್ಮೆಡೆಗೆ ಒಲಿಸಿಕೊಳ್ಳಬಹುದು ಎಂಬ ದುರಾಲೋಚನೆ ಇದ್ದರೆ ಅದು ಹಗಲುಗನಸು.. ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊನ್ನೆಯಷ್ಟೇ ಹೇಳಿಕೊಂಡಿದ್ರು. ಈ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಮುಖ್ಯಮಂತ್ರಿಗಳು ತಮ್ಮ ಅನುಭವದ ಮಾತುಗಳನ್ನೇ ಹೇಳಿದ್ದಾರೆ. ಅವರು ಇಷ್ಟು ವರ್ಷಗಳಿಂದ ನನ್ನನ್ನು ನೋಡಿಕೊಂಡು ಬಂದಿದ್ದಾರೆ. ಅವರು ಬೇರೆ ಪಕ್ಷದಲ್ಲಿದ್ದಾಗಲೂ ನನ್ನನ್ನು ನೋಡಿದ್ದಾರೆ. ನಮ್ಮ ಪಕ್ಷಕ್ಕೆ ಬಂದ ಮೇಲಂತೂ ನನ್ನ ಅವರ ಸಂಬಂಧ ಬಹಳ ಹತ್ತಿರವಾಗಿದೆ. ನಾನು ಏನು ಎಂಬುದು ಅವರಿಗೆ ಚನ್ನಾಗಿ ಗೊತ್ತು..ಎಂದಿದ್ದಾರೆ.

ಗಮನಿಯ ಸಂಗತಿ ಏನೆಂದರೆ, ಮಾಧ್ಯಮದವರು ಈ ಪ್ರಶ್ನೆ ಕೇಳುವ ಮುನ್ನವೇ..ಮುಸಿ ಮುಸಿ ನಗುತ್ತಲೇ, 'ಮುಖ್ಯಮಂತ್ರಿ ಹುದ್ದೆ ಖಾಲಿಯಾಗುತ್ತದೆ, ಮುಖ್ಯಮಂತ್ರಿ ಸ್ಥಾನದಿಂದ ಇಳಿಯುತ್ತಾರೆ ಎಂದು ನಾನು ಯಾವತ್ತೂ ಮಾತನಾಡಿಲ್ಲ. ಮುಖ್ಯಮಂತ್ರಿ ಸ್ಥಾನ ಖಾಲಿ ಮಾಡಿಸಲು ಹೊರಟವರು ಬೇರೆಯವರಿದ್ದಾರೆ.. ಎಂದಿದ್ದಾರೆ.

ಮಾರ್ಚ್ 10 ರಂದು ಶಾಸಕರು, ವಿಧಾನಪರಿಷತ್ ಸದಸ್ಯರಿಗೆ ಭೋಜನ ಕೂಟ ಏರ್ಪಡಿಸಿರುವ ಕುರಿತು ಕೇಳಿದ್ದಕ್ಕೆ 'ನಾವೂ ಸಂಭ್ರಮಿಸಬೇಕಲ್ಲವೇ.. ಎಲ್ಲರನ್ನೂ ಊಟಕ್ಕೆ ಕರೆದಿದ್ದೇನೆ.ಭೋಜನ ಕೂಟಕ್ಕೆ ಮುಖ್ಯಮಂತ್ರಿ ಅವರನ್ನೂ ಆಹ್ವಾನಿಸುತ್ತಿದ್ದೇನೆ.. ಎಂದಿದ್ದಾರೆ! ☯



## ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡ್ತಾರಾ?!

ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ನಾಳೆ ಮಾರ್ಚ್ 10ಕ್ಕೆ ಭರ್ಜರಿ ಭೋಜನ ಕೂಟ ಏರ್ಪಡಿಸಿದ್ದಾರೆ. ಈ ಹಿನ್ನಲೆಯಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಪಕ್ಷದ ಮಂತ್ರಿಗಳು, ಶಾಸಕರು ಹಾಗೂ ಪರಿಷತ್ ಸದಸ್ಯರನ್ನೆಲ್ಲ ತಮ್ಮ ಬಂಗಲೆಗೆ ಆಹ್ವಾನಿಸಿದ್ದಾರೆ. ಈ ಔತಣ ಕೂಟ ನೀಡಲು ಕಾರಣವೇನು? ಎಂಬ ಪ್ರಶ್ನೆಗೆ ಡಿಕೆಶಿ, ತಾವು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ (ರಾಜ್ಯ) 6 ವರ್ಷ ತುಂಬುರುವುದಕ್ಕೆ ನಮ್ಮ ಮಿತ್ರರೊಂದಿಗೆ ಒಂದು ಸಂಭ್ರಮ ಆಚರಿಸಲಿಕ್ಕಾಗಿ ಎಂದಿದ್ದಾರೆ. ಆದರೆ, ರಾಜಕೀಯ ಪಂಡಿತರು ಹೇಳುತ್ತಿರುವುದೇ ಬೇರೆ.

ದಲಿತ ಸಿಎಂ ವಿಚಾರ ಮುಂದೆ ಬಂದಿರುವುದಕ್ಕೆ ಕೋಪಿಸಿಕೊಂಡಿರೋ ಡಿಕೆಶಿಯವರು, ಈ ಭೋಜನ ಕಾರ್ಯಕ್ರಮದ ಬಳಿಕ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿ, ಅನಂತರ ಪಕ್ಷದಲ್ಲೇ ಉಳಿದುಕೊಂಡು ಸಿದ್ದು ಅಂಡ್ ಟೀಮ್‌ಗೆ ಬೆಂಡ್ ಎತ್ತಲಿದ್ದಾರೆ ಎನ್ನುತ್ತಾರೆ!! ಡಿ.ಕೆ ಶಿವಕುಮಾರ್ ಅವರು ಹೊಸಬರು ಬರಬೇಕು, ತಾವು 'ಸ್ಟ್ರೀಟ್ ಫೈಟರ್' ಅಂತ ಈಗಾಗಲೇ ಘೋಷಿಸಿರುವುದನ್ನು ಗಮನಿಸಿದರೆ ತಜ್ಞರ ಅನುಮಾನ ನಿಜವಿರಬೇಕು ಎನ್ನಿಸುತ್ತಿದೆ!!! ☯



# ಶಿವನಹಳ್ಳಿ ದೋಸೆ ಕಾರ್ನರ್‌ನಲ್ಲಿ ಶಶಿಕುಮಾರ್ ಕಗ್ಗೊಲೆ!




ಕೊಲೆಯಾದ ಶಶಿಕುಮಾರ್


ಬೆಂಗಳೂರು ಐಟಿ ಹಬ್ ಎಂಬ ಹೊದಿಕೆಯ ಅಡಿಯಲ್ಲಿ ಇಂದು ಕ್ರೌರ್ಯದ ಬೇರುಗಳು ಆಳವಾಗಿ ಇಳಿಯುತ್ತಿವೆ. ಹಗಲಿನಲ್ಲಿ ಸಂಭ್ರಮದಿಂದ ಕೂಡಿರುವ ಈ ನಗರದ ಬೀದಿಗಳು, ಇರುಳಾಗುತ್ತಲೇ ಅನಿಶ್ಚಿತತೆಯ ಆಳಕ್ಕೆ ಜಾರುತ್ತಿವೆ. ರಾತ್ರಿ ವೇಳೆ ಒಂದು ತಟ್ಟೆ ದೋಸೆ ತಿನ್ನಲು ಹೊರ ಹೋಗುವುದು ಇಂದು ಸಾಮಾನ್ಯ ಜೀವನದ ಭಾಗ ಹೌದು, ಆದರೆ ಅದೇ ಹಾದಿಯಲ್ಲಿ ಸಾವಿನ ನೆರಳು ಹೊಂಚು ಹಾಕಿ ಕುಳಿತಿರುತ್ತದೆ ಎಂಬುದು ಅತ್ಯಂತ ಭೀಕರ ವಾಸ್ತವ. ಇತ್ತೀಚೆಗೆ ಬಸವೇಶ್ವರನಗರದಲ್ಲಿ ನಡೆದ ಪೈಶಾಚಿಕ ಕೃತ್ಯವು, ನಗರದ ನೈತಿಕ ಅಧಃಪತನ ಹಾಗೂ ಹದಗೆಡುತ್ತಿರುವ ಕಾನೂನು ಸುವ್ಯವಸ್ಥೆಯ ಕರಾಳ ಮುಖಕ್ಕೆ ಹಿಡಿದ ಕನ್ನಡಿಯಾಗಿದೆ. ಈ ಲೇಖನವು ನಡುರಾತ್ರಿಯ ರಕ್ತಚರಿತ್ರೆಯ ಪೂರ್ಣ ವಿವರಗಳನ್ನು ನಿಮ್ಮ ಮುಂದಿಡುತ್ತಿದೆ.

### ಆ ಕರಾಳ ರಾತ್ರಿ...

ನಗರದ ಪಶ್ಚಿಮ ವಲಯದ ಜನನಿಬಿಡ ಪ್ರದೇಶವಾದ ಬಸವೇಶ್ವರನಗರದ ಶಿವನಹಳ್ಳಿಯಲ್ಲಿ ಈ ರಕ್ತಸಿಕ್ತ ಘಟನೆ ಸಂಭವಿಸಿದೆ. ಸುಮಾರು ರಾತ್ರಿ 11.30 ರ ವೇಳೆಗೆ ಇಡೀ ಬಡಾವಣೆ ಶಾಂತವಾಗುತ್ತಿದ್ದಾಗ, ಶಶಿಕುಮಾರ್ ಎಂಬ ವ್ಯಕ್ತಿಯನ್ನು ಅತ್ಯಂತ ಕ್ರೂರವಾಗಿ ಹತ್ಯೆ ಮಾಡಲಾಗಿದೆ. ಈ ಘಟನೆಯು ಸ್ಥಳೀಯ ನಿವಾಸಿಗಳಲ್ಲಿ ತೀವ್ರ ಆತಂಕವನ್ನು ಮೂಡಿಸಿದ್ದು, ಬೆಂಗಳೂರಿನ ನಡುರಾತ್ರಿಯ ಭದ್ರತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.



ಡಿಸಿಪಿ ಎನ್. ಯತೀಶ್



ಎಸಿಪಿ ಚಂದನ್‌ಕುಮಾರ್

### ಹಸಿವು ನೀಗಿಸಲು ಹೋದವನಿಗೆ ಕಾದಿತ್ತು ಮೃತ್ಯು!

ಬೆಂಗಳೂರಿನ 'ಸ್ಟ್ರೀಟ್ ಫುಡ್' ಸಂಸ್ಕೃತಿ ಇಂದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಆದರೆ, ಇಂತಹ ಜನಸಾಮಾನ್ಯರ ತಾಣಗಳು ಇಂದು ಘರ್ಷಣೆಯ ಕೇಂದ್ರಗಳಾಗಿ ಬದಲಾಗುತ್ತಿರುವುದು ಆತಂಕದ ಸಂಗತಿ. ಶಶಿಕುಮಾರ್ ಆ ರಾತ್ರಿ ಬಸವೇಶ್ವರ ನಗರದ ಜನಪ್ರಿಯ ಹೋಟೆಲ್‌ಗೆ ಊಟಕ್ಕಾಗಿ ಬಂದಿದ್ದರು. ಸಾರ್ವಜನಿಕರು ಓಡಾಡುವ ಹೋಟೆಲ್ ಮುಂಭಾಗದಲ್ಲೇ ಈ ಕೊಲೆ ನಡೆದಿದೆ ಎಂದರೆ, ಅಪರಾಧಿಗಳಲ್ಲಿ ಕಾನೂನಿನ ಭಯ ಎಷ್ಟು ಕಡಿಮೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

'ಶ್ರೀ ಗುರು ರಾಘವೇಂದ್ರ ವೆಜ್ - ದೋಸೆ ಕಾರ್ನರ್ ಬಳಿ ಘಟನೆ, ರಾತ್ರಿ ಊಟ ಮಾಡಲು ಅಂತಾ ಬಂದಿದ್ದ ಶಶಿಕುಮಾರ್, ಈ ವೇಳೆ ಗಲಾಟೆ ಆಗಿ ಇಬ್ಬರು ವ್ಯಕ್ತಿಗಳಿಂದ ಇರಿದು ಕೊಲೆ.' ಸಾಮಾನ್ಯ ನಾಗರಿಕರು ನೆಮ್ಮದಿಯಿಂದ ಊಟ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿರುವುದು ನಾಗರಿಕ ಸಮಾಜಕ್ಕೆ ಹಿಡಿದ ಕಪ್ಪುಚುಕ್ಕೆಯಾಗಿದೆ.

### ಆವೇಶದ ಹಿಂದಿದ್ದ ಮಾರಕಾಸ್ತ್ರಗಳ ಗುಟ್ಟು...

ಈ ಹತ್ಯೆಯು ಕೇವಲ ಅಚಾನಕ್ ನಡೆದ ಜಗಳದಂತೆ ಮೇಲ್ನೋಟಕ್ಕೆ ಕಂಡರೂ, ದಾಳಿಕೋರರು ಹೊತ್ತು ತಂದಿದ್ದ ಆಯುಧಗಳು ಬೇರೆಯದೇ ಕಥೆ ಹೇಳುತ್ತಿವೆ. ದುಷ್ಕರ್ಮಿಗಳು ದಾಳಿಗೆ ಬಳಸಿದ ಆಯುಧಗಳು ಹೀಗಿವೆ: ಚಾಕು. ಡ್ರ್ಯಾಗರ್ ಸಾಮಾನ್ಯವಾಗಿ ಕ್ಷಣಿಕ ಕೋಪದಲ್ಲಿ ಕೈಗೆ ಸಿಕ್ಕಿದ್ದನ್ನು ಬಳಸುವುದಕ್ಕಿಂತ ಹೆಚ್ಚಾಗಿ, 'ಡ್ರ್ಯಾಗರ್'ನಂತಹ ಮಾರಕಾಸ್ತ್ರಗಳನ್ನು ಜೊತೆಯಲ್ಲಿ ಇಟ್ಟುಕೊಂಡಿರುವುದು ಅಪರಾಧಿಗಳ ಕ್ರಿಮಿನಲ್ ಮನೋಭಾವವನ್ನು ಎತ್ತಿ ತೋರಿಸುತ್ತದೆ. ಡ್ರ್ಯಾಗರ್ ಬಳಕೆಯು ಈ ಕೃತ್ಯದಲ್ಲಿ ಕೇವಲ ಆವೇಶವಿಲ್ಲ, ಬದಲಾಗಿ ಎದುರಾಳಿಯನ್ನು ಮುಗಿಸಲೇಬೇಕು ಎಂಬ ಬಲವಾದ ಉದ್ದೇಶವಿತ್ತು ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ.

ಈ ಭೀಕರ ಹತ್ಯೆಯ ಹಿಂದಿನ ಉದ್ದೇಶದ ಬಗ್ಗೆ ಪೊಲೀಸ್ ತನಿಖೆ ಈಗ ಎರಡು ಆಯಾಮಗಳಲ್ಲಿ ಸಾಗುತ್ತಿದೆ. ಹೋಟೆಲ್ ಬಳಿ ಊಟದ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ 'ಇನ್‌ಸ್ಟಂಟ್ ರೇಜ್' ಅಥವಾ ಕ್ಷಣಿಕ ಕೋಪದ ಜಗಳವೇ ಈ ಸಾವಿಗೆ ಕಾರಣವೇ? ಅಥವಾ ಹಳೆಯ ವೈಷಮ್ಯವನ್ನು ತೀರಿಸಿಕೊಳ್ಳಲು ಈ ಸ್ಥಳವನ್ನು ಬಳಸಿಕೊಳ್ಳಲಾಯಿತೇ? ಎಂಬ ಸಂಶಯ ದಟ್ಟವಾಗಿದೆ. ನಗರದ ಯುವಜನತೆಯಲ್ಲಿ ಹೆಚ್ಚುತ್ತಿರುವ ಅಸಹನೆ ಮತ್ತು ಸಣ್ಣ ಕಾರಣಗಳಿಗಾಗಿ ಪ್ರಾಣ ತೆಗೆಯುವ ಮಟ್ಟಕ್ಕೆ ಹೋಗುತ್ತಿರುವ ಪ್ರವೃತ್ತಿ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡವುತ್ತಿದೆ.

### ಪೊಲೀಸ್ ತನಿಖೆ ಮತ್ತು ಕಾನೂನು ಸುವ್ಯವಸ್ಥೆ

ಘಟನೆಯ ತೀವ್ರತೆಯನ್ನು ಅರಿತ ಬಸವೇಶ್ವರನಗರ ಪೊಲೀಸರು ತಕ್ಷಣವೇ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ್ದಾರೆ. ಇಬ್ಬರು ವ್ಯಕ್ತಿಗಳು ಈ ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದ್ದು, ಸಿಸಿಟಿವಿ ದೃಶ್ಯಾವಳಿ ಹಾಗೂ ಇತರೆ ಸಾಕ್ಷ್ಯಗಳ ಆಧಾರದ ಮೇಲೆ ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ. ಈ ಘಟನೆಯು ನಗರದ ಕಾನೂನು ಸುವ್ಯವಸ್ಥೆಯ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದ್ದು, ಗಸ್ತು ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವ ಅನಿವಾರ್ಯತೆಯನ್ನು ಸಾರುತ್ತಿದೆ.

ಡಿಯರ್ ರೀಡರ್ಸ್, ಬೆಂಗಳೂರು ಬೆಳೆಯುತ್ತಿದೆ, ಆದರೆ ಅದರ ಜೊತೆಗೆ ಇಲ್ಲಿನ ಜನರ ಸುರಕ್ಷತೆಯ ಭರವಸೆ ಕುಸಿಯುತ್ತಿದೆ. ಮನೆಯಿಂದ ಹೊರ ಹೋದವರು ನೆಮ್ಮದಿಯಿಂದ ಮನೆಗೆ ಮರಳುತ್ತಾರೆ ಎಂಬ ನಂಬಿಕೆ ಇಂದು ಅಲುಗಾಡುತ್ತಿದೆ. ಕ್ಷುಲ್ಲಕ ಕಾರಣಗಳು ಬೀದಿಗಳಲ್ಲಿ ರಕ್ತ ಹರಿಸುತ್ತಿರುವುದು ದೌರ್ಭಾಗ್ಯದ ಸಂಗತಿ. ಇಂತಹ ಘಟನೆಗಳು ಕೇವಲ ಸುದ್ದಿಯಾಗಬಾರದು, ಬದಲಾಗಿ ನಮ್ಮ ನಗರದ ಸುರಕ್ಷಾ ವ್ಯವಸ್ಥೆಯ ಮರುಪರಿಶೀಲನೆಗೆ ನಾಂದಿಯಾಗಬೇಕು.



ಘಟನೆ ನಡೆದ ದೋಸೆ ಕಾರ್ನರ್

### ಅಂತಿಮವಾಗಿ ನಮ್ಮನ್ನು ಕಾಡುವ ಪ್ರಶ್ನೆ...

ನಮ್ಮ ನಗರದ ಬೀದಿಗಳಲ್ಲಿ ರಾತ್ರಿ ವೇಳೆ ಸಂಚರಿಸುವುದು ನಿಜಕ್ಕೂ ಸುರಕ್ಷಿತವೇ? ಅಥವಾ ಇಂತಹ ಕ್ಷುಲ್ಲಕ ಜಗಳಗಳು ಪ್ರಾಣಕ್ಕೆ ಸಂಚಕಾರ ತರುತ್ತವೆಯೇ? ಬೀದಿ ನಾಯಿ ಬೀಡಾಡಿ ದನಗಳಿಗಿರೋ ಬೆಲೆ ಕೂಡ ಮನುಷ್ಯರ ಪ್ರಾಣಕ್ಕಿಲ್ಲವಲ್ರಿ! ಪೊಲೀಸರು ತಾನೇ ಏನು ಮಾಡ್ತಾರೆ ಅಲ್ವೇ. ಅರೆಸ್ಟ್ ಮಾಡ್ತಾರೆ, ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸ್ತಾರೆ. ಬಿಡಿಸಿಕೊಂಡು ಬರಲು ನ್ಯಾಯವಾದಿಗಳು ನಾ ಮುಂದು ತಾ ಮುಂದು



ಬಂಧಿತ ಆರೋಪಿಗಳು

ಅಂತ ನಿಂತಿರುತ್ತಾರೆ. ಈ ಕೋರ್ಟ್ ಇಲ್ಲಾಂದ್ರೆ ಆ ಕೋರ್ಟ್, ಆ ಕೋರ್ಟ್ ಇಲ್ಲಾಂದ್ರೆ ಈ ಕೋರ್ಟ್. ಎರಡೂ ಇಲ್ಲಾಂದ್ರೆ ಮತ್ತೊಂದು..ನ್ಯಾಯವೆಲ್ಲಿ ನ್ಯಾಯವೆಲ್ಲಿ ಅಡಗಿದೆ?! ನಮ್ಮ ಪೊಲೀಸ್‌ನವರು ಸಮಾಜಕ್ಕೆ ಒಂದೊಳ್ಳೆ ಕೆಲಸ ಮಾಡಬೇಕು ಅಂತ ಬಯಸಿದರೆ, ಪಾತಕಿಗಳನ್ನ ಪ್ರಾಥಮಿಕ ಹಂತದಲ್ಲೇ ಸಿಗಿದು ತೋರಣ ಕಟ್ಟಬೇಕು. ನರ ನಾಡಿ ಎಲ್ಲಾ ಕಿತ್ತು ಬಿಸಾಡಬೇಕು... ಪೊಲೀಸ್ ಅಂದ್ರೆ ಕ್ರೈಂ ಮಾಡಿದವರು ನಿದ್ದೆಯಲ್ಲೂ ಬೆಚ್ಚಿಬಿದ್ದು ಹೇತ್ಕೋಬೇಕು. ಹಾಗೆ ಮಾಡಿದರೆ ಮಾತ್ರ ಪಾತಕಿಗಳ ಸಂಖ್ಯೆ ಕಮ್ಮಿಯಾಗಬಹುದು!

### ಪೋಷಕರೇ, ನಿಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಿ..

ಇವತ್ತಿನ ಪೋಷಕರು ತಮ್ಮ ಮಕ್ಕಳನ್ನು ಬ್ರಾಂಡೆಡ್ಕಾನ್ವೆಂಟ್, ಇಂಗ್ಲೀಷ್ ಸ್ಕೂಲ್‌ಗಳಿಗೆ ಸೇರಿಸುವುದರಲ್ಲೇ ಏನೋ ಸಾಹಸ ಮಾಡಿಬಿಟ್ಟೆವು ಅಂದುಕೊಂಡು ಬೀಗುತ್ತಾರೆ. ಮಕ್ಕಳಿಗೆ ಮುಖ್ಯವಾಗಿ ಕಲಿಸಬೇಕಾದ್ದನ್ನೇ ಕಳುಸುವುದಿಲ್ಲ. ಹಿರಿಯರನ್ನು ಗೌರವಿಸುವ, ಕಿರಿಯರನ್ನು ಪ್ರೀತಿಸುವ, ಬಡ ಬಗ್ಗರನ್ನು ಆಧರಿಸುವ ಸಂಸ್ಕಾರ ಕಲಿಸಬೇಕು ಕಣ್ರೀ. ನೀ ಏನಾದರೂ ಆಗು, ಮೊದಲು ಮಾನವನಾಗು ಎಂಬ ನಾಣ್ನುಡಿಯನ್ನು ಜಗತ್ತಿಗೆ ಸಾರಿದ್ದಾರೆ, ನಮ್ಮ ಕುವೆಂಪು. ಮನುಷ್ಯರಿಗೆ ಮಾನವೀಯತೆಯೇ ನಿಜವಾದ ಆಭರಣ. ತಂದೆ ತಾಯಿ / ಪೋಷಕರು ತಮ್ಮ ಮಕ್ಕಳಿಗೆ ಮೊದಲಿಗೆ ಮಾನವೀಯತೆ ಕಲಿಸಬೇಕು. ಮನೆಯೇ ಮೊದಲ ಶಾಲೆ, ತಂದೆ ತಾಯಿಯೇ ಮೊದಲ ಗುರುಗಳು.. ಮರೆಯಬೇಡಿ. ಇದನ್ನು ಮರೆತು ಇಂಗ್ಲೀಷ್ ಸ್ಕೂಲ್‌ನಲ್ಲಿ ಓದಿಸಿಬಿಟ್ರೆ ಏನ್ ಬಂತು ಭಾಗ್ಯ..

ಇವತ್ತು ಕಾಲು ತುಳಿದುಬಿಟ್ಟ, ಕೆಕ್ಕರಿಸಿ ನೋಡಿಬಿಟ್ಟ, ಸೈಡ್ ಬಿಡಲಿಲ್ಲ... ಮುಂತಾದ ಕ್ಷುಲ್ಲಕ ಕಾರಣಕ್ಕೆ ಕೊಲೆ ಮಾಡ್ತಾರೆ ಹೈಕ್ಳು ಅಂದ್ರೆ ಅದು ಅವರ ತಪ್ಪಲ್ಲ, ಅಂತ ರಾಕ್ಷಸರನ್ನು ಹೆತ್ತವರು ನಿಮ್ಮ ತಪ್ಪು... ☯




# ರೈಲಿಗೆ ತಲೆಕೊಡುವಾಗ ಅಪ್ಪ ಅಮ್ಮ ಮಡದಿ ಮಕ್ಕಳು ನೆನಪಾಗಲಿಲ್ಲವೇ...

**ಕ**ಳೆದ ಗುರುವಾರ ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿದ್ದೆ. ಬೆಂಗಳೂರಿಗೆ ಹೋಗುವಾಗಲೆಲ್ಲ ರೈಲಿನಲ್ಲೇ ಹೋಗುವುದು ಅಭ್ಯಾಸ. ಆ ದಿನವೂ ಕೂಡ ಬೆಳಗ್ಗೆ 8.20 ಕ್ಕೆ ಮೈಸೂರಿನ ಅಶೋಕಪುರಂ ನಿಂದ ಮಾಲ್ಗುಡಿ ಎಕ್ಸ್‌ಪ್ರೆಸ್ ಹಿಡಿದು ಹೊರಟೆ. ಹೋಗುವಾಗ ಸಂಪೂರ್ಣ ಸಮಯ ಕೆಲಸದ ಬಗೆಗಿನ ಯೋಜನೆಗಳೇ ಇದ್ದವು. ಕೆಲಸ ಮುಗಿಸಿ ಮರಳಿ ಬಂದದ್ದು ಪ್ಯಾಸೆಂಜರ್ ಒಂದರಲ್ಲಿ ಜನ ಹೆಚ್ಚಿದ್ದ ಕಾರಣ ಚನ್ನಪಟ್ಟಣದವರೆಗೆ ನಿಂತೇ ಬಂದೆ. ನಂತರ ಕೂತು ಕಿಟಕಿ ಕಡೆ ನೋಡುವಾಗ ತಲೆಯಲ್ಲಿ ಸಾಕಷ್ಟು ಆಲೋಚನೆಗಳು ಬಂದು ಹೋದವು. ರೈಲಿಗೆ ತಲೆ ಕೊಡುವಾಗ ಭಯ ಆಗುವುದಿಲ್ಲವಾ. ಹೆತ್ತವಳು ಕಣ್ಣ ಮುಂದೆ ಬರುವುದಿಲ್ಲವಾ. ನಾವು ಹುಟ್ಟಿಸಿದ ಮಕ್ಕಳ ಕರ್ತವ್ಯಗಳು ನೆನಪಾಗುವುದಿಲ್ಲವಾ. ಜೀವನವೇ ನೀನೆಂದು ಬದುಕು ಹಂಚಿಕೊಂಡ ಸಂಗಾತಿಯನು ಒಂಟಿಯಾಗಿ ಬಿಡುತ್ತಿದ್ದೇನೆ ಎನಿಸುವುದಿಲ್ಲವಾ. ಹೀಗೆ ನಾನಾ ಪ್ರಶ್ನೆಗಳು ತಲೆಯಲ್ಲಿ ಬಂದವು. ರೈಲಿನ ಬಾಗಿಲಿನ ಬಂದು ನಿಂತೆ. ಎದೆ ಕಂಪಿಸಿತು. ಕೈ ಕಾಲುಗಳು ನಡುಗಲು ಆರಂಭಿಸಿದವು. ಮರಳಿ ಹೋಗಿ ಸೀಟಿನಲ್ಲಿ ಕೂತುಬಿಟ್ಟೆ.

ಇಷ್ಟೆಲ್ಲಾ ಆಲೋಚನೆಗಳು ತಲೆಯಲ್ಲಿ ಬರಲು ಕಾರಣ ನಾನು ಬೆಂಗಳೂರಿಗೆ ಹೋಗಿದ್ದ ಗುರುವಾರಕ್ಕೆ ಸರಿಯಾಗಿ ಒಂದು ವಾರದ ಹಿಂದೆ ಮಂಡ್ಯದ ಶುಗರ್ ಟೌನ್ ಬಳಿ ಬಿಜಾಪುರಕ್ಕೆ ತೆರಳುತ್ತಿದ್ದ ಗೋಲ್ ಗುಂಬಾಜ್ ಎಕ್ಸ್‌ಪ್ರೆಸ್ ರೈಲಿಗೆ ತಲೆಕೊಟ್ಟು ವ್ಯಕ್ತಿ ಒಬ್ಬರು ಜೀವ ಕಳೆದುಕೊಂಡಿದ್ದರು. ಆ ವ್ಯಕ್ತಿಯ ಹೆಸರು ಭರತ್ ರಾಜ್. ಮಂಡ್ಯದ ಮನ್ ಮುಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ.

ನಾವು ಹುಟ್ಟಿ ಬೆಳೆದಿದ್ದೆಲ್ಲಾ ಹೆಚ್.ಡಿ. ಕೋಟೆಯಲ್ಲೇ. ನಮ್ಮ ಮನೆ ಇದ್ದ ರೋಡಿನ ಪಕ್ಕದ ರಸ್ತೆಯಲ್ಲಿಯೇ ಇವರ ಮನೆ. ಅಣ್ಣನ ವಯಸ್ಸಿನವ. ನಾವು ಅಲ್ಲಿ ಇಲ್ಲಿ ಸಮಾರಂಭಗಳಲ್ಲಿ ನೋಡಿದ್ದಷ್ಟೇ. ಅಣ್ಣನಿಗೆ ಪರಿಚಯ ಹೆಚ್ಚು. ಇತ್ತ ಅವರ ತಂದೆ ತಾಯಿ ನಮ್ಮ ಕುಟುಂಬಕ್ಕೆ ಸಮಾರಂಭಗಳಿಗೆ ಆಹ್ವಾನ ನೀಡುವಷ್ಟು ಪರಿಚಯಸ್ತರು. ಒಟ್ಟಿನಲ್ಲಿ ಶಾಲಾ ದಿನಗಳಲ್ಲಿ ಇವರುಗಳನ್ನೆಲ್ಲಾ ನೋಡಿ ಬೆಳೆದಿದ್ದ ದಿನಗಳು ಎನ್ನಬಹುದು.

ಇವರ ತಂದೆ ತಾಯಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಗಂಡು ಮಗನೇ ಈ ಭರತ್ ರಾಜ್. ಚೆನ್ನಾಗಿ ಓದಿ ಮನ್ ಮುಲ್‌ನಲ್ಲಿ ಕೆಲಸಕ್ಕೂ ಸೇರಿಕೊಂಡು ಒಳ್ಳೆಯ ಜೀವನ ನಡೆಸುತ್ತಿದ್ದರು. ಮನೆಕಡೆ ಅನುಕೂಲಸ್ಥರೇ. ಕೆಲ ವರ್ಷಗಳ ಹಿಂದಷ್ಟೇ ಮದುವೆಯಾಗಿ ಮುದ್ದಾದ ಗಂಡು ಮಗುವೂ ಆಗಿತ್ತು. ಸೋಷಿಯಲ್ ಮೀಡಿಯಾದಲ್ಲಿ ಪತ್ನಿಯೊಟ್ಟಿಗಿನ ಫೋಟೋಗಳನ್ನು ವೀಡಿಯೋಗಳನ್ನು ಹಂಚಿಕೊಳ್ಳುತ್ತಿದ್ದದ್ದೂ ಉಂಟು. ಇವರನ್ನು ನೋಡಿ ನಾವೂ ಹಿಂಗೆ ಇರಬೇಕು ಅಂತ ಅಂದುಕೊಂಡ ಜೋಡಿಗಳೂ ಉಂಟು. ಅದೇ ಕಾರಣಕ್ಕೆ ಲಕ್ಷಕ್ಕೂ ಅಧಿಕ ಫಾಲೋವರ್ಸ್‌ಗಳು ಕೂಡ ಈ ಜೋಡಿಗೆ ಇದ್ದರು.

ಆದರೆ ಇದ್ದಕಿದ್ದ ಹಾಗೆ ಕಳೆದ ಗುರುವಾರ ಅಂದರೆ ಹನ್ನೊಂದು ದಿನಗಳ ಹಿಂದೆ ಸಂಜೆ ಭರತ ರೈಲಿಗೆ ಈ ರೀತಿ ಮಾಡಿಕೊಂಡು ತೀರಿಕೊಂಡಿದ್ದಾನೆ ಎಂದು ಅಣ್ಣ ಬಂದು ಅಮ್ಮನ ಬಳಿ ಹೇಳಿದಾಗ ಒಂದು ರೀತಿ ಶಾಕ್ ಆಗಿತ್ತು. ಹೇ ಸುಳ್ಳಿರಬಹುದು ಎಂದು ಸುಮ್ಮನಾದೆವು. ಆದರೂ ಅದ್ಯಾಕೋ ಮನಸ್ಸು ತಡೆಯದೇ ನಮ್ಮ ಪತ್ರಿಕಾ ವರದಿಗಾರರೊಬ್ಬರಿಗೆ ಫೋನ್ ಮಾಡಿ ಯಾವುದಾದರೂ ಕೇಸ್ ರಿಪೋರ್ಟ್ ಆಗಿದೆಯಾ ಎಂದು ಕೇಳಿದೆ. ಆಗ ವಿಚಾರ ಖಚಿತವಾಯಿತು.

ವಯಸ್ಸು 35-36 ಇರಬಹುದಷ್ಟೇ. ಇಷ್ಟು ಚಿಕ್ಕ ವಯಸ್ಸಿಗೆ ಅಷ್ಟು ಸುಂದರ ಸಂಸಾರವನ್ನು ಬಿಟ್ಟು ಹೋಗುವುದು ಅಂದರೆ ನಿಜಕ್ಕೂ ನಾನಾ ಪ್ರಶ್ನೆಗಳು ಹುಟ್ಟಿಕೊಂಡಿದ್ದವು. ಸಂಬಂಧಿಕರು ಸಾವಿಗೆ ಹೋಗಿ ಬಂದಾಗ ಹಣಕಾಸಿನ ವಿಚಾರಕ್ಕೆ ಎನ್ನುವ ಕಾರಣ ತಿಳಿಯಿತು. ನಂತರದಲ್ಲಿ ಪತ್ರಿಕೆಯಲ್ಲಿಯೇ ಆನ್ ಲೈನ್ ಟ್ರೇಡಿಂಗ್‌ನಲ್ಲಿ ಹಣ ಕಳೆದುಕೊಂಡದ್ದು




ಎನ್ನುವುದು ವರದಿಯಾಯ್ತು. ನಿಜಕ್ಕೂ ತೀರಾ ಬೇಸರವಾಯ್ತು. ನಾವು ಕಂಡಂತ ಹುಡುಗನೇ. ಸೋಷಿಯಲ್ ಮೀಡಿಯಾ ಬಳಸುವಾಗ ಪತ್ನಿ ಜೊತೆಗಿನ ಫೋಟೋ ನೋಡಿ ಅಮ್ಮನಿಗೆ ತೋರಿಸಿದ್ದೂ ಉಂಟು. ಅಷ್ಟು ಸುಂದರ ಸಂಸಾರ ಅವರದ್ದು.

ಆದರೆ ಆನ್‌ಲೈನ್ ಹಣದ ವಿಚಾರಕ್ಕೆ ಜೀವವನ್ನೇ ಕಳೆದುಕೊಳ್ಳುವ ನಿರ್ಧಾರ ಮಾಡಿದ್ದಾರೆಂದರೆ ನಿಜಕ್ಕೂ ಸಂಕಟವಾಗುತ್ತದೆ. ದಯವಿಟ್ಟು ಆನ್ ಲೈನ್‌ನಲ್ಲಿ ಆಡುವ ಆಟಗಳು ಜೀವ ಜೀವನ ಎಲ್ಲವನ್ನೂ ಕಸಿದುಕೊಂಡು ಬಿಡುತ್ತದೆ. ದಯವಿಟ್ಟು ಅಂತಹ ಅಭ್ಯಾಸ ಇರುವವರು ನಿಮ್ಮ ಕುಟುಂಬದ ಮುಖವನ್ನೊಮ್ಮೆ ನೋಡಿ ಬಿಟ್ಟುಬಿಡಿ. ಬೀದಿಗೆ ಬಂದ ನಂತರ ಜೀವ ಕಳೆದುಕೊಂಡರೆ ನಿಮ್ಮನ್ನೇ ನಂಬಿಕೊಂಡ ಜೀವಗಳು ತಮ್ಮ ಜೀವನಪೂರ್ತಿ ಕೊರಗುತ್ತಲೇ ಇರಬೇಕಾಗುತ್ತದೆ.

ಇನ್ನು ಕಾರಣ ಏನೇ ಇರಲಿ. ಇರುವುದೊಂದು ಬದುಕು. ಇದ್ದು ಎದುರಿಸಬೇಕೇ ಹೊರತು ಕಣ್ಮರೆಯಾಗಿ ಹೆತ್ತ ಕರುಳಿಗೆ ಕಣ್ಣೀರು ತರಿಸಬಾರದು. ಆ ಕೊನೆಯ ಕ್ಷಣ ಇನ್ನೇನು ರೈಲು ಬರುತ್ತಿದೆ ಎನ್ನುವಾಗಲಾದರೂ ಹೆಂಡತಿ ನಿನಪಾಗಲಿಲ್ಲವೇ. ಮಗನ ಮುಖ ಕಣ್ಣ ಮುಂದೆ ಬರಲಿಲ್ಲವೇ? ಎನ್ನುವ ಹತ್ತಾರು ಪ್ರಶ್ನೆಗಳಿವೆ. ಆದರೆ ಉತ್ತರ ಕೊಡಲು ಭರತನಿಲ್ಲ ಅಷ್ಟೇ. ದಯವಿಟ್ಟು ಅಂತಹ ಆನ್ಲೈನ್ ಆಟಗಳ ಅಭ್ಯಾಸ ಇರುವವರು ದಯಮಾಡಿ ಬಿಟ್ಟುಬಿಡಿ.

ನಿನ್ನೆ ಭರತನ ಹನ್ನೊಂದು ದಿನಗಳ ಕಾರ್ಯವನ್ನು ಮಾಡಿ ಮುಗಿಸಿದ್ದಾರೆ. ಬಂದ ನೆಂಟರಿಷ್ಟರು ಮನೆಗೆ ಮರಳುತ್ತಾರೆ. ನಾಳೆ ಮತ್ತೊಂದು ಕಾರ್ಯಕ್ಕೋ ಸಮಾರಂಭಕ್ಕೋ ಹೋಗುತ್ತಾರೆ. ದಿನಕಳೆದಂತೆ ಭರತನನ್ನು ಮರೆಯುತ್ತಾರೆ. ಆದರೆ ಆತನ ಕುಟುಂಬದ ಕತೆ. ಆತನನ್ನು ಹೆತ್ತ ತಾಯಿಯ ಕತೆ. ಆತನೇ ಸರ್ವಸ್ವ ಎಂದು ನಂಬಿಕೊಂಡು ಬಂದ ಹೆಣ್ಣು ಮಗಳ ಕತೆ. ಅಪ್ಪನನ್ನು ಹೀರೋ ಆಗಿ ನೋಡುವ ವಯಸ್ಸಿನ ಆ ಕಂದನ ಕತೆ. ತಿಳಿಯದು. ಭಗವಂತ ಅವರನ್ನೆಲ್ಲಾ ಗಟ್ಟಿ ಮಾಡಿ ಬಿಡಲಿ ಅಷ್ಟೇ...

# ಮಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆಗೆ ಖಡಕ್ ಹಿಡಿತ: ಕಮೀಷನರ್ ಸಿ.ಹೆಚ್. ಸುಧೀರ್‌ಕುಮಾರ್ ರೆಡ್ಡಿ

**ಅಂ**ದರೆ ಕರ್ನಾಟಕ ರಾಜ್ಯದಲ್ಲಿ ಮತ್ತು ತೆಲಂಗಾಣ ರಾಜ್ಯದಲ್ಲಿ ಹಾಗೂ ಆಂಧ್ರಪ್ರದೇಶದಲ್ಲಿ ಅವರು ಕರ್ತವ್ಯ ನಿರ್ವಹಿಸಿದ ಜಿಲ್ಲೆಗಳಲ್ಲಿ ಹೆಸರುವಾಸಿ. ಇವರ ಆತ್ಮೀಯತೆ, ಹೃದಯವಂತಿಕೆ, ಅಂತೆಯೇ ಕಳ್ಳರು-ಖದೀಮರು, ಕೊಲೆಗಾರರಿಗೆ ಸಮಾಜಘಾತಕರಿಗೆ ಅಷ್ಟೇ ಪ್ರಮಾಣದ ಖದರ್ ಅಧಿಕಾರಿಯಾಗಿದ್ದಾರೆ.


ಪೊಲೀಸ್ ಇಲಾಖೆಯಲ್ಲಿ ಇರುವ ಭ್ರಷ್ಟರ ಪಾಲಿಗೆ ಸಹ ಸಿಂಹಸ್ವಪ್ನರಾಗಿದ್ದಾರೆ. ಇವರು ಯಾವ ಜಿಲ್ಲೆಗೆ ವರ್ಗವಾಗಿದೆ ಎಂಬ ಸುದ್ದಿ ಹರಡುತ್ತಲೇ ಆ ಜಿಲ್ಲೆಯ ಭ್ರಷ್ಟ ಪೊಲೀಸ್ ಅಧಿಕಾರಿಗಳು ಅವರು ಬರುವ ಜಿಲ್ಲೆಯಿಂದ ಹೇಗಾದರೂ ಮಾಡಿ ವರ್ಗ ಮಾಡಿಕೊಂಡು ಬೇರೆ ಜಿಲ್ಲೆಗೆ ಹಾರುತ್ತಾರೆ.



ಕರ್ತವ್ಯ ಪಾಲನೆಯಲ್ಲಿ ಶಿಸ್ತು ಇರಬೇಕು. ಸಾರ್ವಜನಿಕರೊಂದಿಗೆ ಆತ್ಮೀಯತೆಯಿಂದ ಇರಬೇಕು ಹಾಗಿದ್ದಾಗ ಮಾತ್ರ ನಮ್ಮ ಕೆಲಸಗಳೆಲ್ಲಾ ಸುಗಮ ಎಂಬ ಜೀವಂತ ಸತ್ಯ ಅರಿತಿರುವ ಮಂಗಳೂರು ನಗರದ ಪೊಲೀಸ್ ಕಮೀಷನರ್ ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿ.

2010 ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದ ಇವರು ಭಟ್ಕಳದ ಉಪವಿಭಾಗದಲ್ಲಿ ಎಎಸ್ಪಿಯಾಗಿ ಕರ್ತವ್ಯ ನಿರ್ವಹಿಸಿ ನಂತರ ಬೀದರ ಜಿಲ್ಲೆಗೆ ಎಸ್ಪಿಯಾಗಿ ದಿನಾಂಕ 1-1-2014ರಂದು ಅಧಿಕಾರ ವಹಿಸಿಕೊಂಡರು.

ಬೀದರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿ ಅವರು ಕರ್ತವ್ಯ ಭ್ರಷ್ಟಾಚಾರ ರಹಿತ ಪ್ರಮಾಣಿಕತೆಯಿಂದ ನಿಷ್ಠೆಯಿಂದ ಕೆಲಸ ಮಾಡಿ ಜಿಲ್ಲೆಯಲ್ಲಿ ಅಪರಾಧಿಗಳ ಹೆಡೆಮುರಿಕಟ್ಟಿ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆಯಿಂದ ಇರುವಂತೆ ಮಾಡುವುದು ಜಿಲ್ಲೆಯ ಜನಸಾಮಾನ್ಯರ ಪ್ರೀತಿಗೆ ಪಾತ್ರರಾದರು.




ದಿನಾಂಕ 1-1-2015ರಂದು ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿಯವರನ್ನು ಬೀದರ ಜಿಲ್ಲೆಯಿಂದ ವರ್ಗಾವಣೆ ಆದೇಶವನ್ನು ಸರಕಾರ ಹೊರಡಿಸಿತ್ತು. ಈ ಸುದ್ದಿ ಜಿಲ್ಲೆಯಲ್ಲಿ ತಿಳಿಯುತ್ತಿದ್ದಂತೆ ಗ್ರಾಮೀಣ, ಪಟ್ಟಣ, ನಗರ ಮತ್ತು ಸಣ್ಣಪುಟ್ಟ ಅಂಗಡಿಗಳಿಂದ ದೊಡ್ಡ ದೊಡ್ಡ ಮಹಲಗಳು ಸ್ವಯಂ ಬಂದ್ ಮಾಡಿ ಸರಕಾರಿ, ಖಾಸಗಿ ವಾಹನಗಳ ಸಂಚಾರ ನಿಂತು ಹೋಯಿತು. ಅವರ ವರ್ಗಾವಣೆ ಆದೇಶ ರದ್ದು ಆಗುವವರೆಗೆ ಇದ್ದು ಮುಂದುವರೆಯಲ್ಲಿದೆ ಎಂಬ ಸಂದೇಶ ಸರಕಾರಕ್ಕೆ ತಲುಪಿತು. ಕೂಡಲೇ ಸರಕಾರ ಎಚ್ಚೆತ್ತು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನವೇ ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿಯವರ ವರ್ಗಾವಣೆ ಆದೇಶ ರದ್ದುಪಡಿಸಿ ಬೀದರ ಜಿಲ್ಲೆಯಲ್ಲಿ ಮುಂದುವರಿಸಿತ್ತು.

ದಿನಾಂಕ 2-1-2016ರಂದು ಮಂಡ್ಯ ಜಿಲ್ಲೆಯ ಎಸ್ಪಿಯಾಗಿ ಅಧಿಕಾರ ವಹಿಸಿಕೊಂಡರು. ಆ ಜಿಲ್ಲೆಯ ರಾಜಕೀಯ ಪುಡಿರೌಡಿಗಳನ್ನು ಹದ್ದುಬಸ್ತಿನಲ್ಲಿ ತಂದರು. ಮಂಡ್ಯ ಜಿಲ್ಲೆಯಿಂದ ತೆಲಂಗಾಣದ ಕೃಷ್ಣಗಿರಿ ಜಿಲ್ಲೆಗೆ ಎಸ್ಪಿಯಾಗಿ ವರ್ಗವಾದರು.

ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಅಪರಾಧ ಚಟುವಟಿಕೆಗಳನ್ನು ತಡೆಯುವ ಕ್ರಿಮಿನಲ್‌ಗಳನ್ನು ಮಟ್ಟ ಹಾಕುವ ಜನಸಾಮಾನ್ಯರಿಗೆ ನ್ಯಾಯ ಒದಗಿಸುವ, ಜನತೆ ಯಾವುದೇ ತೊಂದರೆ ಇಲ್ಲದೆ ನೆಮ್ಮದಿಯಿಂದ ಬಾಳುವಂತೆ ಮಾಡುವ ಜವಾಬ್ದಾರಿ ವಹಿಸಿಕೊಂಡು ತನ್ನ ಕೈಕೆಳಗಿನ ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡುತ್ತಾರೆ.

ಅಲ್ಲಿಂದ ಬೆಂಗಳೂರಿಗೆ ವರ್ಗವಾಗಿ ಬಂದ ಸಿ.ಎಚ್. ಸುಧೀರ್ ಕುಮಾರ್ ರೆಡ್ಡಿಯವರನ್ನು ಮಂಗಳೂರಿನ ಪರಿಸ್ಥಿತಿಯನ್ನು ಕಂಡು ಅವರಿಗೆ ಅಲ್ಲಿಗೆ ಮಂಗಳೂರು ಪೊಲೀಸ್ ಕಮೀಷನರ್ ಆಗಿ ನೇಮಿಸಿತ್ತು. ಮಂಗಳೂರು ಅಂದರೆ ಇವತ್ತು ರಾಜ್ಯ ಅಷ್ಟೇ ಏಕೆ ರಾಷ್ಟ್ರವೇ ಬೆಚ್ಚಿ ಬೀಳುವಂತಹ ಸನ್ನಿವೇಶ ಎದುರಾಗಿತ್ತು. ಕೋಮು, ದಳ್ಳುರಿ

☞14

# ಕನಕಪುರ : ಕಾಲೇಜು ಕಟ್ಟಡದ ಮೇಲಿಂದ ಜಿಗಿದು ಪಿಯುಸಿ ವಿದ್ಯಾರ್ಥಿ ಆತ್ಮಹತ್ಯೆ !

## ಮೊಬೈಲ್ ಗೀಳು ಹದಿಹರೆಯದವರ ಜೀವನಕ್ಕೆ ಮೃತ್ಯು !

**ಬೆಂ. ದಕ್ಷಿಣ**

**ಶಾಂತರಾಜು ಜಿ. ಕಲ್ಲಹಳ್ಳಿ**



ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ ಶ್ರೀನಿವಾಸ್

ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ಫೋನ್ ಮಾನವನ ಅವಿಭಾಜ್ಯ ಅಂಗವಾಗಿ ಪರಿಣಮಿಸಿದೆ. ಸಂವಹನ, ಶಿಕ್ಷಣ, ಮನರಂಜನೆ, ವ್ಯವಹಾರ ಎಲ್ಲವೂ ಒಂದೇ ಸಾಧನದ ಮೂಲಕ ಸಾಧ್ಯವಾಗುತ್ತಿದೆ. ಆದರೆ ಇದೇ ಸಾಧನ ನಿಯಂತ್ರಣ ತಪ್ಪಿದಾಗ ಗೀಳಾಗಿ ರೂಪಾಂತರಗೊಳ್ಳುತ್ತದೆ. ವಿಶೇಷವಾಗಿ ಹದಿಹರೆಯದವರು ಹಾಗೂ ಯುವಜನರಲ್ಲಿ ಮೊಬೈಲ್ ಬಳಕೆ ಅತಿಯಾಗಿ ಹೆಚ್ಚುತ್ತಿರುವುದು ಚಿಂತಾಜನಕವಾಗಿದೆ. ಈ ಚಕ್ರವ್ಯೂಹದಿಂದ ಮಕ್ಕಳನ್ನು ಪಾರು ಮಾಡಲು ಪೋಷಕರು ಪಡುವ ಪಡಿಪಾಟಲು ಹೇಳತೀರದು. ಹದಿಹರೆಯದವರೆಂದರೆ ಮನಸ್ಸು ಹಾಗೂ ವ್ಯಕ್ತಿತ್ವ ರೂಪುಗೊಳ್ಳುವ ಸೂಕ್ಷ್ಮ ಹಂತ. ಈ ವಯಸ್ಸಿನಲ್ಲಿ ಕುತೂಹಲ, ಅನುಕರಣ ಮನೋಭಾವ ಮತ್ತು ಹೊಸ ಅನುಭವಗಳ ಆಕರ್ಷಣೆ ಹೆಚ್ಚು. ಸಾಮಾಜಿಕ ಜಾಲತಾಣಗಳು, ಆನ್‌ಲೈನ್ ಆಟಗಳು, ವಿಡಿಯೋ ಪ್ಲಾಟ್‌ಫಾರ್ಮ್‌ಗಳು ಯುವ ಮನಸ್ಸನ್ನು ಸುಲಭವಾಗಿ ಸೆಳೆಯುತ್ತವೆ. ಆರಂಭದಲ್ಲಿ ಅದು ಕೇವಲ ಮನರಂಜನೆ ಅಥವಾ ಓದಿನ ಸಹಾಯವೆಂದು ಕಾಣಿಸಿದರೂ ಕ್ರಮೇಣ ಅದು ಅವಲಂಬನೆಯಾಗಿ ಮಾರ್ಪಡುತ್ತದೆ. ಶಾಲೆಯಲ್ಲಿ ನೋಟ್ಸ್‌ನ್ನು ವಾಟ್ಸಾಪ್ ಮೂಲಕ ಕಳುಹಿಸಿದ್ದಾರೆ ಎಂದು ಪೋಷಕರಿಗೆ ಸುಳ್ಳು ಹೇಳಿ ಮೊಬೈಲ್ ಬಳಕೆಗೆ ಕಳ್ಳದಾರಿ ಕಂಡುಕೊಳ್ಳುತ್ತಿದ್ದಾರೆ. ಮೊಬೈಲ್ ಗೀಳಿನಿಂದ ಶೈಕ್ಷಣಿಕ ಹಿನ್ನಡೆ, ಓದಿನ ಮೇಲೆ ಏಕಾಗ್ರತೆ ಕಡಿಮೆಯಾಗುತ್ತದೆ. ಪುಸ್ತಕ ಓದುವ ಅಭ್ಯಾಸ ಕುಗ್ಗುತ್ತದೆ. ಪರೀಕ್ಷೆಯ ಸಮಯದಲ್ಲಿ ಆತಂಕ ಹೆಚ್ಚುತ್ತದೆ. ಚಟುವಟಿಕೆಯಿಂದ ಕಂಗೊಳಿಸುತ್ತಿದ್ದ ಮಕ್ಕಳ ದೈಹಿಕ ಆರೋಗ್ಯವೂ ಹದಗೆಡುತ್ತದೆ. ಕಣ್ಣು ನೋವು, ತಲೆನೋವು, ನಿದ್ರಾಹೀನತೆ, ದೈಹಿಕ ಚಟುವಟಿಕೆಯ ಕೊರತೆ ಇವು ಸಾಮಾನ್ಯ ಸಮಸ್ಯೆಗಳಾಗಿವೆ. ಜೊತೆಗೆ ಮಾನಸಿಕ ಆರೋಗ್ಯಕ್ಕೂ ಹಾನಿ ಉಂಟಾಗುತ್ತದೆ.

ಸಾಮಾಜಿಕ ಜಾಲತಾಮಗಳಲ್ಲಿ ಇತರರ ಜೀವನದೊಂದಿಗೆ ಹೋಲಿಕೆ ಮಾಡುವ ಪ್ರವೃತ್ತಿ ಆತ್ಮವಿಶ್ವಾಸಗಳನ್ನು ಕುಗ್ಗಿಸುತ್ತದೆ. ಸಾಮಾಜಿಕ, ಒಂಟಿತನ, ಕೋಪ, ಆತಂಕ ಹೆಚ್ಚಾಗುತ್ತದೆ. ಈ ಪರಿಸ್ಥಿತಿಯಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದರೆ ಪೋಷಕರಿಗೆ ಇದು ಸುಲಭದ ಕೆಲಸವಲ್ಲ. ಒಂದು ಕಡೆ ಮಕ್ಕಳ ಭವಿಷ್ಯದ ಚಿಂತೆ, ಇನ್ನೊಂದು ಕಡೆ ಅವರ ಮನಸ್ಸಿಗೆ ನೋವುಂಟು ಮಾಡಬಾರದೆಂಬ ಭಾವನೆ, ಈ ಇಬ್ಬಂದಿತನದ ನಡುವೆ ಪೋಷಕರು ಗೊಂದಲಕ್ಕೀಡಾಗುತ್ತಾರೆ. ಕೆಲವರು ಕಠಿಣ ನಿಯಮಗಳನ್ನು ಜಾರಿಗೆ ತರುತ್ತಾರೆ. ಆದರೆ ಅದು ಮಕ್ಕಳಲ್ಲಿ ವಿರೋಧ ಮನೋಭಾವವನ್ನು ಉಂಟು ಮಾಡುತ್ತದೆ. ಸಂಬಂಧಗಳಲ್ಲಿ ಮತ್ತಷ್ಟು ಕಂದಕವನ್ನು ಸೃಷ್ಟಿಸುತ್ತದೆ. ಸಾಧ್ಯವಾದಷ್ಟು ಮೊದಲಿಗೆ ಮನೆಯಲ್ಲೇ ಸ್ಪಷ್ಟ ನಿಯಮಗಳನ್ನು ರೂಪಿಸಬೇಕು. ದಿನಕ್ಕೆ ಎಷ್ಟು ಸಮಯ ಮೊಬೈಲ್ ಬಳಕೆ ಎನ್ನುವುದು ನಿಗದಿಯಾಗಬೇಕು. ಊಟದ ಸಮಯದಲ್ಲಿ ಅಥವಾ ಮಲಗುವ ಮುನ್ನ ಮೊಬೈಲ್ ಬಳಕೆಯನ್ನು ತಪ್ಪಿಸಬೇಕು. ಪೋಷಕರು ತಾನೇ ಮಾದರಿಯಾಗಬೇಕು. ಮಕ್ಕಳಿಗೆ ಹೇಳುವಷ್ಟೇ ಅಲ್ಲ, ತಾನೇ ಪಾಲಿಸುವುದು ಮುಖ್ಯ. ಜೊತೆಗೆ ಪರ್ಯಾಯವಾಗಿ ಮಕ್ಕಳಿಗೆ ಜನಪದ, ಕ್ರೀಡೆ, ಸಂಗೀತ, ಓದು, ಚಿತ್ರಕಲೆ ಮುಂತಾದವುಗಳು ಮನಸ್ಸಿಗೆ ಶಾಂತಿ ನೀಡುತ್ತದೆ ಎಂದು ತಿಳಿಸಿಕೊಡಬೇಕು. ಅತ್ಯಂತ ಮುಖ್ಯವಾದುದು ಮುಕ್ತ ಸಂವಾದ. ಮಕ್ಕಳೊಂದಿಗೆ ಸ್ನೇಹಪೂರ್ಣವಾಗಿ ಮಾತನಾಡಬೇಕು. 'ನೀನು ತಪ್ಪು ಮಾಡುತ್ತಿದ್ದೀಯ' ಎನ್ನುವ ಧಾಟಿಯ ಬದಲು, 'ನಿನ್ನ ಆರೋಗ್ಯ ಮತ್ತು ಭವಿಷ್ಯಕ್ಕಾಗಿ ನಾವು ಕಾಳಜಿ ವಹಿಸುತ್ತಿದ್ದೇವೆ' ಎನ್ನುವ ಭಾವನೆ ವ್ಯಕ್ತವಾಗಬೇಕು. ವಾರದಲ್ಲಿ ಒಂದು ದಿನ 'ಮೊಬೈಲ್ ರಹಿತ ದಿನ' ಆಚರಿಸುವುದು ಕುಟುಂಬದ ಬಾಂಧವ್ಯವನ್ನು ಗಟ್ಟಿಗೊಳಿಸುತ್ತದೆ. ಹೊರಗಿನ ಸುತ್ತಾಟಕ್ಕೆ ಮಕ್ಕಳು ಸಹ ಇರಲಿ. ಮೊಬೈಲ್ ಒಂದು ಸಾಧನ ಮಾತ್ರ ಜೀವನವಲ್ಲ. ಅದನ್ನು ಜ್ಞಾನ, ಮಾಹಿತಿ ಮತ್ತು ಸೃಜನಶೀಲತೆಗೆ ಉಪಯೋಗಿಸಿದರೆ ಒಳ್ಳೆಯದು. ಆದರೆ ಅತಿಯಾದ ಬಳಕೆ ಬದುಕಿನ ಸಮತೋಲನವನ್ನು ಕದಡುತ್ತದೆ. ಆದ್ದರಿಂದ ಪೋಷಕರು ಸಹನೆಯಿಂದ, ಪ್ರೀತಿಯಿಂದ ಮತ್ತು ವಿವೇಕದಿಂದ ಮಕ್ಕಳನ್ನು ಮಾರ್ಗದರ್ಶನ ಮಾಡಿದರೆ, ಈ ಡಿಜಿಟಲ್ ಚಕ್ರವ್ಯೂಹದಿಂದ ಪಾರು ಮಾಡಲು ಸಾಧ್ಯ.



ಇತ್ತೀಚೆಗೆ ರಾಜ್ಯ ಸರ್ಕಾರ ರಾಜ್ಯವ್ಯಾಪಿ 'ಮೊಬೈಲ್ ಬಿಡಿ ಪುಸ್ತಕ ಹಿಡಿ' ಎಂಬ ಅಭಿಯಾನವನ್ನು ರೂಪಿಸಿದ್ದು, ಇದರಿಂದ ಮಕ್ಕಳನ್ನು ಪುಸ್ತಕದತ್ತ ಸೆಳೆಯುವ ದೃಷ್ಟಿಯಿಂದ ಈ ಅಭಿಯಾನವು ಅತ್ಯಂತ ಪರಿಣಾಮಕಾರಿಯಾಗಿದೆ ಎನ್ನಬಹುದು. ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸುವ ಉದ್ದೇಶದ ಅಭಿಯಾನವನ್ನು ಜನವರಿ 28ರಂದು ಸುತ್ತೋಲೆ ಹೊರಡಿಸಿದೆ. ಇತರ ಇಲಾಖೆಗಳನ್ನು ಸಹ ಅಭಿಯಾನ'ದ'ಲ್ಲಿ ಒಳಗೊಳ್ಳುವ ಮೂಲಕ ವಿಟದ್ಯಾರ್ಥಿಗಳಲ್ಲಿ ಮೊಬೈಲ್ ಬಳಕೆ ತಗ್ಗಿಸಲು ಪಣತೊಟ್ಟಿದೆ. ಅಭಿಯಾನದ ಯಶಸ್ವಿ ಅನುಷ್ಠಾನಕ್ಕಾಗಿ ಪ್ರಾಥಮಿಕ ಶಾಲೆಗಳ ಮಟ್ಟದಿಂದಿಡಿದು ಪ್ರೌಢಶಾಲೆ, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಮೇಲ್ವಿಚಾರಣೆ ಮತ್ತು ಉಸ್ತುವಾರಿಗೆ ಶಿಕ್ಷಕರು ಮತ್ತು ಅಧಿಕಾರಿಗಳನ್ನು ನೇಮಿಸಿ ಜವಾಬ್ದಾರಿಗಳನ್ನು ಹಂಚಿದೆ. ಅಭಿಯಾನ ಅನುಷ್ಠಾನದ ವರದಿಯನ್ನು ಸಂಬಂಧಿಸಿದವರಿಗೆ ಸಲ್ಲಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಿದೆ.

ಆರಂಭದಲ್ಲಿ ಶಾಲೆಗಳಿಗಷ್ಟೇ ಸೀಮಿತವಾಗಿದ್ದ ಅಭಿಯಾನ ನಂತರ ವಿದ್ಯಾರ್ಥಿಗಳ ಮನೆಗಳಿಗೂ ವಿಸ್ತರಿಸಿ ಪೋಷಕರನ್ನೂ ಒಳಗೊಂಡಿತು. ರಾಜ್ಯದ ವಿವಿಧ ಭಾಗಗಳಿಗೆ ಹಬ್ಬಿದ ಅಭಿಯಾನ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿ ಸಾರ್ವಜನಿಕರ ಗಮನ ಸೆಳೆಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದಿದೆ. ಕುಲಪತಿಗಳ ಅಭಿಪ್ರಾಯ ಪಡೆದ ಸಿಎಂ ಸಿದ್ದರಾಮಯ್ಯರವರು, ಮೊಬೈಲ್ ಬಳಕೆಗೆ ನಿಷೇಧ ಹೇರುವ ಕುರಿತಾಗಿ ರಾಜ್ಯದಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸುವ ಹದಿಹರೆಯದ ಮಕ್ಕಳ ಪ್ರಮಾಣ ಹೆಚ್ಚಾಗಿದೆ. ಇದರಿಂದ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಈ ಹಿನ್ನಲೆಯಲ್ಲಿ ಶಾಲೆ, ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಮಕ್ಕಳು ಮೊಬೈಲ್ ಬಳಸುವುದನ್ನು ನಿರ್ಬಂಧಿಸಲು ತೀರ್ಮಾನಿಸಲಾಗಿದೆ. ಆಸ್ಟ್ರೇಲಿಯಾ ಶಾಲೆಗಳ ಮಾದರಿಯಲ್ಲೇ ಕಡ್ಡಾಯವಾಗಿ ಮೊಬೈಲ್ ಬಳಕೆಗೆ ಕಡಿವಾಣ ಹಾಕುವ ಸಂಬಂಧ ಆದೇಶ ಹೊರಡಿಸಲು ಸರಕಾರಿ ಸಿದ್ಧತೆ ನಡೆಸಿದೆ ಎನ್ನಲಾಗಿದೆ.



ಎಸ್ಪಿ ಶ್ರೀನಿವಾಸಗೌಡ



ಡಿವೈಎಸ್ಪಿ ಶ್ರೀಗಿರಿ



ಸಿಪಿಐ ಅನಂತರಾಮ್

ಇತ್ತೀಚೆಗೆ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ಟೌನಿನಲ್ಲಿರುವ ಆದಿತ್ಯಾಸ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿ ಶ್ರೀನಿವಾಸ್ ಕಾಲೇಜು ಕಟ್ಟಡದ ಮೇಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಈತ ಮೂಲತಃ ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು, ದಂಟಹಳ್ಳಿ ಗ್ರಾಮದ ಶ್ರೀಮತಿ ಸವಿತಾ ಮಹದೇವಪ್ರಭು ದಂಪತಿಯ ಮಗ. ಇವರು ವ್ಯಾಪಾರಕ್ಕಾಗಿ ಕನಕಪುರ ತಾಲ್ಲೂಕು ಕೋಡಿಹಳ್ಳಿಗೆ ಬಂದು ನೆಲೆಸಿ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಕೇಕ್ ಮನೆ ಬೇಕರಿ ನಡೆಸಿಕೊಂಡು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕನಕಪುರದ ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಆದಿತ್ಯಾಸ್ ಕಾಲೇಜಿನಲ್ಲಿ ಮಗ ಶ್ರೀನಿವಾಸ್‌ನನ್ನು ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಈ ವಿದ್ಯಾರ್ಥಿ ಪ್ರತಿದಿನ ಕೋಡಿಹಳ್ಳಿಯಿಂದ ಕಾಲೇಜಿಗೆ ಬಂದು ಹೋಗುತ್ತಿದ್ದ. ವಿದ್ಯಾರ್ಥಿ ಶ್ರೀನಿವಾಸ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದುದರಿಂದ ಮನೆಯಲ್ಲಿ ತಂದೆತಾಯಿ ಬುದ್ಧಿಮಾತು ಹೇಳಿ ಚೆನ್ನಾಗಿ ಓದುವುದಾದರೆ ಮೊಬೈಲ್ ಬಳಕೆ ಮಾಡುವುದು ಕಡಿಮೆ ಮಾಡು ಎಂದಿದಕ್ಕೆ ವಿದ್ಯಾರ್ಥಿ ಶ್ರೀನಿವಾಸ್ ಮನನೊಂದು, ಎಂದಿನಂತೆ ಕಾಲೇಜಿಗೆ ಬಂದಿದ್ದಾನೆ. ಕಾಲೇಜು ಮುಗಿದ ಬಳಿಕ ಸಂಜೆ 5.30ರಲ್ಲಿ ಕಾಲೇಜಿನ 5ನೇ ಮಹಡಿಗೆ ತೆರಳಿ ಮೇಲಿಂದ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಕೆಳಗೆ ಬಿದ್ದ ಈತನನ್ನು ಕೂಡಲೇ ಕಾಲೇಜು ಸಿಬ್ಬಂದಿ ಹಾಗೂ ಪುರ ಪೊಲೀಸರು ಹಾರೋಹಳ್ಳಿ ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಎರಡು ಕಾಲುಗಳು ಮುರಿದಿದ್ದು ಗಂಭೀರ ಗಾಯಗೊಂಡಿದ್ದ ಈತನನ್ನು ಅಲ್ಲಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ನಂತರ ಮೃತ ವಿದ್ಯಾರ್ಥಿ ಶ್ರೀನಿವಾಸ್‌ನ ಪೋಷಕರು ನಾವು ಮನೆಯಲ್ಲಿ ಪರೀಕ್ಷೆ ಹತ್ತಿರವಿದ್ದ ಕಾರಣ ಮೊಬೈಲ್ ಬಳಕೆ ಮಾಡುವುದು ಕಡಿಮೆ ಮಾಡು ಪರೀಕ್ಷೆಯ ಕಡೆ ಗಮನಹರಿಸು ಎಂದು ಬುದ್ಧಿಮಾತು ಹೇಳಿದ್ದಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಕನಕಪುರ ಪೊಲೀಸ್ ಠಾಣೆಗೆ ದೂರು ನೀಡಿದ ಕಾರಣ ಪೊಲೀಸರು ಯುಡಿಆರ್ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.




ಕೋಡಿಹಳ್ಳಿಯಲ್ಲಿರುವ ಮೃತನ ತಂದೆಯ ಬೇಕರಿ




ಇದೇ ಕಾಲೇಜ್ ಮೇಲಿಂದ ಬಿದ್ದಿದ್ದು




ಈ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮೃತ ಶ್ರೀನಿವಾಸ್

# ಸೌಜನ್ಯ ಫೈಲ್ಸ್



22

ನಿರೂಪಣೆ :
**ಮೋಹನ್ ಬೋಳಂಗಡಿ**

# ಸೌಜನ್ಯ ಕೊಡೆ ಹಿಡಿದುಕೊಂಡು ಹೋಗುತ್ತಿದ್ದಳು!!

ಸೌಜನ್ಯ ಪ್ರಕರಣದ ಪ್ರಮುಖ ಸಾಕ್ಷಿ ಜನಾರ್ಧನ. ನೇತ್ರಾವತಿ ಸ್ನಾನಘಟ್ಟದ ಬಳಿ ಇರುವ ಎಸ್‌ಡಿಎಂ ನ್ಯಾಚುರಾಪತಿ ವಿಜ್ಞಾನ ಕೇಂದ್ರದ ಕಾವಲುಗಾರ. ಸೌಜನ್ಯ ಜೀವಂತ ಇದ್ದ ಸಂದರ್ಭದಲ್ಲಿ ಕೊನೆಯ ಬಾರಿಗೆ ನೋಡಿದವರು. ಆಕೆಯನ್ನು ಆಕೆಯ ಮಾವ ವಿಠ್ಠಲಗೌಡ ನೋಡಿದ ನಂತರ ನೋಡಿದವರು ಜನಾರ್ಧನ. ಸೌಜನ್ಯ ಪ್ರಕರಣದಲ್ಲಿ ಹೆಚ್ಚು ಚರ್ಚೆಗೆ ಒಳಗಾದಂತಹ ವಿಷಯ ಅಂದರೆ ಸಿಸಿ ಕ್ಯಾಮೆರಾದ್ದು. ಎಸ್‌ಡಿಎಂ ನ್ಯಾಚುರಾಪತಿ ವಿಜ್ಞಾನ ಕೇಂದ್ರದ ಗೇಟಿನ ಬಳಿ ಸಿಸಿ ಕೆಮರಾ ಇತ್ತು. ಅದರ ಎದುರುಗಡೆಯೇ ಸಾರ್ವಜನಿಕ ಬಸ್ ನಿಲ್ದಾಣ ಇತ್ತು. ಅಲ್ಲಿ ಸಿಸಿ ಕ್ಯಾಮೆರಾ ಇತ್ತು ಎಂದು ಸೌಜನ್ಯ ಪರ ಹೋರಾಟಗಾರರು ಪ್ರತಿಪಾದಿಸುತ್ತಿದ್ದರು. ವಾಸ್ತವವಾಗಿ ಆ ಬಸ್ ನಿಲ್ದಾಣದಲ್ಲಿ ಸಿಸಿ ಕ್ಯಾಮೆರಾ ಇರಲಿಲ್ಲ. 1987ರಲ್ಲಿ ಧರ್ಮಸ್ಥಳದ ಮುಳಿಕ್ಕಾರಿನ ಪದ್ಮಲತಾ ಎಂಬ ಎಸ್‌ಡಿಎಂ ವಿದ್ಯಾರ್ಥಿನಿಯ ಹತ್ಯೆ ನಡೆದಿತ್ತು. ಸುಮಾರು 58 ದಿನಗಳ ಬಳಿಕ ಅಸ್ಥಿ ಪಂಜರ ಪತ್ತೆಯಾಗಿತ್ತು. ಬಟ್ಟೆಯ ಆಧಾರದಲ್ಲಿ ಪದ್ಮಲತಾಳ ಗುರುತು ಪತ್ತೆಯಾಗಿತ್ತು. ಈ ಸಂದರ್ಭದಲ್ಲಿ ಸ್ಥಳೀಯ ಕಮ್ಯೂನಿಸ್ಟ್ ಪಕ್ಷದ ಮುಖಂಡರು ಧರ್ಮಸ್ಥಳದಿಂದ ಬೆಳ್ತಂಗಡಿಗೆ ಪಾದಯಾತ್ರೆಯ ಮೂಲಕ ಪ್ರತಿಭಟನಾ ಮೆರವಣಿಗೆ ನಡೆಸಿದ್ದರು. ಈ ಸಂದರ್ಭದಲ್ಲಿ ಮಣ್ಣಸಂಕದ ಬಸ್ ನಿಲ್ದಾಣದ ಎದುರು ಪಾದಯಾತ್ರೆ ಸಾಗುತ್ತಿದ್ದಾಗ ಭಾವಚಿತ್ರವೊಂದನ್ನು ತೆಗೆಯಲಾಗಿತ್ತು. ಆ ಭಾವಚಿತ್ರದಲ್ಲಿ ಬಸ್ ನಿಲ್ದಾಣದ ವಿದ್ಯುತ್ ಬಲ್ಬ್ ಕಾಣಿಸುತ್ತಿತ್ತು. ಇದನ್ನೇ ಸೌಜನ್ಯ ಪರ ಹೋರಾಟಗಾರರು ಸಿಸಿ ಕ್ಯಾಮೆರಾ ಎಂದು ಬಿಂಬಿಸುತ್ತಿದ್ದರು. ಆ ಬಸ್ ನಿಲ್ದಾಣವನ್ನು 2016ರಲ್ಲಿ ರಸ್ತೆ ಅಗಲೀಕರಣ ಮಾಡುವ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯವರು ಕೆಡವಿದ್ದರು ಅಲ್ಲದೇ, ಅದರ ಪಕ್ಕದಲ್ಲಿದ್ದ ಎರಡು ಬೃಹತ್ ಗಾತ್ರದ ಮರಗಳನ್ನು ಕಡಿಯಲಾಗಿತ್ತು. ಆ ಮರದ ಬಳಿಯಲ್ಲಿಯೇ ಸಂತೋಷ್‌ರಾವ್ ನಿಂತುಕೊಂಡಿದ್ದು ನಡೆದುಕೊಂಡು ಬರುತ್ತಿದ್ದಂತಹ ಸೌಜನ್ಯಳನ್ನು ಅಲ್ಲಿಂದ ಎತ್ತಿಕೊಂಡು ಹೋಗಿ ರಸ್ತೆ ಪಕ್ಕದ ತೋಡಿನ ಬದಿಯಲ್ಲಿ ಅತ್ಯಾಚಾರಗೈದು ಹತ್ಯೆ ಮಾಡಿದ್ದ. ಆದ್ದರಿಂದ ಸೌಜನ್ಯ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ನ್ಯಾಚುರಾಪತಿ ಕಾಲೇಜ್‌ನ ವಾಚ್‌ಮೆನ್ ಜನಾರ್ಧನ್ ಅವರ ಸಾಕ್ಷಿ ಪ್ರಮುಖವಾಗಿತ್ತು.

ಧರ್ಮಸ್ಥಳದಲ್ಲಿ ವಾಸವಿದ್ದ ಯು. ಗೋಪಾಲ್ ಅವರ ಮಗ ಜನಾರ್ಧನ್. 47 ವರ್ಷ ಪ್ರಾಯದವರು. ಎಸ್‌ಡಿಎಂ ನೇಚರ್‌ಕೇರ್ ಆಸ್ಪತ್ರೆ, ಶಾಂತಿವನದಲ್ಲಿ 8 ವರ್ಷಗಳಿಂದ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದರು. ಆ ಆಸ್ಪತ್ರೆಯಲ್ಲಿ ಮೂರು ಶಿಫ್ಟ್‌ಗಳಿತ್ತು. ಪ್ರತಿಯೊಬ್ಬರಿಗೂ 8 ಗಂಟೆಗಳ ಕೆಲಸದ ಅವಧಿ. ಜನಾರ್ಧನ್ ಅಲ್ಲದೇ ಚಂದ್ರಶೇಖರ್ ಮತ್ತು ಹರೀಶ್ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದರು. 2012 ಅಕ್ಟೋಬರ್ 9ರಂದು ಸಂಜೆಯ ಸಂದರ್ಭದ ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಿದ್ದವರು ಜನಾರ್ಧನ್. ಧರ್ಮಸ್ಥಳ ಜಿಲ್ಲಾ ಪಂಚಾಯತ್ ಸದಸ್ಯೆಯಾಗಿದ್ದ ಧನಲಕ್ಷ್ಮಿ ಅವರು ಜನಾರ್ಧನ್ ಅವರ ಪತ್ನಿ. ಅವರೂ ಸಹ ಈ ಪ್ರಕರಣದಲ್ಲಿ 34ನೇ ಸಾಕ್ಷಿಯಾಗಿ ಗುರುತಿಸಿಕೊಂಡಿದ್ದರು. ಜನಾರ್ಧನ್ ಅವರು ತನ್ನ ಸಾಕ್ಷಿ ಹೇಳಿಕೆಯಲ್ಲಿ ಚಂದಪ್ಪ ಗೌಡರ ಮಗಳು ಸೌಜನ್ಯಳನ್ನು ಕಾಲೇಜಿಗೆ ಹೋಗಿ ಬರುತ್ತಿದ್ದಾಗ ನೋಡುತ್ತಾ ಇದ್ದುದರಿಂದ ಪರಿಚಯ ಇತ್ತು ಎಂದು ಹೇಳಿದ್ದಾರೆ.

ದಿ. 9.10.2012ರಂದು ಸೌಜನ್ಯ ಕಾಣೆಯಾಗಿದ್ದಳು. ಆ ದಿನ ಜನಾರ್ಧನ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಶಿಫ್ಟ್‌ನಲ್ಲಿ ಕೆಲಸದಲ್ಲಿದ್ದ. ಆದಿನ ಸೌಜನ್ಯಳನ್ನು ಸಂಜೆ 4 ಗಂಟೆಯಿಂದ 4.15ರ ವೇಳೆಗೆ ನೇತ್ರಾವತಿ ಸ್ನಾನಘಟ್ಟದಲ್ಲಿ ಇಳಿದು ಮನೆ ಕಡೆಗೆ ಹೋಗುವುದನ್ನು ನೋಡಿದ್ದವರು ಆ ದಿನ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಮಳೆ ಇತ್ತು. ಆಕೆಯ ಕೈಯಲ್ಲಿ ಬ್ಯಾಗ್ ಮತ್ತು ಕೊಡೆ ಇತ್ತು. ರಾತ್ರಿ 7.30ರ ವೇಳೆಗೆ ಸೌಜನ್ಯಳ ತಂದೆ ಚಂದಪ್ಪ ಗೌಡರು ಬಂದು ಜನಾರ್ಧನ್ ಅವರನ್ನು ಸೌಜನ್ಯಳ ಬಗ್ಗೆ ವಿಚಾರಿಸಿದ್ದ. ಆಗ ಆಕೆ ಮನೆ ಕಡೆಗೆ ನಡೆದುಕೊಂಡು ಹೋಗುತ್ತಿರುವುದನ್ನು ನೋಡಿದ ಬಗ್ಗೆ ಹೇಳಿದ್ದರು. ಆ ಸಂದರ್ಭದಲ್ಲಿ ಸೌಜನ್ಯ ಇನ್ನೂ ಮನೆಗೆ ಬಂದಿಲ್ಲ ಎಂದು ಚಂದಪ್ಪಗೌಡರು ಹೇಳಿದರು. ಆ ಸಮಯದಲ್ಲಿ ಯಾವ ರೀತಿಯ ಕಿರುಚುವ ಶಬ್ಧ ಕೇಳಿಲ್ಲ ಎಂದು ಜನಾರ್ಧನ್ ನ್ಯಾಯಾಲಯದ ಮುಂದೆ ವಿವರಿಸಿದ್ದರು. ಅಲ್ಲಿ ತೋಡು ಇತ್ತು. ನೀರು ತುಂಬಾ ಇತ್ತು ಎಂದು ಹೇಳಿದ ಜನಾರ್ಧನ್ ಸಿಬಿಐ ಅಧಿಕಾರಿಗಳು ತನ್ನ ಹೇಳಿಕೆಯನ್ನು ಮಾಡಿಕೊಂಡಿದ್ದಾರೆ ಎಂದು ನ್ಯಾಯಾಲಯಕ್ಕೆ ವಿವರಿಸಿದರು.

ಆರೋಪಿ ಪರ ವಕೀಲರ ಪಾಟೀಸವಾಲಿಗೆ ಉತ್ತರಿಸಿದ ಸಾಕ್ಷಿ ಜನಾರ್ಧನ್ ಅವರು ಘಟನೆ ನಡೆದ ಎರಡು ವರ್ಷಗಳ ಬಳಿಕ ಸಿಬಿಐ ಪೊಲೀಸರು ತನ್ನನ್ನು ವಿಚಾರಣೆ ಮಾಡಿದ್ದಾರೆ. ಅದಕ್ಕಿಂತ ಮೊದಲು ಅಂದರೆ ಘಟನೆ ನಡೆದ ಸಂದರ್ಭದಲ್ಲಿ ಬೆಳ್ತಂಗಡಿ ಪೊಲೀಸರು ಹೇಳಿಕೆ ದಾಖಲಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಬೆಳ್ತಂಗಡಿ ಪೊಲೀಸರಿಗೆ ಏನು ಹೇಳಿಕೆ ಕೊಟ್ಟಿದ್ದೇನೆ ಎಂದು ನೆನಪಿಲ್ಲ. ಆ ದಿನ ಸೌಜನ್ಯ ಹೊಂದಿದ್ದ ಕೊಡೆ ಮಡಚುವುದಾಗಿತ್ತಾ? ಅಲ್ಲವಾ ? ಎಂದು ಗೊತ್ತಿಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿದ್ದರು.

ಜನಾರ್ಧನ್ ಅವರ ಸಾಕ್ಷಿಯಲ್ಲಿ ವಿಶೇಷವೇನಿಲ್ಲ. ಈ ವಿಚಾರಣೆ ನಡೆದದ್ದು 2016 ನವೆಂಬರ್ 8ರಂದು. ಜನಾರ್ಧನ್ ಅವರ ಹೇಳಿಕೆಯಲ್ಲಿ ಸಿಸಿಕ್ಯಾಮೇರಾದ ಉಲ್ಲೇಖ ಇರಲಿಲ್ಲ. ಆರೋಪಿ ಪರ ವಕೀಲರು ಪಾಟೀ ಸವಾಲು ಕೇಳಿದಾಗಲೂ ಆ ವಿಷಯವನ್ನು ಪ್ರಸ್ತಾಪಿಸರಲಿಲ್ಲ. ಇದನ್ನು ಗಮನಿಸಬೇಕಾದದ್ದು ಅದೇ ಜನಾರ್ಧನ್ ಅವರನ್ನು 5 ವರ್ಷಗಳ ನಂತರ ಅಂದರೆ 2021ರಲ್ಲಿ ಮತ್ತೇ ವಿಚಾರಣೆಗೆ ಗುರಿಪಡಿಸಿದ ಸಂದರ್ಭದಲ್ಲಿ ಪ್ರಮುಖವಾಗಿ ಪ್ರಸ್ತಾಪವಾದದ್ದೇ ಸಿಸಿ ಕ್ಯಾಮೇರಾದ ವಿಚಾರ.

ವಾಸ್ತವ ಅಂಶ ಏನೆಂದರೆ ಧರ್ಮಸ್ಥಳದಲ್ಲಿ ಸಿಸಿಕ್ಯಾಮೆರಾ ಅಳವಡಿಕೆಯಾದದ್ದು, 2004ರ ಹೊತ್ತಿಗೆ. ಆ ಸಂದರ್ಭದಲ್ಲಿ ಕೇವಲ ದೇವಸ್ಥಾನ, ಅನ್ನಛತ್ರ, ಭಕ್ತರ ಸರತಿ ಸಾಲು, ಗೌರಿಮಾರು ಕಟ್ಟೆಯ ಬಳಿ ಸಿಸಿಕ್ಯಾಮೆರಾ ಅಳವಡಿಕೆ ಮಾಡಲಾಗಿತ್ತು. ತದನಂತರ ನೇತ್ರಾವತಿ ಸ್ನಾನಘಟ್ಟದ ಬಳಿ ಭಕ್ತಾಧಿಗಳ ವಸ್ತುಗಳು ನಾಪತ್ತೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಸ್ನಾನಘಟ್ಟಕ್ಕೆ ಅಭಿಮುಖವಾಗಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. 2010ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಅತ್ಯಾಧುನಿಕವಾದ ಪ್ಯಾನಸೋನಿಕ್ ಕಂಪೆನಿಯ ಸಿಸಿಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಆದರೆ 2014ರ ತನಕ ಶಾಂತಿವನದ ಎಸ್‌ಡಿಎಂ ನ್ಯಾಚುರಾಪತಿ ಕಾಲೇಜಿನ ಗೇಟುಗಳಿಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿರಲಿಲ್ಲ. 2012ರಲ್ಲಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ನಡೆದ ಬಳಿಕ ಬೆಳ್ತಂಗಡಿ ಪೊಲೀಸರು ಧರ್ಮಸ್ಥಳದ ಆಡಳಿತ ವಿಭಾಗಕ್ಕೆ ನೋಟೀಸು ನೀಡಿ ಕೆಲವೊಂದು ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿ ಕ್ಯಾಮೇರಾ ಅಳವಡಿಸುವಂತೆ ಸೂಚನೆ ನೀಡಿದ್ದರು. ಅದರಂತೆ ಎಸ್‌ಡಿಎಂ ನ್ಯಾಚುರಾಪತಿ ಕಾಲೇಜಿನ ಗೇಟ್‌ಗಳು ಮತ್ತು ಒಳಭಾಗದಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು.

ಈ ಪ್ರಕರಣದ ಮುಂದಿನ ಸಾಕ್ಷಿ ಧರ್ಮಸ್ಥಳದಲ್ಲಿ ವ್ಯಾಪಾರ ಮಾಡಿಕೊಂಡಿದ್ದ 34 ವರ್ಷ ಪ್ರಾಯದ ಪದ್ಮನಾಭ್ ನಾಯಕ್ ಅವರ ಮಗ ಡಿ. ಕೃಷ್ಣ. ಧರ್ಮಸ್ಥಳ ಸಮೀಪದ ಕನ್ಯಾಡಿಯಲ್ಲಿ ಸುಮಾರು 9 ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದರು. ಅವರಿಗೆ 9-10-2012ರಂದು ಸೌಜನ್ಯ ನಾಪತ್ತೆಯಾಗಿದ್ದ ವಿಚಾರ ಅರಿವಿಗೆ ಬಂದಿತ್ತು. 10-10-2012ರಂದು ಬೆಳ್ತಂಗಡಿ ಠಾಣೆಯ ಎಸ್ಐ ಯೋಗಿಶ್ ಕುಮಾರ್ ಅವರು ಸ್ಥಳ ಮಹಜರಿಗೆ ಕರೆದ ಹಿನ್ನೆಲೆಯಲ್ಲಿ ನೇತ್ರಾವತಿ ಸ್ನಾನಘಟ್ಟದ ಬಳಿ ಇರುವ ಮಣ್ಣಸಂಕಕ್ಕೆ ಹೋಗಿದ್ದು, ಅಲ್ಲಿ ಧನಲಕ್ಷ್ಮಿ, ಜನಾರ್ಧನ್, ರಾಘವೇಂದ್ರ ಮತ್ತು ಬೇರೆ ಸಾರ್ವಜನಿಕರು ಇದ್ದರು. ಪೊಲೀಸರು ಸೌಜನ್ಯಳ ಶವ ನೋಡಿ ಮೈಮೇಲಿದ್ದ ಅಂಶಗಳನ್ನು ಬರೆದುಕೊಂಡಿದ್ದರು. ಆ ದಾಖಲೆಗೆ ಕೃಷ್ಣ ಅವರು ಸಹಿ ಮಾಡಿದ್ದರು. ಕೃಷ್ಣ ಅವರು ಹೋಗಿ ನೋಡುವ ಸಂದರ್ಭದಲ್ಲಿ ಶವದ ಮೇಲೆ ಬಟ್ಟೆ ಹಾಕಲಾಗಿತ್ತು. ಪೊಲೀಸರು ಟ್ಯಾಗ್ ಮತ್ತು ಸ್ಕೂಲ್ ಬ್ಯಾಗ್‌ನ್ನು ವಶಪಡಿಸಿಕೊಂಡರು. ಪಂಚನಾಮೆ ಮುಗಿದ ಬಳಿಕ ಶವವನ್ನು ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಅವರನ್ನು ಪಾಟೀ ಸವಾಲಿಗೆ ಗುರಿಪಡಿಸಿರಲಿಲ್ಲ.

ಆ ಪ್ರಕರಣದ ಮತ್ತೊಬ್ಬರು ಸಾಕ್ಷಿ ಧನಲಕ್ಷ್ಮಿ. ಸ್ಥಳೀಯ ತಾಲೂಕು ಪಂಚಾಯತ್ ಸದಸ್ಯರು. ಜನಾರ್ಧನ್ ಅವರ ಪತಿ. ಅವರು ಎಸ್‌ಡಿ ಎಂ ನ್ಯಾಚುರಾಪತಿ ಆಸ್ಪತ್ರೆಯ ಕಾವಲುಗಾರ. 2010ರಿಂದ 2014ರವರೆಗೆ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು. ಬಿಜೆಪಿಯ ತಾಲೂಕು ಸಮಿತಿಯ ಕಾರ್ಯದರ್ಶಿಯಾಗಿದ್ದರು. ಸೌಜನ್ಯಳ ತಂದೆ ಚಂದಪ್ಪ ಗೌಡರು ಗುತ್ತಿಗೆದಾರರಾಗಿದ್ದರಿಂದ ಪರಿಚಯವಿತ್ತು. 9.10.2012ರಂದು ಸೌಜನ್ಯ ಕಾಣೆಯಾಗಿದ್ದಳು. ಆ ದಿನ ರಾತ್ರಿ 8.00 ಗಂಟೆಗೆ ಸೌಜನ್ಯಳ ತಂದೆ ಚಂದಪ್ಪ ಗೌಡರು ಆಕೆ ಕಾಣೆಯಾದ ವಿಚಾರವನ್ನು ತಿಳಿಸಿದ್ದರು. ಅದೇ ದಿನ ರಾತ್ರಿ ಜನಾರ್ಧನ್ ಅವರು ಸೌಜನ್ಯ ಕಾಣೆಯಾದ ವಿಚಾರವನ್ನು ತಿಳಿಸಿದ್ದರು. ಮರುದಿನ ಅಂದರೆ 10.10.2012ರಂದು ಧನಲಕ್ಷ್ಮಿ ಅವರು ಪಂಚಾಯತ್ ಕಚೇರಿಯಲ್ಲಿದ್ದಾಗ ಸೌಜನ್ಯಳ ಶವ ಪತ್ತೆಯಾದ ವಿಚಾರ ತಿಳಿಯಿತು. ಮಧ್ಯಾಹ್ನ 12 ಗಂಟೆಯ ವೇಳೆಗೆ ಮಣ್ಣಸಂಕಕ್ಕೆ ಹೋದಾಗ ಅಲ್ಲಿ ಪೊಲೀಸರು ಮತ್ತು ಸಾರ್ವಜನಿಕರು ಇದ್ದರು. ಪೊಲೀಸರು ಶವ ಮಹಜರು ಮಾಡಿದ್ದು, ಅದಕ್ಕೆ ಸ್ಥಳೀಯ ಜನ ಪ್ರತಿನಿಧಿ ಎನ್ನುವ ನೆಲೆಯಲ್ಲಿ ಸಹಿ ಹಾಕಿದ್ದರು. ಶವದ ಮೈಮೇಲೆ ಬಟ್ಟೆ ಹಾಕಲಾಗಿತ್ತು. ಕುತ್ತಿಗೆಯಲ್ಲಿ ಗಾಯ ಕಂಡು ಬಂದಿತ್ತು. ಪೊಲೀಸರು ಅಲ್ಲಿಂದ ಸ್ಕೂಲ್ ಬ್ಯಾಗ್ ಮತ್ತು ಟ್ಯಾಗ್‌ನ್ನು ವಶಪಡಿಸಿಕೊಂಡಿದ್ದರು. ಈ ಸೊತ್ತುಗಳನ್ನು ನ್ಯಾಯಾಲಯದಲ್ಲಿ ಧನಲಕ್ಷ್ಮಿ ಅವರು ಗುರುತಿಸಿದರು.

ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿದ ಧನಲಕ್ಷ್ಮಿ ಅವರು ಸೌಜನ್ಯ ಸುದೃಢ ಮೈಕಟ್ಟನ್ನು ಹೊಂದಿದ್ದಳು. ಅವರ ಕುಟುಂಬ ರೈತ ಕುಟುಂಬ. ಸಾಮಾನ್ಯವಾಗಿ ರೈತ ಕುಟುಂಬದ ಹಳ್ಳಿ ಹುಡುಗಿಯರು ಹೆಚ್ಚು ಬಲವಾಗಿರುತ್ತಾರೆ. ಹೈಸ್ಕೂಲು ನಂತರದ ಶಾಲೆಗಳಲ್ಲಿ ಕ್ರೀಡೆಗೆ ಹೆಚ್ಚು ಪ್ರಾಧಾನ್ಯತೆ ಕೊಡುವುದರಿಂದ ಮಕ್ಕಳು ಬಲವಾಗಿರುತ್ತಾರೆ ಎಂದು ನ್ಯಾಯಾಲಯಕ್ಕೆ ವಿವರಿಸಿದರು. ಆ ಸಮಯದಲ್ಲಿ ಮಲ್ಲಿಕ್ ಜೈನ್, ಧೀರಜ್ ಜೈನ್, ಉದಯ್ ಜೈನ್ ರವರು ಈ ಕೃತ್ಯ ಮಾಡಿರಬಹುದು ಎಂದು ಬೆಳ್ತಂಗಡಿಯಲ್ಲಿ ಒಂದು ವರ್ಷಗಳ ಕಾಲ ಪ್ರತಿಭಟನಾ ನಡೆಯಿತು ಎಂದು ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿದ ಧನಲಕ್ಷ್ಮಿಯವರು ನೈಜ ಆರೋಪಿಗಳನ್ನು ಹಿಡಿಯಬೇಕೆಂದು ಪ್ರತಿಭಟನೆ ನಡೆದಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸೌಜನ್ಯ ಪ್ರಕರಣದ ಆರೋಪಿಯನ್ನು ದಸ್ತಗಿರಿ ಮಾಡಿದ ನಂತರವೂ ಆತ ನಿಜವಾದ ಆರೋಪಿ ಅಲ್ಲ ಎಂದು ಸಾರ್ವಜನಿಕರು ಪ್ರತಿಭಟನೆ ಮಾಡಿದರು ಎಂಬುದನ್ನು ಒಪ್ಪಿಕೊಂಡ ಧನಲಕ್ಷ್ಮಿ ಅವರು ಸೌಜನ್ಯಳ ಮೃತದೇಹ ಬಿದ್ದ ಸ್ಥಳಕ್ಕೂ ಆಕೆ ಮನೆಗೆ ಹೋಗುವ ದಾರಿಗೂ ಸುಮಾರು 20 ಅಡಿ ಅಂತರವಿದ್ದು, ಆ ಮಧ್ಯೆ ನೀರು ಹರಿಯುವ ತೋಡು ಇದೆ. ತೋಡಿಗೂ ದಾರಿಗೂ 10 ಅಡಿ ಅಂತರವಿದೆ. ತೋಡು 5-6 ಹೆಜ್ಜೆ ಇಡುವಷ್ಟು ಅಗಲವಿದೆ. ಆ ತೋಡಿನಿಂದ ಶವ ಇದ್ದ ಸ್ಥಳ 15 ಅಡಿ ದೂರದಲ್ಲಿ 4 ಅಡಿ ಎತ್ತರದಲ್ಲಿತ್ತು. ಸೌಜನ್ಯಳ ಮನೆಗೆ ಹೋಗುವ ರಸ್ತೆಯಿಂದ ಶವ ಬಿದ್ದಿದ್ದ ಸ್ಥಳ ಕಾಣಿಸುತ್ತದೆ ಎಂದವರು ನ್ಯಾಯಾಲಯಕ್ಕೆ ವಿವರಿಸಿದರು.

ಸೌಜನ್ಯ ಆ ರೀತಿ ರಸ್ತೆಯಿಂದ ತೋಡನ್ನು ದಾಟಿ ಹೋಗಬೇಕೆಂದರೆ ಯಾರಾದರೂ ಎಳೆದುಕೊಂಡು ಹೋಗಬೇಕು ಅಲ್ಲಿ ವಾಹನ ಹೋಗಲು ಸಾಧ್ಯವಿಲ್ಲ. ಯಾರಾದರೂ ಬೊಬ್ಬೆ ಹಾಕಿದರೆ ಸುಮಾರು 50 ಅಡಿ ದೂರದವರೆಗೆ ಕೇಳಿಸುತ್ತದೆ. ಆದರೆ ಆ ರಸ್ತೆಯಿಂದ ಆಕೆಯನ್ನು ಎಳೆದುಕೊಂಡು ಹೋಗಿದ್ದಲ್ಲಿ ಆಕೆ ಬೊಬ್ಬೆ ಹಾಕಿದ್ದರೆ ಅದು ಸುಮಾರು 50 ಅಡಿ ದೂರದವರೆಗೆ ಕೇಳಬೇಕು ಎಂಬ ಪಾಟೀ ಸವಾಲಿನ ಪ್ರಶ್ನೆಗೆ ಧನಲಕ್ಷ್ಮಿ ಅವರು ಗೊತ್ತಿಲ್ಲ ಎಂದು ಉತ್ತರಿಸಿ ನ್ಯಾಯಾಲಯದಲ್ಲಿ ಉಪಸ್ಥಿತರಿದ್ದ ಆರೋಪಿಯ ಮೈಕಟ್ಟನ್ನು ಗಮನಿಸಿದರೆ ಅಂತಹ ವ್ಯಕ್ತಿ ಸದೃಢಳಾಗಿದ್ದ ಸೌಜನ್ಯಳಂತಹ ಹುಡುಗಿಯನ್ನು ಎಳೆದುಕೊಂಡು ಹೋಗಲು ಸಾಧ್ಯವಿಲ್ಲ ಎಂಬ ಪ್ರಶ್ನೆಗೆ ನಕರಾತ್ಮಕ ಉತ್ತರ ನೀಡಿದರು.

ಸೌಜನ್ಯಳನ್ನು ಒಬ್ಬನೇ ವ್ಯಕ್ತಿ ಎಳೆದುಕೊಂಡು ಹೋಗುತ್ತಿದ್ದರೆ ಆಕೆ ಪ್ರತಿರೋಧಿಸಿ ತಪ್ಪಿಸಿಕೊಳ್ಳಬಹುದಿತ್ತು ಎಂಬ ಆರೋಪಿಪರ ವಕೀಲರ ಅಭಿಪ್ರಾಯಕ್ಕೆ ಸಾಕ್ಷಿ ಧನಲಕ್ಷ್ಮಿಯವರು ಸಕಾರಾತ್ಮಕವಾಗಿ ಉತ್ತರಿಸಲಿಲ್ಲ. ನೈಜ ಆರೋಪಿಗಳು ಬೇರೆ ಇದ್ದರೂ ಅಲ್ಲಿ ಭಿಕ್ಷೆ ಬೇಡುತ್ತಿದ್ದ ಆರೋಪಿಯ ವಿರುದ್ಧ ಸುಳ್ಳು ಕೇಸು ಹಾಕಿದ್ದಾರೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ಧನಲಕ್ಷ್ಮಿಯವರು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದರು. ಮೃತದೇಹವನ್ನು ಮುಟ್ಟಿ ನೋಡಲಿಲ್ಲ ಶವದ ಹತ್ತಿರ ನಿಂತು ನೋಡಿದ್ದೆ. ಶವದ ಮೈಮೇಲಿದ್ದ ಬಟ್ಟೆ ಒಣಗಿತ್ತೋ ಒದ್ದೆಯಾಗಿತ್ತೋ ಎಂದು ನೋಡಿಲ್ಲ. ಶವದ ಮೈಮೇಲಿದ್ದ ಗಾಯವನ್ನು ನಾನು ನೋಡಿಲ್ಲ. ಶವದ ಗುಪ್ತಾಂಗಗಳನ್ನು ನೋಡಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದು ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ಆರೋಪಿ ಪರ ವಕೀಲರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸ್ಪಷ್ಟಪಡಿಸಿದರು.

ಮುಂದುವರಿಯುವುದು.....

# ರೇಪ್‌ಗೆ ಒಳಗಾದ ಸ್ತ್ರೀಯ ಮಾನಸಿಕ ಸಮಸ್ಯೆಗಳು

*ಯಾವುದೇ ವ್ಯಕ್ತಿಯ ಮನಸ್ಸಿನ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡುವ, ಆಘಾತಕರ ಘಟನೆಗಳಲ್ಲಿ 'ರೇಪ್' (ಬಲಾತ್ಕಾರ ಸಂಭೋಗ) ಪ್ರಮುಖವಾದದ್ದು. ರೇಪ್‌ಗೆ ಒಳಗಾದ ಮಹಿಳೆ ಹಲವಾರು ವರ್ಷಗಳ ನಂತರವೂ ಅನೇಕ ಬಗೆಯ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ನೋವು ಸಮಸ್ಯೆಗಳಿಂದ ಬಳಲಬಹುದು. ಆ ಮಹಿಳೆ ಅಷ್ಟೇ ಅಲ್ಲ, ಆಕೆಯ ತಂದೆತಾಯಿ, ಗಂಡನೂ ಕೂಡ ಅಪಾರ ನೋವು ಸಮಸ್ಯೆಗಳಿಗೆ ಒಳಗಾಗುತ್ತಾರೆ. ಮಹಿಳೆಯ ಶುದ್ಧ ಚಾರಿತ್ರ್ಯಕ್ಕೆ ಪಾತಿವ್ರತ್ಯಕ್ಕೆ ವಿಪರೀತ ಗಮನ ಮತ್ತು ಪ್ರಾಮುಖ್ಯತೆಯನ್ನು ಕೊಡುವ ಸಾಂಪ್ರದಾಯಿಕ ಸಮಾಜದಲ್ಲಿ ರೇಪ್‌ಗೆ ಒಳಗಾದ ಮಹಿಳೆಯ ಬದುಕು ಅಸಹನೀಯವಾಗುತ್ತದೆ. ಅನೇಕ ಪ್ರಕರಣಗಳಲ್ಲಿ ಈ ಮಹಿಳೆ ಆತ್ಮಹತ್ಯೆಗೆ ಪ್ರಯತ್ನಿಸುವುದನ್ನು ಕಾಣುತ್ತೇವೆ. 'ನೀನು ಅಲ್ಲೇ ಆಗಲೇ ಸಾಯಬಾರದಿತ್ತೇ' ಮಾನವನ್ನು ಕಳೆದುಕೊಂಡ ಮೇಲೆ ಪ್ರಾಣವಿದ್ದರೇನು ಪ್ರಯೋಜನ ಎಂದು ಆಕೆಯ ಮನೆಯವರೇ ಆತ್ಮಹತ್ಯೆಗೆ ಪ್ರಚೋದಿಸಬಹುದು. ಅನೇಕ ಸಿನಿಮಾ ಕಥೆ ಕಾದಂಬರಿಗಳಲ್ಲಿ ಅತ್ಯಾಚಾರಕ್ಕೆ ಒಳಗಾದ ಹೆಣ್ಣು ಆತ್ಮಹತ್ಯೆ ಮಾಡಿಕೊಳ್ಳುವುದು ಅಥವಾ ಬುದ್ಧಿ ಭ್ರಮಣೆಗೀಡಾಗಿ 'ಹುಚ್ಚಿ'ಯಾಗುವುದು ಸರ್ವೇ ಸಾಧಾರಣ.*

*ಈ ಬಗ್ಗೆ ಸಮಗ್ರ ಅಧ್ಯಯನ ನಡೆಸಿರುವ ಖ್ಯಾತ ಮನೋವೈದ್ಯರಾದ ಡಾ|| ಸಿ.ಆರ್. ಚಂದ್ರಶೇಖರ್ ಅವರು 'ಪೊಲೀಸ್ ನ್ಯೂಸ್' ಓದುಗರಿಗಾಗಿಯೇ ಸಿದ್ದಪಡಿಸಿರುವ ಈ ಲೇಖನ ಬಹಳ ಉಪಯುಕ್ತವಾಗಿದೆ. ಈ ಲೇಖನದಲ್ಲಿ ಮಾನಸಿಕವಾಗಿ ತೊಳಲಾಟಕ್ಕೆ ಸಿಕ್ಕಿಬಿದ್ದು ನರಳುತ್ತಿರುವ ಮಹಿಳೆಯರಿಗೆ ಸ್ವಲ್ಪ ಸಮಾಧಾನ ಹಾಗೂ ಪರಿಹಾರ ದೊರೆಯುವುದೆಂದು ನಾವು ಆಶಿಸಿದ್ದೇವೆ. ಓದುಗರ ಪರವಾಗಿ ವೈದ್ಯರಾದ ಡಾ|| ಸಿ.ಆರ್. ಚಂದ್ರಶೇಖರ್ ಅವರಿಗೆ ನಮ್ಮ ನಮನಗಳನ್ನು ತಿಳಿಸುತ್ತೇವೆ.*

*-ಸಂ.*



ಡಾ|| ಸಿ.ಆರ್. ಚಂದ್ರಶೇಖರ್
ಎಂ.ಡಿ.,
ಮನೋವೈದ್ಯರು

ವಂಚನೆಯಿಂದಲೋ, ಭಯಪಡಿಸಿ ಅಥವಾ ಅಪಾಯಕಾರಿ ಆಯುಧವನ್ನು ತೋರಿಸಿ, ಅಮಲು ಬರುವ ಮತ್ತು ಅರೆಪ್ರಜ್ಞಾವಸ್ಥೆಯನ್ನುಂಟು ಮಾಡುವ ಮದ್ಯ, ಮಾದಕ ವಸ್ತುಗಳನ್ನು ತಿನ್ನಿಸಿ, ಬಲ ಪ್ರಯೋಗದಿಂದ ಹೀಗೆ ಯಾವುದೋ ಒಂದು ಮಾರ್ಗ ಅನುಸರಿಸಿ, ಸ್ತ್ರೀಯ ಅನುಮತಿ ಪಡೆಯದೆ ಅಥವಾ ಪಡೆದು ಆಕೆಯ ಇಚ್ಛೆಗೆ ವಿರುದ್ಧವಾಗಿ, ಆಕೆಯೊಂದಿಗೆ ಸಂಭೋಗ ಮಾಡುವುದು ರೇಪ್-ಬಲಾತ್ಕಾರ ಸಂಭೋಗ ಎನಿಸಿಕೊಳ್ಳುತ್ತದೆ. ಪುರುಷನ ಶಿಶ್ನ ಸ್ತ್ರೀಯ ಯೋನಿಯ ಹೊರಭಾಗವನ್ನು ಪ್ರವೇಶಿಸಿದರೆ ಸಾಕು. ಅದು ರೇಪ್ ಆಗುತ್ತದೆ. ಶಿಶ್ನವು ಯೋನಿಯನ್ನು ಪೂರ್ಣ ಪ್ರವೇಶ, ವೀರ್ಯಸ್ಖಲನ ಆಗಲೇಬೇಕಿಲ್ಲ. ಆಲಿಂಗನ, ಚುಂಬನ, ಸ್ತನಗಳ ಸ್ಪರ್ಶ ಅಥವಾ ದೇಹದ ಇತರ ಭಾಗಗಳ ಸ್ಪರ್ಶ ರೇಪ್ ಮಾಡಿದ ವ್ಯಕ್ತಿ ಯಾರು. ಎಲ್ಲಿ, ಯಾವಾಗ ಅದು ಹೇಗಾಯಿತು ಜೊತೆಗೆ ದೇಹದ ಮೇಲೆ ಆದ ಇತರ ಆಕ್ರಮಣ-ಗಾಯಗಳ ಮೇಲೆ ರೇಪ್‌ನ ದುಷ್ಪರಿಣಾಮಗಳು ನಿರ್ಧಾರವಾಗುತ್ತವೆ.

**1. ವ್ಯಕ್ತಿ ಪರಿಚಿತನೇ ಅಪರಿಚಿತನೇ?**

ತಂದೆ, ಅಣ್ಣ, ತಮ್ಮ, ತಂದೆ ಅಥವಾ ತಾಯಿಯ ಅಣ್ಣತಮ್ಮಂದಿರು, ಅಕ್ಕ ಅಥವಾ ತಂಗಿಯ ಗಂಡ - ಹೀಗೆ ತೀರಾ ಹತ್ತಿರದ ಸಂಬಂಧಿಗಳು ಅಥವಾ ಅಪರಿಚಿತರು ಬಲಾತ್ಕಾರ ಸಂಭೋಗ ಮಾಡಿದಾಗ ಸ್ತ್ರೀ ಅನುಭವಿಸುವ ಮಾನಸಿಕ ವೇದನೆ ಅಪಾರ; ಅದರ ದುಷ್ಪರಿಣಾಮ ಬಹಳ ವರ್ಷಗಳ ಕಾಲ ಕಾಡುತ್ತದೆ. ಸ್ನೇಹಿತ, ಸಹೋದ್ಯೋಗಿ, ಪರಿಚಿತ ನೆರೆಹೊರೆಯವರಿಂದ ರೇಪ್‌ಗೊಳಗಾದ ತೀವ್ರತೆ ಹಾಗೂ ಅಹಿತಕರ ಪರಿಣಾಮ ತುಸು ಕಡಿಮೆ.

**2. ಗ್ಯಾಂಗ್ ರೇಪ್**

ಒಮ್ಮೆಗೇ ಹಲವಾರು ಜನರಿಂದ ರೇಪ್ ನಡೆದಾಗ ಆಗುವ ಆಘಾತ ಅಪರಿಮಿತ. ಗಾಯ ಮಾಯಲು ಹಲವಾರು ವರ್ಷಗಳೇ ಬೇಕಾದಾವು. ದೀರ್ಘಕಾಲಿಕ ದುಷ್ಪರಿಣಾಮಗಳು ಹೆಚ್ಚು.


**3. ರೇಪ್ ಮನೆಯೊಳಗೆ ನಡೆಯಿತೇ ಅಥವಾ ಮನೆಯಿಂದ ಹೊರಗಡೆ ಬೇರೆಲ್ಲಾದರೂ ನಡೆಯಿತೇ?**

ತನ್ನ ಮನೆಯೊಳಗೇ ರೇಪ್‌ಗೆ ಒಳಗಾಗುವ ಸ್ತ್ರೀ ಹೆಚ್ಚು ಮಾನಸಿಕ ಕ್ಲೇಶವನ್ನು ಬಹಳ ಕಾಲ ಅನುಭವಿಸುತ್ತಾಳೆ. ಮನೆಯಿಂದ ಹೊರಗಡೆ ಎಲ್ಲೋ ಆ ಕೃತ್ಯ ನಡೆದಾಗ ಆ ಜಾಗಕ್ಕೆ ಹೋಗದೆ ಕಹಿ ನೆನಪನ್ನು ಮರೆಯಲು ಸಾಧ್ಯವಾಗಬಹುದು.

**4.** ರೇಪ್‌ನೊಂದಿಗೆ ಲೈಂಗಿಕ ಸೋಂಕು, ಎಚ್‌ಐವಿ ಸೋಂಕು ಮತ್ತು ಇತರೆ ಸೋಂಕುಗಳು. ರೇಪ್ ನಂತರ ಸ್ತ್ರೀ ಲೈಂಗಿಕ ರೋಗಗಳಿಗೆ ಎಚ್‌ಐವಿ ಸೋಂಕು ಅಥವಾ ಜನನಾಂಗಕ್ಕೆ ಆದ ಗಾಯಕ್ಕೆ ಸೋಂಕಾಗಿ ತೊಂದರೆಗೀಡಾದ ಸ್ತ್ರೀ ಸಹಜವಾಗಿ ಹೆಚ್ಚು ಕ್ಲೇಶಕ್ಕೆ ಒಳಗಾಗುತ್ತಾಳೆ.

**5. ಗರ್ಭಧಾರಣೆ :** ರೇಪ್ ಪ್ರಕರಣಗಳಲ್ಲಿ ಶೇಕಡಾ ಒಂದರಷ್ಟು ಪ್ರಕರಣಗಳಲ್ಲಿ ಗರ್ಭಧಾರಣೆ ಆಗುತ್ತದೆ. ಅತ್ಯಾಚಾರಕ್ಕೆ ಒಳಗಾಗಿದ್ದಲ್ಲದೆ ಅತ್ಯಾಚಾರಿಯಿಂದ ಗರ್ಭ ಧರಿಸಿದ ಸ್ತ್ರೀಯ ಮನೋವೇದನೆ ವರ್ಣನಾತೀತವಾಗುತ್ತದೆ. ಪಾಪದ ಬಸಿರು ಹೊತ್ತ ಜೀವನ ಬೇಡವೆನಿಸುತ್ತದೆ.

**6.** ತನ್ನ ಮನೆಯವರ (ತಂದೆತಾಯಿ, ಸೋದರ ಸೋದರಿ, ಗಂಡ, ಮಕ್ಕಳ) ಮುಂದೆ ಅತ್ಯಾಚಾರಕ್ಕೆ ಒಳಗಾದ ಸ್ತ್ರೀ, ಆ ಘಟನೆಯನ್ನು ಬಹುಕಾಲ ಮರೆಯಲಾರಳು.



**ಮಾನಸಿಕ ಪ್ರಕ್ರಿಯೆ ತತ್‌ಕ್ಷಣದ ಪ್ರತಿಕ್ರಿಯೆಗಳು**

**1) ಸ್ಥಂಭೀಭೂತ ಶಾಂಕ್ - ಯಾವ ಪ್ರತಿಕ್ರಿಯೆಯೂ ಇಲ್ಲ :** ರೇಪ್‌ಗೆ ಒಳಗಾದ ಸ್ತ್ರೀ ಮಾನಸಿಕ ಆಘಾತಕ್ಕೆ ಒಳಗಾಗಬಹುದು; ಭಾವನಾರಹಿತ ಮುಖ, ಶೂನ್ಯದತ್ತ ದೃಷ್ಟಿ ಸುತ್ತಮುತ್ತಲಿನ ಪ್ರಚೋದನೆಗಳಿಗೆ ಯಾವ ಪ್ರಕ್ರಿಯೆಯೂ ಇಲ್ಲದಿರುವಿಕೆ, ಆಹಾರ-ನಿದ್ರೆ ಇತ್ಯಾದಿ ಶರೀರದ ಪ್ರಾಥಮಿಕ ಅಗತ್ಯಗಳನ್ನು ಗಮನಿಸಲಾಗದಿರುವುದು ಪರಿಚಿತರನ್ನೂ ಗುರುತಿಸದಿರುವುದು ಆಗಬಹುದು. ನಿರ್ಜೀವ ಗೊಂಬೆಯಂತಾಗಬಹುದು.

**2) ನಿರಾಕರಣೆ :** ತಾನು ರೇಪ್‌ಗೆ ಒಳಗಾದಿದ್ದನ್ನು ಸ್ತ್ರೀ ನಿರಾಕರಿಸಬಹುದು. ತನಗೇನೂ ಆಗಿಲ್ಲ ಎನ್ನಬಹುದು. ತನ್ನ ಮಾನಭಂಗವಾಗಿಲ್ಲ ಎನ್ನಬಹುದು.

**3) ಭಾವೋದ್ರೇಕ :** ಸ್ತ್ರೀ ವಿಪರೀತವಾಗಿ ದುಃಖಿಸಬಹುದು. ಅಳಬಹುದು ತನ್ನ ಪಾವಿತ್ರ್ಯ ಹಾಳಾಯಿತು. ತನ್ನನ್ನು ಇನ್ನು ಮನೆಯವರು ಹತ್ತಿರ ಸೇರಿಸುವುದಿಲ್ಲ. ತನ್ನ ಬದುಕಿಗೆ ಇನ್ನು ಬೆಲೆ ಇಲ್ಲ. ತನ್ನಂಥವಳು ಇನ್ನೂ ಬದುಕಿರಬಾರದು, ತಾನು ಸಾಯುವುದೇ ಸರಿ ಎಂದು ನಿರ್ಧರಿಸಿ ಸ್ವ ಹತ್ಯೆಗೆ ಪ್ರಯತ್ನಿಸಬಹುದು. ಇಲ್ಲವೇ ವಿಪರೀತ ಭಯಕ್ಕೆ ತುತ್ತಾಗಬಹುದು. ಅತ್ಯಾಚಾರಿ ಮತ್ತೆ ಬರಬಹುದು, ತನ್ನ ಮನೆಯವರು ತನ್ನನ್ನು ತಿರಸ್ಕರಿಸುತ್ತಾರೆ, ಶಿಕ್ಷೆಗೆ ಗುರಿ ಮಾಡುತ್ತಾರೆ ಅತ್ಯಾಚಾರಿಗೆ ತಾನೇ ಪ್ರೋತ್ಸಾಹ ಕೊಟ್ಟೆ ಎಂದು ದೂಷಿಸುತ್ತಾರೆ. ಜನ ತನ್ನನ್ನು ಪತಿತೆ ಎಂದು ಅವಮಾನಿಸುತ್ತಾರೆ ಎಂದು ಭಯಪಡತೊಡಗಬಹುದು ಅಥವಾ ವಿಪರೀತ ಕೋಪೋದ್ರೇಕಕ್ಕೆ ಒಳಗಾಗಿ, ಅತ್ಯಾಚಾರಿಯ ಮೇಲೆ ಆಕ್ರಮಣ ಮಾಡಬಹುದು. ಅತ್ಯಾಚಾರಿಯ ಬೆಂಬಲಿಗರ ಮೇಲೆ, ಸಂಬಂಧಪಟ್ಟವರ ಮೇಲೆ ಮತ್ತು ಯಾವುದೇ ಗಂಡಸಿನ ಮೇಲೆ ರೋಷವನ್ನು ವ್ಯಕ್ತಪಡಿಸ'ಬಹುದು.

**4) ಫ್ಲಾಶ್ ಬ್ಯಾಕ್ಸ್ - ನೆನಪಿನ ಪುನರಾವರ್ತನೆ :** ತನ್ನ ಮೇಲೆ ನಡೆದ ಅತ್ಯಾಚಾರ, ಅತ್ಯಾಚಾರಿಯ ವರ್ತನೆ ಸನ್ನಿವೇಶ- ಇವೆಲ್ಲ ಸ್ತ್ರೀಯ ಮನಃಪಟಲದ ಮುಂದೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ ಮರೆಯಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಅದೃಶ್ಯ, ಅತ್ಯಾಚಾರಿಯ ಮಾತುಗಳು, ಆ ಸ್ಥಳ ಪದೇ ಪದೇ ನೆನಪಿಗೆ ಬರಬಹುದು. ಕನಸಿನಲ್ಲೂ ಈ ಘಟನಾವಳಿ ಕಾಣಿಸಿಕೊಂಡು ವ್ಯಕ್ತಿಗೆ ಹಿಂಸೆಯನ್ನುಂಟು ಮಾಡುತ್ತದೆ.

**5) ಅತಿ ಜಾಗೃತಾವಸ್ಥೆ (ಹೈಪರ್ ಅರೌಸಲ್‌ಸ್ಟೇಟ್) :** ಮಿದುಳಿನ ಸ್ವಾಯತ್ತ ನರ ಮಂಡಲ ಅತಿ ಜಾಗೃತಾವಸ್ಥೆಯಲ್ಲಿದ್ದು ವ್ಯಕ್ತಿ ಸಾಧಾರಣ ಅಥವಾ ಅಲ್ಪ ಪ್ರಚೋದನೆಗಳಿಗೇ ವಿಪರೀತವಾಗಿ ಪ್ರತಿಕ್ರಿಯಿಸತೊಡಗುತ್ತಾಳೆ. ಉದಾ: ಇತರರ ಹೆಜ್ಜೆ ಶಬ್ದಕ್ಕೇ ಬೆಚ್ಚಿಬೀಳಬಹುದು. ಯಾರಾದರೂ ಯಾವುದೋ ಒಂದು ಸಣ್ಣ ವಿಷಯದ ಬಗ್ಗೆ ಟೀಕಿಸಿದಾಗ ಸ್ತ್ರೀ ಸಿಟ್ಟಿಗೇಳಬಹುದು ಅಥವಾ ದುಃಖಿಸಬಹುದು. ಅನಿರೀಕ್ಷಿತವಾಗಿ ಅಪರಿಚಿತರು ಅಥವಾ ಅವರ ನೆರಳು ಬಿದ್ದರೂ ಹೆದರಿ ನಡುಗಬಹುದು.

**6) ದೇಹದ ಪ್ರಾಥಮಿಕ ಕ್ರಿಯೆಗಳ ಏರುಪೇರು:** ವೇಳೆ ವೇಳೆಗೆ ಸರಿಯಾಗಿ ಹಸಿವಾಗುವುದಿಲ್ಲ, ನಾಲಿಗೆ ರುಚಿ ಇರುವುದಿಲ್ಲ, ನಿದ್ರೆ ಬರುವುದಿಲ್ಲ, ವಿಪರೀತ ಕೆಟ್ಟ ಭಯಂಕರ ಕನಸುಗಳು ಕಾಣಿಸಿಕೊಳ್ಳಬಹುದು. ಮಲಬದ್ಧತೆ ಅಥವಾ ಭೇದಿ ಮೂತ್ರ ವಿಸರ್ಜನೆಯ ತೊಂದರೆ ಕಾಣಿಸಿಕೊಳ್ಳಬಹುದು. ಲೈಂಗಿಕ ಕ್ರಿಯೆಯಲ್ಲಿ ಸಂಪೂರ್ಣ ನಿರಾಸಕ್ತಿ ಕಂಡು ಬರುತ್ತದೆ.

**7) ಅನಾಸಕ್ತಿ ಅಸಹಾಯಕತೆ** ಪಾಪ ಪ್ರಜ್ಞೆ ನಿರಾಶೆಗಳು ಪದೇ ಪದೇ ಕಾಡತೊಡಗುತ್ತವೆ. ದೈನಂದಿನ ಕೆಲಸ-ಕರ್ತವ್ಯಗಳು ಬೇಡವಾಗುತ್ತದೆ. ಸುಮ್ಮನೆ ಒಂದೆಡೆ ಕುಳಿತುಕೊಳ್ಳಲು ಮಲಗಿರಲು ಅಥವಾ ಎಲ್ಲಿಗಾದರೂ ಓಡಿ ಹೋಗಲು ಸ್ತ್ರೀ ಇಷ್ಟಪಡಬಹುದು ಅಸಹಾಯಕಳಾಗಿ ಚಡಪಡಿಸಬಹುದು.

**8) ಬುದ್ಧಿಭ್ರಮೆ** ಆದ ಮಾನಸಿಕ ಆಘಾತದ ಪರಿಣಾಮವಾಗಿ ಸ್ತ್ರೀ ಬುದ್ಧಿಭ್ರಮಣೆಗೆ ಒಳಗಾಗಬಹುದು. ಅಸಂಬದ್ಧ ಮಾತು ನಡವಳಿಕೆ, ಭಾವೋದ್ರೇಕಗಳು, ಗೊತ್ತುಗುರಿ ಇಲ್ಲದ ಅಲೆತ, ಪ್ರಾಥಮಿಕ ಅಗತ್ಯಗಳ ನಿರ್ಲಕ್ಷ್ಯ, ಎಲ್ಲರ ಮೇಲೆ ಸಂಶಯ ಇತ್ಯಾದಿ ಮಾನಸಿಕ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಸ್ತ್ರೀ ಆಗ ಆತ್ಮಹತ್ಯೆಗೆ ಅಥವಾ ಹಿಂಸಾಚಾರಕ್ಕೆ ತೊಡಗಬಹುದು.

**ದೀರ್ಘಕಾಲಿಕ ಮಾನಸಿಕ ಸಮಸ್ಯೆಗಳು (Post Traumatic Stress Disorder)**

ಹಲವಾರು ತಿಂಗಳುಗಳ ಕಾಲ ಅಥವಾ ವರ್ಷಗಳ ಕಾಲ ವ್ಯಕ್ತಿ ಅನೇಕ ಬಗೆಯ ದೈಹಿಕ-ಮಾನಸಿಕವಾಗಿ ರೋಗಲಕ್ಷಣಗಳಿಂದ ಬಳಲತೊಡಗುತ್ತಾಳೆ.

**1.** ಅಸ್ಪಷ್ಟ ಮತ್ತು ನಿರಂತರವಾದ ಶಾರೀರಿಕ ನೋವು, ಸುಸ್ತು, ನಿಶ್ಯಕ್ತಿ, ಸ್ತ್ರೀ, ತಲೆನೋವು, ಎದೆ ನೋವು, ಸೊಂಟ ನೋವು ಜನನಾಂಗದಲ್ಲಿ ನೋವು, ಸ್ವಲ್ಪ ಕೆಲಸ ಮಾಡಿದರೂ ಸುಸ್ತು ಆಯಾಸ ದೈನಂದಿನ ಕೆಲಸ ಕಾರ್ಯ ಮಾಡಲು ಶಕ್ತಿ ಸಾಲದು ಇತ್ಯಾದಿ ತೊಂದರೆಗಳಿಂದ ಬಳಲಬಹುದು. ವೈದ್ಯಕೀಯ ತಪಾಸಣೆಯಿಂದ ದೇಹದಲ್ಲಿ ಯಾವ ನ್ಯೂನತೆ ಕಾರಣ ಕಂಡುಬರುವುದಿಲ್ಲ. ನೋವು ನಿವಾರಕ ಮಾತ್ರೆಗಳಿಂದ ಕೆಲಕಾಲದ ಶಮನ ಸಿಗುತ್ತದೆಯಾದರೂ ನೋವು ಮತ್ತೆ ಮತ್ತೆ ಮರುಕಳಿಸುತ್ತಿರುತ್ತದೆ. ಪುಷ್ಟಿಕರ ಆಹಾರ, ವಿಟಮಿನ್ ಮಾತ್ರೆ, ಟಾನಿಕ್ ಸೇವಿಸಿದರೂ ಸುಸ್ತು, ನಿಶ್ಯಕ್ತಿ ಹೋಗದು.

**2.** ಅಸ್ಪಷ್ಟ ಆತಂಕ, ಭಯ, ಬೇಸರ, ದುಃಖ, ನಿರಾಸಕ್ತಿ, ಸಂತೋಷವಿಲ್ಲದಿರುವಿಕೆ, ಸ್ವಲ್ಪ ಮಟ್ಟಿನ ಸಿಟ್ಟು ಕೋಪಗಳು ಮುಂದುವರೆಯುತ್ತವೆ. ವ್ಯಕ್ತಿಯ ದೈಹಿಕ, ಮಾನಸಿಕ ಸಾಮರ್ಥ್ಯ ಕೌಶಲ ಕುಗ್ಗುತ್ತವೆ. ಉತ್ಸಾಹ ಇರದು.

**3.** ಆಹಾರ ಸೇವನೆ, ನಿದ್ರಾ ತೊಂದರೆಗಳು, ಹಸಿವಾಗದಿರುವುದು, ಅಜೀರ್ಣ, ಮಲಬದ್ಧತೆ, ಹೊಟ್ಟೆ ಉಬ್ಬರ, ನಿದ್ರೆ ಬರದಿರುವುದು, ಭಯ ಹುಟ್ಟಿಸುವ ಕೆಟ್ಟ ಕನಸುಗಳು ಕಾಣಿಸಿಕೊಳ್ಳುತ್ತವೆ.

**4.** ಲೈಂಗಿಕ ಕ್ರಿಯೆ, ಲೈಂಗಿಕ ಆಸೆ ತಗ್ಗುತ್ತದೆ. ಲೈಂಗಿಕ ಕ್ರಿಯೆ ಬಗ್ಗೆ ಅಸಹ್ಯ ಭಯ ಬೇಸರಗಳು ಮೂಡಬಹುದು. ಲೈಂಗಿಕ ಆಸೆ ಮೂಡಿದರೂ ಗಂಡನ ಪ್ರಚೋ

☞ 14

13

ದನೆಯಿಂದ ಸ್ತ್ರೀಯ ದೇಹದಲ್ಲಿ ಆಗಬೇಕಾದ ಬದಲಾವಣೆಗಳು ಆಗುವುದಿಲ್ಲ. ಯೋನಿ ರಸ ಉತ್ಪತ್ತಿಯಾಗದೇ ಯೋನಿಯಲ್ಲಿ ಶಿಶ್ನ ಪ್ರವೇಶ ಕಷ್ಟವಾಗುತ್ತದೆ. ಯೋನಿಯ ಸುತ್ತಲಿನ ಸ್ನಾಯುಗಳು ಬಲವಾಗಿ ಸಂಕುಚನಗೊಂಡು, ಸಂಭೋಗದಿಂದ ಸ್ತ್ರೀಗೆ ನೋವಾಗುತ್ತದೆ. ಇದರಿಂದ ಗಂಡ ಹೆಂಡತಿಯರಿಗೆ ಸಂಭೋಗ ಕ್ರಿಯೆಯಿಂದ ಯಾವ ಸಂತೋಷ ತೃಪ್ತಿ ಸಿಗದೇ ಲೈಂಗಿಕ ಅತೃಪ್ತಿ ಮನೆ ಮಾಡುತ್ತದೆ. ಇದರಿಂದ ದಾಂಪತ್ಯ ವಿರಸ ಉಂಟಾಗಬಹುದು.

5. ವರ್ಷಕ್ಕೊಮ್ಮೆ ರೇಪ್ ನಡೆದ ದಿನದ ಆಸುಪಾಸಿನ ಅವಧಿಯಲ್ಲಿ ವ್ಯಕ್ತಿಗೆ ವಿಪರೀತ ಭಯ, ನಿದ್ರಾಹೀನತೆ, ಹಿಂದೆ ನಡೆದ ರೇಪ್ ದೃಶ್ಯದ ಅನುಭವದ ಪುನರಾವರ್ತನೆ, ಜನನಾಂಗ/ಎದೆ/ತಲೆಯಲ್ಲಿ ನೋವು ಕಾಣಿಸಿಕೊಳ್ಳಬಹುದು.

ಸ್ತ್ರೀ ರೇಪ್ ನಡೆದ ಸ್ಥಳಕ್ಕೆ ಹೋದಾಗ ಅಥವಾ ಆ ಕ್ಷೇತ್ರದಲ್ಲಿ ಹಾದು ಹೋಗುವಾಗ ಅಥವಾ ಆ ಸ್ಥಳವನ್ನು ನೆನಪಿಸುವ ಇನ್ಯಾವುದೇ ಸ್ಥಳಕ್ಕೆ ಹೋದಾಗ, ಭಯದ ಲಕ್ಷಣಗಳು ಮತ್ತೆ ಕಾಣಿಸಿಕೊಳ್ಳಬಹುದು.

6) ವ್ಯಕ್ತಿತ್ವ ಬದಲಾವಣೆ : ರೇಪ್ ಸೇರಿದಂತೆ ಯಾವುದೇ ದೊಡ್ಡ ದುರಂತ ಘಟಿಸಿದ ಮೇಲೆ, ಕೆಲವು ವ್ಯಕ್ತಿಗಳ ವ್ಯಕ್ತಿಗಳೇ ಬದಲಾಗಿ ಹೋಗಬಹುದು. ಸ್ನೇಹಶೀಲಳಾಗಿದ್ದ ವ್ಯಕ್ತಿ. ಸಂಶಯಪೀಡಿತಳಾಗಬಹುದು ಹಣದ ವಿಚಾರದಲ್ಲಿ ಧಾರಾಳವಾಗಿದ್ದಾಕೆ ಜುಗ್ಗಿಯಾಗಬಹುದು, ಪಟಪಟನೆ ಮಾತನಾಡುತ್ತಾ ಎಲ್ಲರೊಂದಿಗೆ ಸದಾ ಚಟುವಟಿಕೆಯಿಂದಿರುತ್ತಿದ್ದ ಸ್ತ್ರೀ ಅಂತರ್ಮುಖಿಯಾಗಿ ಮೌನಿಯಾಗಬಹುದು.

7) ಮನೋ ದೈಹಿಕ ಬೇನೆಗಳ ಉಲ್ಬಣ : ಈ ಮೊದಲೇ ಇದ್ದ ಯಾವುದೇ ಮನೋದೈಹಿಕ ಬೇನೆ, ಘಟನೆಯ ನಂತರ ದೀರ್ಘಾವಧಿಯಲ್ಲಿ ಔಷಧೋಪಚಾರಕ್ಕೆ ಬಗ್ಗದೇ ಉಲ್ಬಣವಾಗಬಹುದು. ಮನೋದೈಹಿಕ ಬೇನೆಗಳೆಂದರೆಜಠರ ಅಥವಾ ಕರುಳಿನ ಹುಣ್ಣು ಸಿಹಿ ಮೂತ್ರರೋಗ, ಅಧಿಕ ರಕ್ತದೊತ್ತಡ ಮೈಗ್ರೇನ್ ತಲೆ ನೋವು, ಸಂಧಿತವಾತ, ಚರ್ಮದ ಕೆಲವು ಕಾಯಿಲೆಗಳು, ಋತುಸ್ರಾವದ ಏರುಪೇರುಗಳು ಆಸ್ತಮಾ ಇತ್ಯಾದಿ.

### ಸ್ತ್ರೀಯ ಆರೈಕೆ

ರೇಪ್‌ಗೆ ಒಳಗಾದ ವ್ಯಕ್ತಿಗೆ, ಆ ಘಟನೆಯ ನಂತರ ದೊರೆಯುವ ಆಸರೆ ಆರೈಕೆಗಳಿಂದ ಆಕೆ ಚೇತರಿಸಿಕೊಳ್ಳಲು ಸಾಧ್ಯವಿದೆ. ಆಸರೆ ಆರೈಕೆಯ ಬದಲು ಟೀಕೆ ತಿರಸ್ಕಾರ, ಹೀನಾಯ, ವಿಚಾರಣೆಯ ನೆಪದಲ್ಲಿ ಮಾನಸಿಕ ಹಿಂಸೆ, ಆಕೆಯ ಪಾಪಪ್ರಜ್ಞೆಯನ್ನು ಹೆಚ್ಚಿಸುವ ಪರಿಸರ ಮತ್ತು ಸಂಬಂಧಪಟ್ಟವರ ಧೋರಣೆಗಳು ಆಕೆಯನ್ನು ದೈಹಿಕ ಮಾನಸಿಕ ಅಸ್ವಸ್ಥತೆಗಳಿಗೆ ದೂಡುತ್ತದೆ.



### ಸಮಾಧಾನ

ಅತ್ಯಾಚಾರಿ ಮುಟ್ಟಿದ್ದು ನಿನ್ನ ದೇಹವನ್ನು, ನಿನ್ನ ಮನಸ್ಸನ್ನಲ್ಲ, ನಿನ್ನ ಪಾವಿತ್ರ್ಯತೆಯನ್ನಲ್ಲ, ಈ ಆಗಬಾರದ ಘಟನೆಗೆ ನೀನು ಕಾರಣವಲ್ಲ. ಅದಕ್ಕೆ ಕಾರಣ ಅತ್ಯಾಚಾರಿಯ ಸ್ವಾರ್ಥ ಅವನ ಕ್ರೋಧ ಅವನ ಕಾಮ ಮತ್ತು ಅವನ ಅಸ್ವಸ್ಥ ಮನಸ್ಸು. ಇದೊಂದು ಕಹಿ ಘಟನೆ. ಸರಿ, ಆದರೆ ಅದರ ಬಗ್ಗೆ ಚಿಂತೆ ವ್ಯಥೆಪಡುವ ಅಗತ್ಯವಿಲ್ಲ. ಈ ಅನ್ಯಾಯ, ಈ ನೋವನ್ನು ಸಹಿಸುವ ಶಕ್ತಿ ಬೆಳೆಸಿಕೋ, ಅತ್ಯಾಚಾರಿಯ ವಿರುದ್ಧ ನಡೆಯುವ ಕಾರ್ಯಾಚರಣೆಗೆ ಸಹಕರಿಸು. ಕೆಟ್ಟ ಕೆಲಸ ಮಾಡಿದ ಅವನು ನಾಚಬೇಕೇ ವಿನಃ ನೀನು ನಾಚುವ ಅಗತ್ಯವಿಲ್ಲ.

ಪೊಲೀಸರಾಗಲಿ ವಕೀಲರಾಗಲೀ ನ್ಯಾಯಾಧೀಶರಾಗಲಿ ಕೇಳುವ ಪ್ರಶ್ನೆಗಳು ಯೋಚಿಸಿ ನೈಜ ಉತ್ತರಗಳನ್ನು ಕೊಡು ಎಂದು ಆಕೆಗೆ ಹೇಳಬೇಕು. ಆಪ್ತಸಲಹೆ ಸಮಾಧಾನ ನೀಡುವ ವ್ಯಕ್ತಿ ಮಹಿಳೆಯೇ ಆದರೆ ಉತ್ತಮ. ರೇಪ್‌ಗೆ ಒಳಗಾದ ಸ್ತ್ರೀಯನ್ನು ಮಹಿಳಾ ಪೊಲೀಸ್ ಮಹಿಳಾ ವಕೀಲರು ಹಾಗೂ ಮಹಿಳಾ ನ್ಯಾಯಾಧೀಶರೇ ಸಂದರ್ಶಿಸುವುದು ಉತ್ತಮ ಹಾಗೂ ಅಪೇಕ್ಷಣೀ.

**ಹೇಳಿಕೊಳ್ಳಲು ಪ್ರೋತ್ಸಾಹ :** ಸ್ತ್ರೀ ತನ್ನ ಮೇಲಾದ ಅತ್ಯಾಚಾರ ತಾನು ಅನುಭವಿಸಿದ ಭಯ ನೋವು ಮುಂದೇನಾಗಬಹುದು ಎಂಬ ಆತಂಕ ಇತರರ ಧೋರಣೆಗಳ ಬಗ್ಗೆ ವಿವರವಾಗಿ ಹೇಳಿಕೊಳ್ಳಲು ಪ್ರೋತ್ಸಾಹ ಕೊಡಬೇಕು. ಮುಕ್ತ ಮನಸ್ಸಿನಿಂದ, ಯಾವ ಸಂಕೋಚವಿಲ್ಲದೆ ಪದೇ ಪದೇ ಹೇಳಿಕೊಳ್ಳುವುದರಿಂದ, ಕೇಳಿಸಿಕೊಳ್ಳುವ ವ್ಯಕ್ತಿ ಸಹಾನುಭೂತಿಯಿಂದ ಸ್ನೇಹಭಾವದಿಂದ ಆಸಕ್ತಿಯಿಂದ ಕೇಳಿಸಿಕೊಂಡು, ಸಮಾಧಾನ ಹೇಳುವುದರಿಂದ ಸ್ತ್ರೀಯ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಆಕೆಯ ಆತಂಕ ಭಯ, ಧೋರಣೆ ಪ್ರತಿಕ್ರಿಯೆಗಳನ್ನು ತರಲು ಆಪ್ತ ಸಲಹೆಗಾರ್ತಿ ಪ್ರಯತ್ನಿಸಬೇಕು. ತಪಾಸಣೆ ಮಾಡಿದ ವೈದ್ಯರನ್ನು ಕಂಡು ಅವರ ಮೂಲಕ ದೇಹಕ್ಕೆ (ಜನನಾಂಗಳಿಗೆ) ಆಗಿರುವ ಗಾಯದ ತೀವ್ರತೆ, ಯಾವುದೇ ಸೋಂಕು ಚಿಕಿತ್ಸೆಯ ವಿವರಗಳನ್ನು ಕೊಡಿಸಬೇಕು. ಲೈಂಗಿಕ ರೋಗದ ಅರವಿದ್ದರೆ ಅದರ ನಿವಾರಣೆ ಹೇಗೆ ಎಂಬುದನ್ನು ತಿಳಿಸಿ ಹೇಳಬೇಕು. ಗರ್ಭಕಟ್ಟಿದ್ದರೆ ವೈದ್ಯಕೀಯ ಗರ್ಭಪಾತಕ್ಕೆ ವ್ಯವಸ್ಥೆ ಮಾಡಬೇಕು. ಮನೋ ವೈದ್ಯಕೀಯ ಸಲಹೆ-ಚಿಕಿತ್ಸೆಗೂ ಏರ್ಪಾಟು ಮಾಡಬೇಕು.

**ಚಟುವಟಿಕೆ ಹವ್ಯಾಸ :** ಸ್ತ್ರೀ ಏನೂ ಮಾಡದೇ ಸುಮ್ಮನೆ ಒಂದೆಡೆ ಕುಳಿತುಕೊಳ್ಳಲು ಬಿಡಬಾರದು. ಕೆಲಸ / ಚಟುವಟಿಕೆಗಳಿಲ್ಲದಿದ್ದರೆ ಆಕೆಯ ಮನಸ್ಸು ರೇಪ್ ಮತ್ತು ಅದರ ದುಷ್ಪರಿಣಾಮಗಳನ್ನೇ ಚಿಂತಿಸುತ್ತಾ ಕೂರುತ್ತದೆ. ಆಕೆಯ ಮನಸ್ಸನ್ನು ಆಕರ್ಷಿಸುವ ನೆಮ್ಮದಿ ಕೊಡುವ ಅನೇಕ ಹವ್ಯಾಸ / ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಆಕೆಗೆ ಅವಕಾಶ ಪ್ರೋತ್ಸಾಹಗಳನ್ನು ನೀಡಬೇಕು. ಸಂಗೀತ ಕೇಳುವುದು-ಕಲಿಯುವುದು, ಪುಸ್ತಕಗಳನ್ನು ಓದುವುದು ಅಥವಾ ಏನನ್ನಾದರೂ ಬರೆಯುವುದು, ಚಿತ್ರಕಲೆ, ತೋಟಗಾರಿಕೆ, ಮಕ್ಕಳೊಂದಿಗೆ ಆಟವಾಡುವುದು, ಯಾವುದೇ ಕ್ರೀಡೆ (ಒಳಾಂಗಣ ಅಥವಾ ಹೊರಾಂಗಣ) ಪ್ರವಾಸ, ಸೃಜನಶೀಲ ಚಟುವಟಿಕೆ ಇತ್ಯಾದಿಗಳು ಈ ನಿಟ್ಟಿನಲ್ಲಿ ಬಹಳ ಸಹಕಾರಿ. ಆಕೆ ಉದ್ಯೋಗಿಯಾಗಿದ್ದರೆ ಆದಷ್ಟು ಬೇಗ ಉದ್ಯೋಗಕ್ಕೆ ವಾಪಸ್ಸಾಗಿ ಕೆಲಸ ಪ್ರಾರಂಭಿಸಬೇಕು.

### ಮನೆಯವರಿಗೆ ಆಸರೆ/ಮಾರ್ಗದರ್ಶನ

ರೇಪ್‌ಗೆ ಒಳಗಾದ ಸ್ತ್ರೀ ಎಷ್ಟು ನೋವು ಪಡುತ್ತಾಳೋ ಅಷ್ಟೇ ನೋವು ಆಕೆಯ ಮನೆಯವರಿಗೂ ಇರುತ್ತದೆ. ತಂದೆ-ತಾಯಿ, ಸೋದರ-ಸೋದರಿ,, ಗಂಡ-ಮಕ್ಕಳು ಮಾನಸಿಕ ಕ್ಷೋಭೆಗೆ ತುತ್ತಾಗಬಹುದು. ಅವರಿಗೂ ಆಸರೆ ಮಾರ್ಗದರ್ಶನ ಬೇಕಾಗುತ್ತದೆ. ಸಾಮಾಜಿಕ ಕಳಂಕವಾಗಬಲ್ಲ ರೇಪ್ ಘಟನೆಯನ್ನು ನಿಭಾಯಿಸಲು ಅವರಿಗೆ ನೆರವು ಬೇಕಾಗುತ್ತದೆ.

ನೆರೆಹೊರೆ ಸಹೋದ್ಯೋಗಿಗಳು-ಬಂಧುಗಳು-ಸ್ನೇಹಿತರು ರೇಪ್‌ಗೆ ಒಳಗಾದ ಸ್ತ್ರೀಯನ್ನು ಯಾವ ರೀತಿ ಕಾಣಬೇಕು. ಯಾವ ರೀತಿಯ ಸಮಾಧಾನ ಹೇಳಬೇಕು, ಆಘಾತದಿಂದ ಚೇತರಿಸಿಕೊಳ್ಳಲು ಯಾವ ರೀತಿ ನೆರವಾಗಬೇಕು ಎಂಬುದನ್ನು ನೆರೆಹೊರೆಯವರಿಗೆ, ಸಹೋದ್ಯೋಗಿ-ಸ್ನೇಹಿತರಿಗೆ ಮತ್ತು ಬಂಧುಗಳಿಗೆ ತಿಳಿಸಿ ಹೇಳಬೇಕಾಗುತ್ತದೆ. ಅನಗತ್ಯ ಕುತೂಹಲ, ಅತಿ ಅನುಕಂಪ, ಕರುಣೆಗಳು ತಿರಸ್ಕಾರ-ಅವಮಾನ-ಹೀನಾಯಗಳಷ್ಟೇ ಕೆಡಕು ಮಾಡಬಲ್ಲವು ಎಂಬುದನ್ನು ಅವರು ಅರಿಯಬೇಕಾಗುತ್ತದೆ.

---

10

ಹರಡಿ ಶಾಂತಿ ಕದಡಿ ಜನಸಾಮಾನ್ಯರು ನೆಮ್ಮದಿಯಿಂದ ಜೀವನ ಮಾಡಲು ಸಾಧ್ಯವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ಅಲ್ಲಿ ಶಾಂತಿ ಕಾಪಾಡಲು ಸಾಮರಸ್ಯ ಮೂಡಿಸಲು, ಕೋಮು ದಳ್ಳುರಿಯನ್ನು ಮಟ್ಟ ಹಾಕಲು ಸರಕಾರ ನೇಮಿಸಿದ್ದೆ ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿ ಎಂಬ ಯಂಗ್ ಅಂಡ್ ಎನರ್ಜಿಟಿಕ್ ಅಧಿಕಾರಿಯನ್ನು.

ಸರಕಾರ ತನ್ನ ಮೇಲೆ ನಂಬಿಕೆಯಿಟ್ಟು ವಹಿಸಿದ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸುತ್ತಾ ಮಂಗಳೂರು ನಗರ ಶಾಂತಿಯಿಂದ



ಇರುವಂತೆ ಮಾಡಿದ್ದಾರೆ. ಇಷ್ಟು ದಿನ ಇಲ್ಲಿ ಬಾಲ ಬಿಚ್ಚುತ್ತಾ ಆಟಾಟೋಪ ನಡೆಸುತ್ತಿದ್ದವರು ಬಾಲ ಮುದುಡಿ ಕೂತಿದ್ದಾರೆ.

ಮಂಗಳೂರಲ್ಲಿ ಡ್ರಗ್ಸ್ ಅನ್ನುವುದು ಯಥೇಚ್ಛವಾಗಿತ್ತು. ಅದರಿಂದ ಯುವಜನಾಂಗ ದಾರಿ ತಪ್ಪುತ್ತಿದ್ದಾರೆ. ಇದನ್ನು ಮನಗಂಡ ಡ್ರಗ್ಸ್ ಮಾಫಿಯಾಗೆ ಕಡಿವಾಣ ಹಾಕಿದ್ದಾರೆ. ಗಾಂಜಾ ಸಮಾಜಕ್ಕೆ ಮಾರಕವಾಗಿದ್ದು, ಅದರಿಂದ ಸಮಾಜದಲ್ಲಿ ಶಾಂತಿ ಕದಡಿ ಕೊಲೆ, ಸುಲಿಗೆ, ಅತ್ಯಾಚಾರ ಈ ರೀತಿಯ ಪ್ರಕರಣಗಳು ನಡೆದು ಬಿಡುತ್ತವೆ. ಅಷ್ಟೇ ಅಲ್ಲ ಯುವಸಮೂಹ ಗಾಂಜಾಕ್ಕೆ ದಾಸರಾಗಿ ತಮ್ಮ ಜೀವನವನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಸತ್ಯವನ್ನು ಅರಿತ ರೆಡ್ಡಿಯವರು ಗಾಂಜಾ ಮಾರಾಟದಿಂದ ಹೆಚ್ಚಿನ ಲಾಭ ನಿರೀಕ್ಷೆ ಇರುವುದರಿಂದ ಹಲವಾರು ಮಂದಿ ಈ ಕೃತ್ಯ ಪಾಲುದಾರರಾಗುತ್ತಿದ್ದಾರೆ. ಗಾಂಜಾ ಮಾರಾಟದ ವಿರುದ್ಧ ಪೊಲೀಸ್ ಇಲಾಖೆ ಹದ್ದಿನ ಕಣ್ಣು ಇಟ್ಟಿದ್ದು ಈ ರೀತಿ ಮಾರಾಟ ಮಾಡುವುದು ಕಂಡು ಬಂದರೆ ಹಿಡಿದು ಶಿಕ್ಷೆಗೆ ಒಳಪಡಿಸುತ್ತಿದ್ದಾರೆ. ಗಾಂಜಾ ಮಾರಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕಮೀಷನರ್ ಸುಧೀರ್‌ಕುಮಾರ್ ರೆಡ್ಡಿ ಕಾರ್ಯೋನ್ಮುಖರಾಗಿದ್ದಾರೆ.

ಮಂಗಳೂರು ಪೊಲೀಸ್ ಕಮೀಷನರ್ ಆಗುವುದು ಸುಮ್ಮನೆ ಅಲ್ಲ. ಅದಕ್ಕೆ ನಿಷ್ಠೆ ಬದ್ಧತೆ ಹಾಗೂ ಖಡಕ್‌ತನ ಇರಬೇಕು. ಇವೆಲ್ಲವು ಸುಧೀರ್‌ಕುಮಾರ್ ರೆಡ್ಡಿ ಅವರಲ್ಲಿ ಇದೆ. ಹೀಗಾಗಿ ಅವರು ಮಂಗಳೂರು ನಗರದಲ್ಲಿ ಸಾಕಷ್ಟು ಬದಲಾವಣೆ ತಂದಿದ್ದಾರೆ. ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿ ಅವರು ಯಾವುದೇ ಭ್ರಷ್ಟಾಚಾರ ಕಂಡು ಬಂದಲ್ಲಿ ಸಿಂಹದಂತೆ ಗರ್ಜಿಸುತ್ತಾರೆ. ತನ್ನ ಅಧಿಕಾರಾವಧಿಯಲ್ಲಿ ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ನೀಡದೆ ನ್ಯಾಯದ ಪರ ನಿಂತು ಸೇವೆ ಮಾಡುತ್ತಿರುವ ಏಕೈಕ ಐಪಿಎಸ್ ಅಧಿಕಾರಿ ಇವರು ಎಂದರೆ ತಪ್ಪಾಗಲ್ಲ.

ಕರಾವಳಿಯಲ್ಲಿ ಮತೀಯ ಹಿಂಸೆ, ಕೋಮುವಾದ ಮತಾಂತರ, ಸಂಘಟನೆಗಳ ಮತಾಂಧ ವ್ಯಕ್ತಿಗಳ ಆಟಾಟೋಪವನ್ನು ಕಂಪ್ಲೀಟ್ ಕಂಟ್ರೋಲ್‌ಗೆ ತಂದಿರುವ ಇವರು ಸಮಾಜಘಾತುಕರಿಗೆ ದುರುಳರಿಗೆ ಚಳಿಜ್ವರ ಬಿಡಿಸಿದ್ದಾರೆ. ಜನಸಾಮಾನ್ಯರ ಭದ್ರತೆಗಾಗಿ ಕೆಲಸ ಮಾಡುವ ಅಧಿಕಾರಿಯಾಗಿದ್ದಾರೆ.

2025ರ ಮಧ್ಯದಲ್ಲಿ ಮಂಗಳೂರು ನಗರದ ಪೊಲೀಸ್ ಕಮೀಷನರ್ ಆಗಿ ಸುಧೀರ್‌ಕುಮಾರ್ ರೆಡ್ಡಿ ಅವರನ್ನು ನೇಮಿಸಿತ್ತು. ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕೈಗೊಂಡಿದ್ದಾರೆ. ಕಾನೂನು ಪ್ರಕ್ರಿಯೆ ಅನುಸರಿಸಬೇಕು ಎಂದು ನಗರದ ಎಲ್ಲಾ ಪೊಲೀಸ್ ಠಾಣೆಗೆ ಎಚ್ಚರಿಕೆ ನೀಡಿದ್ದಾರೆ.

ಸಾಮಾಜಿಕ ಮಾಧ್ಯಮದ ಮೂಲಕ ತಪ್ಪು ಮಾಹಿತಿ ಹರಡುವಿಕೆ ವಿರುದ್ಧ ಕಟ್ಟುನಿಟ್ಟಾಗಿ ನಿಯಂತ್ರಿಸಲಾಗಿದೆ. ಜನರು ಸಾಮಾಜಿಕ ಮಾಧ್ಯಮದಲ್ಲಿ ಅನಾವಶ್ಯಕವಾಗಿ ಭೇದಭಾವ ಅಕ್ರಮ ಆರೋಪಗಳನ್ನು ಹಂಚಿಕೆ ಮಾಡದೆ ಸರಿಯಾದ ಪ್ರಾಧಿಕಾರಕ್ಕೆ ಸೂಚಿಸುವಂತೆ ನೋಡಿಕೊಂಡಿದ್ದಾರೆ. ಮಂಗಳೂರು ನಗರದಲ್ಲಿ ಕಳೆದ 9 ವರ್ಷಗಳಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಪರಮ ಕಿರಾತಕ ಹಳೆಯಂಗಡಿ ಕದಿಕೆ ಎಂಬಲ್ಲಿನ ಸಾಫ್ವಾನ್ ಎಂಬುವರ ಮೇಲೆ ಬರೋಬರಿ 31 ಘೋರ ಪ್ರಕರಣಗಳು ಇದ್ದ ಕ್ರಿಮಿನಲ್‌ನನ್ನು ಆಂಧ್ರಪ್ರದೇಶದಲ್ಲಿ ಪತ್ತೆಹಚ್ಚಿ ಜೈಲಿಗೆ ಕಳುಹಿಸಿದ ಕೀರ್ತಿ ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿ ಮತ್ತು ತಂಡಕ್ಕೆ ಸಲ್ಲುತ್ತದೆ. ಇದೇ ರೀತಿ ವಿವಿಧ ಅಪರಾಧಗಳಿಗೆ ಸಿಲುಕಿ ಬಿದ್ದಿರುವವರ ವಿರುದ್ಧ ಅವರು ಕಠಿಣ ಕ್ರಮಗಳನ್ನು ಕೈಗೊಂಡಿದ್ದಾರೆ.

ಸೂಕ್ಷ್ಮ ಜಿಲ್ಲೆ ಮಂಗಳೂರು ನಗರದ ಪೊಲೀಸ್ ಕಮೀಷನರ್ ಸಿ.ಎಚ್. ಸುಧೀರ್‌ಕುಮಾರ್ ರೆಡ್ಡಿ ಒಬ್ಬ ದಕ್ಷ ನಿರ್ಭಯ, ಪ್ರಾಮಾಣಿಕ, ಕರ್ತವ್ಯನಿಷ್ಠೆ ಎಂಬುದರ ಬಗ್ಗೆ ಅಪಾರ ಕಾಳಜಿ ಹೊಂದಿರುವ ರೆಡ್ಡಿ ಅವರಿಗೆ ತಮ್ಮೆಲ್ಲಾ ಕಾರ್ಯದಲ್ಲಿ ಯಶಸ್ಸು ಲಭಿಸಲಿ ಎಂದು 'ಪೊಲೀಸ್ ನ್ಯೂಸ್' ಹಾರೈಸುತ್ತದೆ.

-ವೀರಶೆಟ್ಟಿ ಕುಂಬಾರ

# ಲೋಕಾಯುಕ್ತ ಬಲೆಗೆ ಬಿದ್ದ ಭ್ರಷ್ಟ ಖಾಕಿ! ಬಿ ರಿಪೋರ್ಟ್‌ಗೆ ಲಂಚ ಬೇಡಿಕೆ ಆರೋಪ!!

ಚಿಕ್ಕಬಳ್ಳಾಪುರ

✍ ಎನ್. ಬ್ರಹ್ಮಚಾರಿ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಕರ್ನಾಟಕ ಲೋಕಾಯುಕ್ತ ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳು ಬಲೆಗೆ ಬಿದ್ದ ಘಟನೆ ಸಾರ್ವಜನಿಕ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಸಾಮಾನ್ಯವಾಗಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಪೊಲೀಸ್





ಇಲಾಖೆ ಕೆಲ ಅಧಿಕಾರಿಗಳ ಭ್ರಷ್ಟ ನಡೆಗಳಿಂದ ಜನರ ವಿಶ್ವಾಸ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುತ್ತಿದೆ ಎಂಬ ಆತಂಕವನ್ನು ಈ ಘಟನೆ ಮತ್ತೊಮ್ಮೆ ಹೊರಹಾಕಿದೆ. ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಬಿ ರಿಪೋರ್ಟ್ ಸಲ್ಲಿಸಲು ದೂರುದಾರರಿಂದ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆರೋಪದ ಮೇರೆಗೆ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯ ಉಪನಿರೀಕ್ಷಕ ಹಾಗೂ ಸಹಾಯಕ ಉಪನಿರೀಕ್ಷಕರನ್ನು ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್‌ಹ್ಯಾಂಡ್ ಆಗಿ ಬಂಧಿಸಿರುವುದು ಗಮನಾರ್ಹವಾಗಿದೆ. ಈ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಷ್ಟೇ ಅಲ್ಲದೆ ರಾಜ್ಯದ ಪೊಲೀಸ್ ಇಲಾಖೆಯಲ್ಲೂ ಚರ್ಚೆಗೆ ಕಾರಣವಾಗಿದ್ದು, ಭ್ರಷ್ಟಾಚಾರದ ವಿರುದ್ಧ ಸರ್ಕಾರ ಮತ್ತು ತನಿಖಾ ಸಂಸ್ಥೆಗಳು ತೆಗೆದುಕೊಳ್ಳುತ್ತಿರುವ ಕ್ರಮಗಳಿಗೆ ಇದು ಸ್ಪಷ್ಟ ಉದಾಹರಣೆಯಾಗಿದೆ.

ಬಂಧಿತರನ್ನು ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಉಪನಿರೀಕ್ಷಕ ಶರಣಪ್ಪ ಹಾಗೂ ಸಹಾಯಕ ಉಪನಿರೀಕ್ಷಕ ವೆಂಕಟೇಶಪ್ಪ ಎಂದು ಗುರುತಿಸಲಾಗಿದೆ. ಮೊಟ್ಲೂರು ಗ್ರಾಮದ ಬಳಿ ನಡೆದ ಜಮೀನು ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಿ ರಿಪೋರ್ಟ್ ಸಲ್ಲಿಸುವ ವಿಚಾರವಾಗಿ ದೂರುದಾರನ ಮೇಲೆ ಒತ್ತಡ ಹೇರಿದ ಆರೋಪ ಇವರ ವಿರುದ್ಧ ಕೇಳಿಬಂದಿದೆ. ಪ್ರಕರಣವನ್ನು ಮುಚ್ಚಿಹಾಕುವ ಉದ್ದೇಶದಿಂದ ಬಿ ರಿಪೋರ್ಟ್ ಸಲ್ಲಿಸಲು ಒಂದು ಲಕ್ಷ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರೆಂದು ದೂರುದಾರ ಆರೋಪಿಸಿದ್ದಾರೆ. ಈ ಬೇಡಿಕೆಯಿಂದ ಬೇಸತ್ತ ದೂರುದಾರರು ಲೋಕಾಯುಕ್ತ ಪೊಲೀಸರನ್ನು ಸಂಪರ್ಕಿಸಿ ಸಂಪೂರ್ಣ ಮಾಹಿತಿ ನೀಡಿದ್ದಾರೆ. ದೂರುದಾರನ ದೂರಿನ ಆಧಾರದ ಮೇಲೆ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆಗೆ ಮುಂದಾಗಿ ಸೂಕ್ತ ಯೋಜನೆ ರೂಪಿಸಿದರು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಆರೋಪಿಗಳ ಚಲನವಲನಗಳ ಮೇಲೆ ಗಮನಹರಿಸಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ ನಂತರ ಕಾರ್ಯಾಚರಣೆ ನಡೆಸಲು ತೀರ್ಮಾನಿಸಲಾಯಿತು.

ದೂರುದಾರರಿಂದ ಹಣ ಸ್ವೀಕರಿಸುವ ಕ್ಷಣದಲ್ಲೇ ಆರೋಪಿಗಳನ್ನು ಬಂಧಿಸಲು ಲೋಕಾಯುಕ್ತ ತಂಡ ಸೂಕ್ತ ಸಮಯಕ್ಕಾಗಿ ಕಾಯುತ್ತಿತ್ತು. ಅಂತಿಮವಾಗಿ ಮಂಗಳವಾರ ಸಂಜೆ ಚಿಕ್ಕಬಳ್ಳಾಪುರ ನಗರದ ಕನ್ನಡ ಭವನದ ಬಳಿ ದೂರುದಾರರಿಂದ 70 ಸಾವಿರ ರೂಪಾಯಿ ಹಣವನ್ನು ಸ್ವೀಕರಿಸುವ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು. ಹಣ ಸ್ವೀಕರಿಸುವ ಕ್ಷಣದಲ್ಲೇ ಎಎಸ್‌ಐ ವೆಂಕಟೇಶಪ್ಪರನ್ನು ಲೋಕಾಯುಕ್ತ ಅಧಿಕಾರಿಗಳು ಖೆಡ್ಡಾಗೆ ಬೀಳಿಸಿದರು. ಈ ವೇಳೆ ಪಿಎಸ್‌ಐ ಶರಣಪ್ಪ ಕೂಡ ಪ್ರಕರಣದಲ್ಲಿ ಭಾಗಿಯಾಗಿರುವುದು ಬಹಿರಂಗವಾಯಿತು.

ಲೋಕಾಯುಕ್ತ ಎಸ್‌ಪಿ ಆ್ಯಂಟೋನಿ ಜಾನ್ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಹಲವಾರು ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು. ಪೂರ್ವಯೋಜಿತ ಕ್ರಮದಂತೆ ದಾಳಿ ನಡೆಸಿದ ಲೋಕಾಯುಕ್ತ ತಂಡ ಆರೋಪಿಗಳನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಿ ಹೆಚ್ಚಿನ ತನಿಖೆಗೆ ಒಳಪಡಿಸಿತು. ಈ ಕಾರ್ಯಾಚರಣೆ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ಸಂಸ್ಥೆಯ ಕಠಿಣ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ.



ಘಟನೆ ಬಹಿರಂಗವಾಗುತ್ತಿದ್ದಂತೆಯೇ ಜಿಲ್ಲಾ ಪೊಲೀಸ್ ಇಲಾಖೆಯು ಕೂಡ ತಕ್ಷಣ ಕ್ರಮ ಕೈಗೊಂಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಲಂಚ ಸ್ವೀಕರಿಸಿದ ಆರೋಪ ಎದುರಿಸುತ್ತಿರುವ ಪಿಎಸ್‌ಐ ಶರಣಪ್ಪ ಹಾಗೂ ಎಎಸ್‌ಐ ವೆಂಕಟೇಶಪ್ಪ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಇಲಾಖೆಯ ಮಟ್ಟದಲ್ಲಿಯೂ ಶಿಸ್ತು ಕ್ರಮ ಕೈಗೊಳ್ಳಲಾಗಿದ್ದು, ಪೊಲೀಸ್ ಇಲಾಖೆಯ ಗೌರವಕ್ಕೆ ಧಕ್ಕೆ ಉಂಟು ಮಾಡುವಂತಹ ಘಟನೆಗಳನ್ನು ಸಹಿಸಲಾಗುವುದಿಲ್ಲ ಎಂಬ ಸಂದೇಶವನ್ನು ಅಧಿಕಾರಿಗಳು ನೀಡಿದ್ದಾರೆ. ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಳ್ಳುವುದು ಪೊಲೀಸ್ ಇಲಾಖೆಯ ಪ್ರಮುಖ ಹೊಣೆಗಾರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂಬುದನ್ನು ಈ ಘಟನೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಇನ್ನೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ 2/26 ಕ್ರಮಸಂಖ್ಯೆಯಂತೆ ಎಫ್‌ಐಆರ್ ದಾಖಲಾಗಿದ್ದು ತನಿಖೆ ಮುಂದುವರಿಯುತ್ತಿದೆ. ಲೋಕಾಯುಕ್ತ ಅಧಿಕಾರಿಗಳು ದೂರುದಾರರಿಂದ ಪಡೆದ ಮಾಹಿತಿಯ ಆಧಾರದ ಮೇಲೆ ಹಲವು ದಿನಗಳಿಂದ ಆರೋಪಿಗಳ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿದ್ದರು ಎಂದು ತಿಳಿದುಬಂದಿದೆ. ಅಂತಿಮವಾಗಿ ಹಣ ಸ್ವೀಕರಿಸುವ ಸಂದರ್ಭದಲ್ಲಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಲೋಕಾಯುಕ್ತ ತಂಡ ಯಶಸ್ವಿಯಾಗಿದೆ. ಬಂಧಿತ ಅಧಿಕಾರಿಗಳನ್ನು ಬಳಿಕ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲಾಗಿದ್ದು ವೈದ್ಯಕೀಯ ತಪಾಸಣೆ ನಡೆಸಲಾಯಿತು. ನಂತರ ಅವರನ್ನು ಚಿಕ್ಕಬಳ್ಳಾಪುರದ ಜಿಲ್ಲಾ 3ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಪ್ರಕರಣವನ್ನು ಪರಿಗಣಿಸಿದ


ಶರಣಪ್ಪ


ವೆಂಕಟೇಶಪ್ಪ

ನ್ಯಾಯಾಲಯ ಇಬ್ಬರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿ ಆದೇಶ ನೀಡಿದೆ.

ಈ ಘಟನೆ ರಾಜ್ಯದಲ್ಲಿ ಭ್ರಷ್ಟಾಚಾರದ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಮತ್ತೊಂದು ಪ್ರಮುಖ ಉದಾಹರಣೆಯಾಗಿದೆ. ಕಾನೂನು ಪಾಲನೆ ಮಾಡುವ ಜವಾಬ್ದಾರಿ ಹೊಂದಿರುವ ಪೊಲೀಸ್ ಅಧಿಕಾರಿಗಳೇ ಲಂಚದ ಆರೋಪದಲ್ಲಿ ಸಿಲುಕಿರುವುದು ಸಮಾಜದಲ್ಲಿ ಆತಂಕ ಮೂಡಿಸುವ ಸಂಗತಿಯಾಗಿದೆ. ಆದರೆ ಇಂತಹ ಘಟನೆಗಳು ಬಹಿರಂಗವಾಗುತ್ತಿರುವುದು ಹಾಗೂ ತನಿಖಾ ಸಂಸ್ಥೆಗಳು ತಕ್ಷಣ ಕ್ರಮ ಕೈಗೊಳ್ಳುತ್ತಿರುವುದು ಜನರಲ್ಲಿ ನಂಬಿಕೆಯನ್ನು ಮೂಡಿಸುವ ಸಂಗತಿಯಾಗಿದೆ. ಭ್ರಷ್ಟಾಚಾರವನ್ನು ತಡೆಯಲು ಕೇವಲ ಕಾನೂನು ಕ್ರಮಗಳಷ್ಟೇ ಸಾಕಾಗುವುದಿಲ್ಲ, ಜೊತೆಗೆ ಆಡಳಿತ ವ್ಯವಸ್ಥೆಯಲ್ಲಿರುವ ಪ್ರತಿಯೊಬ್ಬ ಅಧಿಕಾರಿಯೂ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವ ಅಗತ್ಯವಿದೆ. ಸಾರ್ವಜನಿಕ ಸೇವೆಗಾಗಿ ನೇಮಕಗೊಂಡ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ನ್ಯಾಯ ನೀಡಬೇಕಾದರೆ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಅತ್ಯಗತ್ಯವಾಗಿವೆ.

ಲೋಕಾಯುಕ್ತ ಪೊಲೀಸರು ನಡೆಸಿದ ಈ ಕಾರ್ಯಾಚರಣೆ ಭ್ರಷ್ಟಾಚಾರದಲ್ಲಿ ತೊಡಗುವ ಅಧಿಕಾರಿಗಳಿಗೆ ಎಚ್ಚರಿಕೆಯ ಘಂಟೆಯಾಗಿದೆ. ಸಾರ್ವಜನಿಕರಿಂದ ಲಂಚಕ್ಕೆ ಬೇಡಿಕೆ ಇಡುವುದು ಅಥವಾ ಅಧಿಕಾರದ ದುರುಪಯೋಗ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಸಂದೇಶವನ್ನು ಈ ಘಟನೆ ನೀಡಿದೆ. ರಾಜ್ಯದಲ್ಲಿ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸರ್ಕಾರ, ತನಿಖಾ ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ. ಯಾವುದೇ ರೀತಿಯ ಲಂಚ ಬೇಡಿಕೆ ಎದುರಾದಲ್ಲಿ ಜನರು ಧೈರ್ಯವಾಗಿ ಲೋಕಾಯುಕ್ತ ಅಥವಾ ಸಂಬಂಧಿತ ಅಧಿಕಾರಿಗಳಿಗೆ ದೂರು ನೀಡಬೇಕು ಎಂಬ ಸಂದೇಶವನ್ನು ಈ ಘಟನೆ ಸಮಾಜಕ್ಕೆ ನೀಡಿದೆ. ಪೊಲೀಸ್ ಇಲಾಖೆಯ ಗೌರವವನ್ನು ಉಳಿಸಿಕೊಳ್ಳಲು ಹಾಗೂ ಜನರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸಲು ಇಂತಹ ಘಟನೆಗಳಿಂದ ಪಾಠ ಕಲಿದು ಭ್ರಷ್ಟಾಚಾರ ಮುಕ್ತ ಆಡಳಿತ ವ್ಯವಸ್ಥೆಯನ್ನು ನಿರ್ಮಿಸಲು ಎಲ್ಲಾ ವಲಯಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ.

# ಫಲಿಸುತ್ತಾ ಕೈಕಮಾಂಡ್‌ನ ಕಾದು ನೋಡುವ ತಂತ್ರ?

5 ☞

ಸಿಎಂ ಆಗುತ್ತೇನೆ ಎಂಬ ಮಾತುಗಳನ್ನಾಡುವ ಮೂಲಕ ಸಿಎಂ ಸ್ಥಾನದ ಆಕಾಂಕ್ಷಿ ಎನ್ನುವುದನ್ನು ಬಹಿರಂಗಪಡಿಸಿದ್ದಾರೆ. ಸಚಿವ ಸ್ಥಾನಕ್ಕೆ ಎಷ್ಟು ಪೈಪೋಟಿ ಇದೆಯೋ ಅದೇ ರೀತಿ ಸಿಎಂ ಸ್ಥಾನಕ್ಕೂ ಕಾಂಗ್ರೆಸ್ ನಲ್ಲಿ ಒಳಗೊಳಗೆ ಪೈಪೋಟಿ ನಡೆಯುತ್ತಿದೆ..

ರಾಜ್ಯದ ಮಟ್ಟಿಗೆ ಕಾಂಗ್ರೆಸ್‌ನ ಇತಿಹಾಸವನ್ನು ಗಮನಿಸಿದರೆ ಕೆಪಿಸಿಸಿ ಅಧ್ಯಕ್ಷರಾದವರು ಸಿಎಂ ಸ್ಥಾನವನ್ನು ಅಲಂಕರಿಸುವುದು ನಡೆದುಬಂದಿದೆ. ಅದು 2013ರಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್ ಅವರ ಸೋಲಿನ ಕಾರಣದಿಂದಾಗಿ ಸಂಪ್ರದಾಯ ಮುರಿದು ಹೋಗಿ ಸಿದ್ದರಾಮಯ್ಯ ಅವರು ಸಿಎಂ ಆದರು. ಕಳೆದ 2023ರ ಚುನಾವಣೆಯಲ್ಲಿ ಇದೇ ವಿಚಾರ ಮುನ್ನೆಲೆಗೆ ಬಂದಿತ್ತು.



ಗೊಂದಲವಾಗುತ್ತದೆ ಎಂಬ ಕಾರಣಕ್ಕೆ ಸಾಮೂಹಿಕ ನಾಯಕತ್ವದಡಿ ಚುನಾವಣೆಗೆ ಹೋಗುವ ತಂತ್ರ ರೂಪಿಸಲಾಯಿತು.

ಬಹುತೇಕರು ಡಿ.ಕೆ.ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗುತ್ತಾರೆಂದು ನಂಬಿದ್ದರು. ಆದರೆ ಹಲವು ರೀತಿಯ ಸರ್ಕಸ್ ನಡೆದು ಸಿದ್ದರಾಮಯ್ಯರವರನ್ನು ಸಿಎಂ ಎಂದು ಘೋಷಣೆ ಮಾಡಲಾಯಿತು. ಈ ಸರ್ಕಸ್ ನಡುವೆ ಅಧಿಕಾರದ ಹಸ್ತಾಂತರದ ಒಪ್ಪಂದವೂ ನಡೆದಿದೆ ಎಂಬುದು ಚರ್ಚೆಯಲ್ಲಿರುವ ವಿಚಾರ. ಒಂದು ವೇಳೆ ಅವತ್ತು ಒಪ್ಪಂದ ಆಗಿತ್ತು ಎನ್ನುವುದೇ ಆಗಿದ್ದರೆ ಸಿದ್ದರಾಮಯ್ಯ ಅವರು ಇಷ್ಟರಲ್ಲೇ ಅಧಿಕಾರ ಹಸ್ತಾಂತರ ಮಾಡಬೇಕಾಗಿತ್ತು ಹೈಕಮಾಂಡ್ ಕೂಡ ಸ್ಪಷ್ಟ ಆದೇಶವನ್ನು ನೀಡಬೇಕಾಗಿತ್ತು.. ಆದರೆ ಇದರೆಡು ಆಗದ ಕಾರಣ ಗೊಂದಲಗಳು ಮುಂದುವರೆದಿವೆ ಹೈಕಮಾಂಡ್‌ನ ಕಾದು ನೋಡುವ ತಂತ್ರ ಮುಂದೆ ಯಾವ ಬೆಳವಣಿಗೆಗೆ ಕಾರಣವಾಗುತ್ತದೆ ಎನ್ನುವುದನ್ನು ಕಾದು ನೋಡಬೇಕಿದೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 1.3.2026

# ಕನ್ನಡದವರ ನಿರ್ಲಕ್ಷ್ಯದ ನಡುವೆ ಸೂಪರ್ ಹಿಟ್ ಮಾಡಿದರಲ್ಲ ತಮಿಳರು!





ವಿಜಯ ರಾಘವೇಂದ್ರ ಅಭಿನಯದ 'ದಿ ಸೆಕೆಂಡ್ ಕೇಸ್ ಆಫ್ ಸೀತಾರಾಮ್' ಅದ್ಬುತ ಚಿತ್ರಕತೆಯಿಂದ ಗಮನ ಸೆಳೆಯುತ್ತಿದೆ. ಬಹುಷಃ 4ನೇ ವಾರದಲ್ಲಿ ಪ್ರದರ್ಶನ ಕಾಣುತ್ತಿದೆ. ಬೇಜಾರಿನ ಸಂಗತಿ ಏನೆಂದರೆ, ಇಲ್ಲಿ ನಮ್ಮ ಪ್ರೇಕ್ಷಕರು ಸರಿಯಾಗಿ ನೋಡ್ತಾ ಇಲ್ಲ. ಶೋ ಗಳ ಸಂಖ್ಯೆ ಗಣನೀಯವಾಗಿ ಇಳಿಕೆ ಆಗಿದೆ. ಅದರೆ ನೆರೆಯ ತಮಿಳುನಾಡಿನಲ್ಲಿ ಸಿನಿಮಾ ಸೂಪರ್ ಹಿಟ್ ಆಗಿ ಶೋಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ! ಇದು ಸಂತೋಷ ಪಡಬೇಕಾದ ಸುದ್ದಿಯೋ ಅಥವಾ ಬೇಸರ ಪಟ್ಟುಕೊಳ್ಳಬೇಕಾದ ಸುದ್ದಿಯೋ ಅರ್ಥವಾಗದೆ ಗೊಂದಲದಲ್ಲಿದ್ದೇನೆ. ಕನ್ನಡ ಪ್ರೇಕ್ಷಕರ ನಿರ್ಲಕ್ಷ್ಯ, ತಮಿಳು ಪ್ರೇಕ್ಷಕರ ಅಪ್ಪುಗೆ...ಎಂಥ ವೈರುದ್ಯ ನೋಡ್ರಿ.

ಕನ್ನಡದ ದೊಡ್ಡ ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾಗಳು ಸುದೀಪ್, ಶಿವಣ್ಣ, ಯಶ್ ಅಂಥಹ ದೊಡ್ಡ ನಟರ ಸಿನಿಮಾಗಳಷ್ಟೆ ರಾಜ್ಯದ ಗಡಿ ದಾಟಿ ಹೊರ ರಾಜ್ಯಗಳಲ್ಲಿ ಪ್ರದರ್ಶನ ಕಾಣುತ್ತವೆ. ಮತ್ತು ಆ ಸಿನಿಮಾ ಚೆನ್ನಾಗಿದ್ದರಷ್ಟೆ ಪರಭಾಷೆ ಪ್ರೇಕ್ಷಕರು ಮೆಚ್ಚಿಕೊಳ್ಳುತ್ತಾರೆ. ಇಲ್ಲ ದಿದ್ರೆ ಮೂಸಿಯು ನೋಡಲ್ಲ. ಅಪ್ಪು ಅವರನ್ನು ಬಿಟ್ರೆ ಕನ್ನಡ ಚಿತ್ರರಂಗದ ಒನ್ ಅಂಡ್ ಓನ್ಲಿ ನೋನ್ ಕಾಂಟ್ರವರ್ಸಿಯಲ್ ಹೀರೋ ಚಿನ್ನಾರಿಮುತ್ತ ವಿಜಯ್ ರಾಘವೇಂದ್ರ. ಅವರು ನಟಿಸಿರುವ 'ಸೆಕೆಂಡ್ ಕೇಸ್ ಆಫ್ ಸೀತಾರಾಮ್' ಸಿನಿಮಾ ವಾರದ ಹಿಂದಷ್ಟೆ ಬಿಡುಗಡೆ ಆಗಿದ್ದು ಸಿನಿಮಾದ ಬಗ್ಗೆ ಬಹಳ ಒಳ್ಳೆಯ ವಿಮರ್ಶೆಗಳು ವ್ಯಕ್ತವಾಗಿವೆ. ಸಿನಿಮಾ ಪ್ರೇಮಿಗಳು, ಸಿನಿಮಾ ನೋಡಿದವರು ಸಿನಿಮಾವನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಆದರೆ ಈ ಹಿಂದಿನ ಕನ್ನಡದ ಕೆಲ ಒಳ್ಳೆಯ ಸಿನಿಮಾಗಳಿಗೆ ಆದ ಗತಿಯೇ ಈ ಸಿನಿಮಾಕ್ಕೂ ಆಗಿದೆ. ಸಿನಿಮಾವನ್ನು ಸುಮಾರು ಚಿತ್ರಮಂದಿರಗಳಿಂದ ಎತ್ತಂಗಡಿ ಮಾಡಲಾಗಿದೆ. ಮಾಲ್‌ಗಳಲ್ಲಿ ಮಾತ್ರ ಒಂದೋ ಎರಡೋ ಶೋ ಕೊಡಲಾಗಿದೆ. ಆದರೆ ನೆರೆಯ ತಮಿಳುನಾಡಿನಲ್ಲಿ ಸಿನಿಮಾಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

'ಸೆಕೆಂಡ್ ಕೇಸ್ ಆಫ್ ಸೀತಾರಾಮ್' ಕುರಿತು ಬುಕ್ ಮೈಶೋ ಮಾಹಿತಿಯಂತೆ ಚೆನ್ನೈನಲ್ಲಿ ಮಾರ್ಚ್ 03ರಿಂದ ಸಿನಿಮಾಕ್ಕೆ ನಾಲ್ಕು ಚಿತ್ರಮಂದಿರಗಳಲ್ಲಿ ಐದು ಶೋಗಳು ನಿಗದಿ ಆಗಿವೆ. ಐದು ವರ್ಷಗಳ ಹಿಂದೆ ಬಿಡುಗಡೆ ಆಗಿದ್ದ 'ಸೀತಾರಾಮ್ ಬಿನೋಯ್' ಸಿನಿಮಾದ ಎರಡನೇ ಭಾಗ ಇದಾಗಿದೆ. ಸಿನಿಮಾ ನೋಡಿದವರು ಮೊದಲ ಭಾಗಕ್ಕಿಂತಲೂ ಎರಡನೇ ಭಾಗ ಚೆನ್ನಾಗಿ ಮೂಡಿ ಬಂದಿದೆ ಎಂಬ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕತೆ ಆಗಿದ್ದು, ಹೆಚ್ಚುವರಿ ದೃಶ್ಯಗಳಿಲ್ಲದೆ ಬಹಳ ಗಟ್ಟಿಯಾದ ಚಿತ್ರಕತೆಯನ್ನು ಸಿನಿಮಾ ಹೊಂದಿದೆ. ಈ ಚಿತ್ರದ ನಿರ್ಮಾಪಕ ಪವನ್ ಒಡೆಯರ್. ಅವರ ಶಿಷ್ಯ ದೇವಿಪ್ರಸಾದ್ ಶೆಟ್ಟಿ ಈ ಸಿನಿಮಾವನ್ನ ನಿರ್ದೇಶನ ಮಾಡಿದ್ದಾರೆ.

# ಧೋಂಡಾಳೆ ಕನಸನ್ನು ನನಸು ಮಾಡಿದ 'ದಿ ರೈಸ್ ಆಫ್ ಅಶೋಕ'




'ದಿ ರೈಸ್ ಆಫ್ ಅಶೋಕ' ನಟ ಸತೀಶ್ ನೀನಾಸಂ ಹಾಗೂ ನಿರ್ದೇಶಕ ವಿನೋದ್ ಧೋಂಡಾಳೆ ಅವರ ಕನಸಿನ ಕೂಸು. ದುರಂತ ಅಂದ್ರೆ, ಎರಡು ವರ್ಷಗಳ ಹಿಂದೆ ನಿರ್ದೇಶಕ ವಿನೋದ್ ಧೋಂಡಾಳೆ ಆತ್ಮಹತ್ಯೆಗೆ ಶರಣಾದರು. ಧೋಂಡಾಳೆ ಸಾವನ್ನಪ್ಪಿದ ಮೇಲೆ ಅಶೋಕನ ಚಾಪ್ಟರ್ ಕ್ಲೋಸ್ ಆಗುತ್ತೆ ಎಂದು ಭಾವಿಸಿದವರೇ ಹೆಚ್ಚು. ಆದರೆ, 'ದಿ ರೈಸ್ ಆಫ್ ಅಶೋಕ' ಸಿನಿಮಾ ಅಂದುಕೊಂಡಿದ್ದಕ್ಕಿಂತ ಗಟ್ಟಿಯಾಗಿ ಎದ್ದು ನಿಂತಿದೆ. ಅಶೋಕನಾಗಿ ನೀನಾಸಂ ಸತೀಶ್ ಆರ್ಭಟಿಸಿದ್ದಾರೆ.

1970ರ ದಶಕದ ಹಿನ್ನಲೆಯಲ್ಲಿ ಮೂಡಿಬಂದಿರುವ ಸಿನಿಮಾ 'ದಿ ರೈಸ್ ಆಫ್ ಅಶೋಕ'. ಅಂದು ಶೋಷಣೆಗೆ ಒಳಗಾದ, ಮೇಲ್ಜಾತಿ ದೌರ್ಜನ್ಯ ಮತ್ತು ಅಟ್ಟಹಾಸಕ್ಕೊಳಪಟ್ಟ ತಳ ಸಮುದಾಯ ಮತ್ತು ಸವಿತಾ ಸಮಾಜದವರ ಹೋರಾಟದ ಕಥೆಯೇ 'ದಿ ರೈಸ್ ಆಫ್ ಅಶೋಕ'. ದಬ್ಬಾಳಿಕೆ, ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡುವ ಕಥೆಯನ್ನ ಧಮ್‌ಧಾರ್ ಆಗಿ ತೆರೆಗೆ ತರಲಾಗಿದೆ.

ಅದು ಅವರತ್ತಿ ಎಂಬ ಊರು. ಅಲ್ಲೊಂದು ಮುಡಿಕಟ್ಟೆ. ಅಲ್ಲಿ ಮುಡಿ ತೆಗೆಯುವ ಕೆಲಸ ಮಾಡುವ ಗಂಗರಾಜುಗೆ ಇರೋದು ಒಂದೇ ಆಸೆ. ಅದು ಮಗ ಅಶೋಕ ಚೆನ್ನಾಗಿ ಓದಿ ಸರ್ಕಾರಿ ಕೆಲಸ ಗಿಟ್ಟಿಸಿಕೊಂಡು ಆಫೀಸರ್ ಆಗಬೇಕು ಅಂತ. ಅಪ್ಪನ ಆಸೆಯಂತೆ ಅಶೋಕನಿಗೆ ಸರ್ಕಾರಿ ಕೆಲಸ ಸಿಗುತ್ತದೆ. ಅಪಾಯಿಂಟ್‌ಮೆಂಟ್ ಲೆಟರ್ ಕೈ ಸೇರುತ್ತದೆ. ಇನ್ನೇನು ಕೆಲಸಕ್ಕೆ ಹೋಗಬೇಕು ಎನ್ನುವಾಗ ನಡೆಯುವುದೇ ಬೇರೆ! ಸರ್ಕಾರಿ ಕೆಲಸ ಬಿಟ್ಟು, ಸಂಘರ್ಷದ ಹಾದಿ ಹಿಡಿಯುತ್ತಾನೆ ಅಶೋಕ. ತಾನು, ತನ್ನದು ಅಂತ ಯೋಚಿಸದೆ ತಮ್ಮ ಸಮುದಾಯದವರ ಒಳಿತಿಗಾಗಿ ಹೊಸ ಸಾಮ್ರಾಜ್ಯವನ್ನ ಅಶೋಕ ಕಟ್ಟುವ ಕಥೆಯೇ 'ದಿ ರೈಸ್ ಆಫ್ ಅಶೋಕ'.

ನೀನಾಸಂ ಕೂಸು ಸತೀಶ್ ಅಶೋಕನಾಗಿ ಮಿಂಚಿದ್ದಾರೆ. ಸವಿತಾ ಸಮಾಜದ ಬಡ ಕುಟುಂಬದಲ್ಲಿ ಬೆಳೆದು, ಚೆನ್ನಾಗಿ ಓದಿ ಆಫೀಸರ್ ಆಗಬೇಕು ಎಂದು ಕನಸು ಕಾಣುವ ಹುಡುಗನಾಗಿ, ಕಣ್ಣೆದುರಿಗೆ ಅನ್ಯಾಯ ನಡೆಯುತ್ತಿರುವಾಗ ಕುದಿಯುವ ಬಿಸಿರಕ್ತದ ಯುವಕನಾಗಿ, ಆಕ್ಷನ್ ಸೀಕ್ವೆನ್ಸ್‌ಗಳಲ್ಲಿ ಹಾಗೂ ಸ್ಟಂಟ್ ಸನ್ನಿವೇಶಗಳಲ್ಲಿ ಸತೀಶ್ ಅಬ್ಬರಿಸಿದ್ದಾರೆ. ಇನ್ನು ಹೂ ಕಟ್ಟುವ ಅಂಬಿಕಾ ಆಗಿ ಸಪ್ತಮಿ ಗೌಡ ಬಲೇ ಇಷ್ಟವಾಗುತ್ತಾರೆ. ಹಿರಿಯ ವ್ಯಕ್ತಿ ಗಂಗರಾಜು ಆಗಿ ಬಿ. ಸುರೇಶ ಅವರ ನಟನೆ ಹೆಚ್ಚು ಆಪ್ತವೆನಿಸುತ್ತದೆ. ವಿಲನ್ ಕುಟ್ಟಿ ಬಾಬ್ಜಿ ಆಗಿ ಸಂಪತ್ ಅದೆಷ್ಟು ಸಿಟ್ಟು ತರಿಸುತ್ತಾರೆ ಅಂದ್ರೆ, ಅವರ ಅಭಿನಯ ಅಷ್ಟು ಚೆನ್ನಾಗಿದೆ ಅಂತಲೇ ಎಂದರ್ಥ!

ಇನ್ನೂ ಚಂದ್ರಣ್ಣನಾಗಿ ಕಾಣಿಸಿಕೊಳ್ಳುವ ಗೋಪಾಲಕೃಷ್ಣ ದೇಶಪಾಂಡೆಗೆ ಕಡಿಮೆ ಸ್ಕ್ರೀನ್ ಸ್ಪೇಸ್ ಸಿಕ್ಕಿದ್ದರೂ ನೆನಪಿನಲ್ಲಿ ಉಳಿಯುವ ಅಭಿನಯ ಮೆರೆದಿದ್ದಾರೆ. ಜಿಲ್ಲಾಧಿಕಾರಿಯಾಗಿ ರವಿಶಂಕರ್ ಹೀಗೆ ಬಂದು, ಹಾಗೆ ಹೋದರೂ ಪ್ರೇಕ್ಷಕರ ಮನಸ್ಸು ಗೆಲ್ಲುತ್ತಾರೆ. ಜಗ್ಗಪ್ಪ, ಡ್ರ್ಯಾಗನ್ ಮಂಜು, ಯಶ್ ಶೆಟ್ಟಿ ಅಭಿನಯ ಉತ್ತಮವಾಗಿ ಮೂಡಿಬಂದಿದೆ. ಇನ್ನೊಂದು ಮುಖ್ಯ ಸಂಗತಿ ಏನೆಂದರೆ, 'ದಿ ರೈಸ್ ಆಫ್ ಅಶೋಕ' ಸಿನಿಮಾದಲ್ಲಿ ಹೆಚ್ಚು ಗಮನ ಸೆಳೆಯುವುದು ಕ್ಯಾಮರಾ ವರ್ಕ್. ಲವಿತ್ ಅವರ ಸಿನಿಮ್ಯಾಟೋಗ್ರಫಿ ಬಹಳ ಚೆನ್ನಾಗಿದೆ. ಸಾಂಗ್ ಹಾಗೂ ಆಕ್ಷನ್ ಸೀಕ್ವೆನ್ಸ್ ವೇಳೆ ಶಾಟ್ ಕಂಪೋಸಿಂಗ್ ಉತ್ತಮವಾಗಿ ಮೂಡಿಬಂದಿದೆ. ಹಾಗೇ, ಕಲಾ ನಿರ್ದೇಶಕರ ಕೈ ಚಳಕವೂ ಗಮನಾರ್ಹ. ಸಂಗೀತ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ ಅವರ ಹಾಡುಗಳು ಗುನುಗುವಂತಿವೆ.

ವಿನೋದ್ ಧೋಂಡಾಳೆ ಕನಸಿನ ಪ್ರಾಜೆಕ್ಟ್ 'ದಿ ರೈಸ್ ಆಫ್ ಅಶೋಕ'. ಅವರು ಸತ್ತರೂ, ಅವರ ಕನಸು ಈ ಚಿತ್ರದಲ್ಲಿ ಜೀವಂತವಾಗಿದೆ. ಅಷ್ಟರಮಟ್ಟಿಗೆ ಚಿತ್ರತಂಡ ಶ್ರಮ ವಹಿಸಿದ ಸತೀಶ್ ಅವರೇ ಹೆಚ್ಚುವರಿ ನಿರ್ದೇಶನದ ಹೊಣೆ ಹೊತ್ತು ಧೋಂಡಾಳೆ ಕನಸನ್ನು ನನಸು ಮಾಡಿದ್ದಾರೆ!!

# ಮುತ್ತಪ್ಪಣ್ಣನ ಛಾಯೆ ಇದ್ದೂ ಸೊರಗಿದ 'ವೀರ ಕಂಬಳ'!!



ಸಿನಿಮಾದ ಶೀರ್ಷಿಕೆಯೇ ಹೇಳುವಂತೆ ಇದು ಕರಾವಳಿಯ ಪ್ರತಿಷ್ಟ ಆಚರಣೆ ವೀರ ಕಂಬಳದ ಸುತ್ತ ಸುತ್ತುವ ಕಥೆ. ತುಳುನಾಡಿಗೂ ದುಬೈಗೂ ಎಲ್ಲಿಲ್ಲದ ನಂಟು. ಬಹುತೇಕ ಕೊಲ್ಲಿ ರಾಷ್ಟ್ರಗಳಲ್ಲಿ ತುಳುನಾಡು, ಕೇರಳದವರೇ ಹೆಚ್ಚಾಗಿ ಕಾಣಸಿಗುತ್ತಾರೆ. ತುಳುನಾಡಿನಲ್ಲಿ ನಡೆಯುವ ಕಂಬಳವನ್ನು ನಿಯಂತ್ರಿಸುವುದು ದುಬೈನಲ್ಲಿ ಕುಳಿತ ಮಾಯಾಜಾಲವೆಂಬ ಕಾಲ್ಪನಿಕ ಕಥೆಯೊಂದಿಗೆ ದುಬೈನಿಂದಲೇ ಚಿತ್ರ ಪ್ರಾರಂಭವಾಗುತ್ತದೆ! ಕಂಬಳವನ್ನು ಬೆಟ್ಟಿಂಗ್ ಜಾಲದವರ ನಿಯಂತ್ರಣದಿಂದ ಹೊರ ತರಬೇಕೆಂದು ಕಥಾನಾಯಕ ಸತ್ಯ ದುಬೈನಲ್ಲಿ ಕುಳಿತೇ ಹೋರಾಡುತ್ತಾನೆ.

ಆದರೆ ಸತ್ಯನ ಮೂಲ ಕುಟುಂಬವಿರುವುದು ತುಳುನಾಡಿನಲ್ಲಿ. ಈತನ ಮಂಜೊಟ್ಟಿ ಗುತ್ತು ಮನೆತನ ಕಥೆಯೊಂದಿಗೆ ಕಂಬಳದ ಲೋಕ ತೆರೆದುಕೊಳ್ಳುತ್ತದೆ. ದುಬೈನಲ್ಲಿ ನಡೆಯುವ ಕಾಳಗಕ್ಕೂ ಇಲ್ಲಿನ ಶಿವರಾಮಣ್ಣನ ಕುಟುಂಬದ ಕಥೆಗೂ ಒಂದು ಕೊಂಡಿಯಿದೆ. ಹೀಗಾಗಿ ಅಲ್ಲಿನ ಕಾಳಗದ ಬಿಸಿ ಇಲ್ಲಿಗೂ ತಟ್ಟುತ್ತದೆ. 68 ವರ್ಷಗಳ ಹಿಂದೆ ಎರಡು ಕುಟುಂಬಗಳ ನಡುವಿನ ಕಲಹದಿಂದ ನಿಂತಿದ್ದ ಮಂಜೊಟ್ಟಿ ಗುತ್ತಿನ ಕಂಬಳವೇ ನಡೆಯುತ್ತಿರುವ ಅನಾಹುತಗಳಿಗೆ ಕಾರಣವೆಂಬುದು ದೈವದಲ್ಲಿ ಪ್ರಶ್ನೆಯಿಟ್ಟಾಗ ಗೊತ್ತಾಗುತ್ತದೆ. ಮಂಜೊಟ್ಟಿ ಗುತ್ತಿನ ಶಿವರಾಮಣ್ಣ ತಮ್ಮ ಪೂರ್ವಿಕರ ಕಂಬಳವನ್ನು ಮತ್ತೆ ಪ್ರಾರಂಭಿಸಲು ತಯಾರಾಗುತ್ತಾನೆ. ಆಗ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ಒಟ್ಟಾರೆ ಸಾರಾಂಶ.




ಕಂಬಳದ ದೃಶ್ಯ ವೈಭವವನ್ನು ಕಣ್ತುಂಬಿಕೊಳ್ಳುವುದು ಬಹಳ ಸುಲಭ. ಆದರೆ ಕಂಬಳ ಅಷ್ಟು ಸುಲಭಕ್ಕೆ ನಡೆಯುವುದಿಲ್ಲ. ಅದರ ಹಿಂದಿನ ಪರಿಶ್ರಮ ಸಾಕಷ್ಟಿದೆ. ಅದಕ್ಕೆ ಕೋಣಗಳನ್ನು ಸಿದ್ಧಗೊಳಿಸುವ ವಿಧಾನ ಬಹಳ ಸೊಗಸಾಗಿದೆ. ಕಂಬಳದ ಪೂರ್ವತಯಾರಿ, ಅದರ ಹಿಂದಿನ ನಂಬಿಕೆ, ಆಚರಣೆಗಳನ್ನು ನಿರ್ದೇಶಕರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಇದರ ಜೊತೆಜೊತೆಗೆ ತುಳುನಾಡಿನ ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸುತ್ತ ಹೋಗಿದ್ದಾರೆ. ಈ ಪಯಣದಲ್ಲಿ ಅಲ್ಲಲ್ಲಿ ಸಾಕ್ಷ್ಯಚಿತ್ರದ ಅನುಭವ ನೀಡುವ ಕಥೆಯನ್ನು ಇನ್ನಷ್ಟು ಸಿನಿಮೀಯವಾಗಿಸುವ ಅವಕಾಶ ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರಿಗಿತ್ತು. ಕಂಬಳದ ಹಿಂದಿರುವ ಸ್ಥಳೀಯ ರಾಜಕೀಯ, ಈ ಕ್ರೀಡೆಯನ್ನು ನಿಲ್ಲಿಸಲು ಪ್ರಾಣಿ ದಯಾ ಸಂಘದವರ ಕಾನೂನು ಹೋರಾಟ, ಇದರ ಮಧ್ಯೆ ಜಾತಿ ರಾಜಕೀಯ, ಬೆಟ್ಟಿಂಗ್ ಜಗತ್ತು ಹಾಗೂ ಸ್ಥಳೀಯ ಹಾಸ್ಯ ಮುಂತಾದ ಅಂಶಗಳನ್ನು ಕಥೆಯಲ್ಲಿ ತಂದಿದ್ದಾರೆ ಬಾಬು ಅಣ್ಣ.

ಕಂಬಳ ನಿಲ್ಲಿಸಬೇಕೆಂದು ಪ್ರಾಣಿ ದಯಾ ಸಂಘದವರ ನ್ಯಾಯಾಲಯದ ಮೆಟ್ಟಿಲು ಏರಿದಾಗ ನ್ಯಾಯವಾದಿಗಳಾಗಿ ಪ್ರಕಾಶ್‌ರಾಜ್, ರವಿಶಂಕರ್ ನಡೆಸುವ ವಾದ ವಿವಾದ ಒಂದಷ್ಟು ವಿಚಾರಗಳನ್ನು ಹೇಳುತ್ತ ಪ್ರೇಕ್ಷಕರನ್ನು ರಂಜಿಸುತ್ತದೆ. ಕೋಣ ಓಡಿಸುವ ಸಮುದಾಯದ ಯುವಕರಿಬ್ಬರ ಪ್ರೇಮಕಥೆಯ ಸನ್ನಿವೇಶಗಳು, ಅಲ್ಲಿ ಬರುವ ಹಾಡುಗಳು ಮುಖ್ಯ ಕಥೆಗೆ ಹೆಚ್ಚು ಕೊಡುಗೆ ನೀಡದೆ ಅನಾವಶ್ಯ ಎಂಬ ಭಾವನೆ ಮೂಡಿಸುತ್ತವೆ.

Vol. 41 No. 39 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news